
ಕಲ್ಯಾಣ ಕಿರಣ

ಜುಲೈ-2008

ಬೆಲೆ-10.00





ಮೈಸೂರಿನ ಶರಣೆ. ಮಾತೆ ಗೌರಾದೇವಿಯವರಿಗೆ ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಮಾತೆ ಗಂಗಾದೇವಿಯವರಿಂದ ಜಂಗಮದೀಕ್ಷೆ ಪ್ರದಾನ ಸಮಾರಂಭ. ಪೂಜ್ಯ ದಯಾನಂದ ಸ್ವಾಮೀಜಿ, ಸುಮಂಗಲಿ ಸೇವಾಶ್ರಮದ ಶರಣೆ. ಎಸ್.ಜಿ. ಸುಶೀಲಮ್ಮ ಚಿತ್ರದಲ್ಲಿದ್ದಾರೆ







ಶರಣೆ. ಮಾತೆ ಗೌರಾದೇವಿಯವರ ಜಂಗಮದೀಕ್ಷೆ ಸಮಾರಂಭದಲ್ಲಿ ಉಪಸ್ಥಿತರಿದ್ದ ಕೆ.ಎಸ್.ಭಗವಾನ್. ಡಾ|| ಗೋಪಾಲ್. ಪೂಜ್ಯ ದಯಾನಂದ ಸ್ವಾಮೀಜಿ. ಎಸ್.ಜಿ. ಸುಶೀಲಮ್ಮ, ಡಾ|| ದೇ. ಜವರೇಗೌಡ. ಮಾಜಿ ಶಾಸಕ. ಸೋಮಶೇಖರ ಮತ್ತಿತರರು..

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-38 ಬಸವ ಶಕೆ-875 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-6 ಜುಲೈ 2008 ವಾರ್ಷಿಕ ಚಂದಾ 100/- ರೂ.

ಅವತಾರ ಪುರುಷ ಬಸವಣ್ಣ

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಮಿಕ್ಕು ಅವರಿಗೆ ಲೆಕ್ಕಕ್ಕೆ ಕಡೆಯಿಲ್ಲದೆ ಮಾಡಿ,
ಹೊಕ್ಕು ಭಕ್ತಿಯಲ್ಲಿ, ಲೆಕ್ಕ ತಪ್ಪದೆ ಅವತಾರದಲ್ಲಿ ಬಂದು,
ಮರ್ತ್ಯಕ್ಕೆ ಬಸವೇಶ್ವರನೆಂಬ ಗಣನಾಥ ನಾಮಮಂ ಪಡೆದು,
ಭಕ್ತರಿಗೆ ಮುಖ್ಯವಾಗಿ ಭಕ್ತಿಯಂ ತೋರಿ,
ಸತ್ಯದ ಬಟ್ಟೆಯಂ ಕಾಣದ, ಚಿದ್ಘನಲಿಂಗವ ಹೊಗಲರಿಯದೆ,
ಬದ್ಧಕತನವನು ಸುಬದ್ಧವ ಮಾಡದೆ,
ಶುದ್ಧಶೈವ ಕಪ್ಪಡಿಯ ಸಂಗಮನಾಥನಲ್ಲಿ,
ಐಕ್ಯವಾದ ಚಿದ್ರೂಪ ಚಿತ್ಪ್ರಕಾಶ ಘನಲಿಂಗ,
ಕೈಯಲ್ಲಿದ್ದಂತೆ ಹೊದ್ದಿದನೇಕ ರುದ್ರಮೂರ್ತಿಯಲ್ಲಿ.
ರಜತಾದ್ರಿಯಲ್ಲಿರ್ದು ಸುಬದ್ಧವಾಗಿ ಪ್ರಳಯವಾಗಿತ್ತು ರುದ್ರಲೋಕವೆಲ್ಲಾ.
ರುದ್ರಗಣಂಗಳೆಲ್ಲರೂ ಮರ್ದನಂಗೆಯ್ದಲ್ಲಿ,
ಸುದ್ದಿಯ ಹೇಳುವರನಾರನೂ ಕಾಣೆ.
ಇನ್ನಿದ್ದವರಿಗೆ ಬುದ್ಧಿ ಇನ್ನಾವುದೊ ?
ಶುದ್ಧ ಶೈವವ ಹೊದ್ದದೆ, ಪೂರ್ವ ಶೈವವನಾಚರಿಸದೆ,
ಮಾರ್ಗ ಶೈವವ ಮನ್ನಣೆಯ ಮಾಡದೆ, ವೀರಶೈವವನಾರಾಧಿಸದೆ,
ಆದಿ ಶೈವವನನುಕರಿಸದೆ,
ಭೇದಿಸಬಾರದ ಲಿಂಗ ಕರದಲ್ಲಿದ್ದು,
ಕಂಗಳಿನಲ್ಲಿ ನಿಂದು, ಮನದಲ್ಲಿ ಸಿಂಹಾಸನಂಗೆಯ್ದು
ಸಕಲೇಂದ್ರಿಯವ ಮರೆದು,
ಕಾಯಜೀವನ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ,
ಬೇರೊಂದರಸಲಿಲ್ಲವಾಗಿ ಬಯಕೆಯುರತು,
ಭವ ಹಿಂಗೆ ತಾನೆನ್ನದೆ ಇದಿರೆನ್ನದೆ, ಏನೂ ಎನ್ನದ ಲಿಂಗೈಕ್ಯಂಗೆ
ಸ್ವಾನುಭಾವದಿಂದ ನಮೋ ನಮೋ ಎಂಬೆ ನಿಃಕಳಂಕ ಮಲ್ಲಿಕಾರ್ಜುನಾ.

ಗುರು ನಿಷ್ಠೆ ಲಿಂಗ ನಿಷ್ಠೆ ಜಂಗಮ ನಿಷ್ಠೆ
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗಲಿಂಗ ನಿಷ್ಠೆ
ವೀರ ಧೀರಂಗಲ್ಲದಾಗದು
ಇದು ಸಂಗನ ಬಸವಣ್ಣನಿಂದ ಬಂದ ಸಂತತಿಗಲ್ಲದಾಗದು
ಬ್ರಹ್ಮೇಶ್ವರ ಲಿಂಗವನರಿವುದಕ್ಕೆ
ತ್ರಿಗುಣ ಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ.

-ಬಾಹೂರ ಬೊಮ್ಮಣ್ಣ ಸಂ.ವ.ನಂ. 3/268

ಪರುಷ ಸೋಂಕಿದ ಬಳಿಕ ಕಾರ್ಬೊನ್ನದ ಕೇಡು ನೋಡಿರಯ್ಯಾ
ಜ್ಯೋತಿ ಸೋಂಕಿದ ಬಳಿಕ ತಮಂಧದ ಕೇಡು ನೋಡಿರಯ್ಯಾ
ಅಮೃತ ಸೋಂಕಿದ ಬಳಿಕ ರೋಗದ ಕೇಡು ನೋಡಿರಯ್ಯಾ
ನಮ್ಮ ಯೋಗಿನಾಥನ ಸೋಂಕಿದ ಬಳಿಕ ಭವದ ಕೇಡು ನೋಡಿರಯ್ಯಾ.

ಕಿರಣಗನ್ನಡಿ

ಯೋಗಾಂಗ ತ್ರಿವಿಧಿ

ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ
ಸುರಿವ ಅಮೃತವ ದಣಿದುಂಡ । ಕಾರಣವು
ತೊರೆದನು ಜನನ ಮರಣಗಳ ॥

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಂಪಾದಕೀಯ : - ಮಾತಾಜಿ

1.ಲಿಂಗಾಯತ - ವೀರಶೈವ ಬೇರೆ ಬೇರೆ

ಲಿಂಗಾಯತವು ಅಹಿಂದು ಧರ್ಮ

ವಿಜಯ ಕರ್ನಾಟಕ ಪತ್ರಿಕೆಯ 2008ರ ಜೂನ್ 18 ಮತ್ತು 19ರ ಸಂಚಿಕೆಗಳಲ್ಲಿ ಡಾ॥ ಎಂ.ಚಿದಾನಂದ ಮೂರ್ತಿಯವರ ಒಂದು ಲೇಖನ ವೀರಶೈವ -ಲಿಂಗಾಯತ : ಒಡಕು ಬೇಡ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಗೊಂಡಿದೆ. ಹಳೆಯ ರಾಗವನ್ನೇ ಕೆಟ್ಟ ಗ್ರಾಮೋಫೋನ್ ಪ್ಲೇಟಿನಂತೆ ತಿರುತಿರುಗಿ ಅದು ಅಲ್ಲೇ ಬಂದು ನಿಲ್ಲುವಂತೆ ಹಾಡಿದ್ದಾರೆ. ಅವರು ಪೂರ್ವ ನಿರ್ಧಾರಿತ (Predeter-mined) ಆಲೋಚನೆಗಳನ್ನು ಪುನಃ ಪುನಃ ಹೇಳುತ್ತಿದ್ದಾರೆ. ಅವರದು ಈಗ ಮುಕ್ತ ಮನಸ್ಸು (Open mind) ಆಗದೆ ಮುಚ್ಚಲ್ಪಟ್ಟ (Closed) ಮನಸ್ಸು ಆಗಿರುವುದರಿಂದ ಯಾವ ಸತ್ಯ ಸಂಗತಿಗಳನ್ನು ಮಂಡಿಸಿದರೂ ಅದನ್ನು ಸ್ವೀಕರಿಸುವ ಸ್ಥಿತಿಯಲ್ಲಿ ಅವರಿಲ್ಲ. ಹೀಗಾಗಿ ಡಾ॥ ಚಿದಾನಂದ ಮೂರ್ತಿಯವರ ಲೇಖನಕ್ಕೆ ಉತ್ತರಿಸುವುದು ಒಂದು ವ್ಯರ್ಥ ಪ್ರಯತ್ನವೇ ಆದರೂ ಕೆಲವು ಜನರಾದರೂ ನಿರೀಕ್ಷಿಸುತ್ತಾರಲ್ಲ ಎಂದು ಉತ್ತರಿಸಬೇಕಾಗುತ್ತದೆ.

ಡಾ॥ ಚಿ.ಮೂ ಜರ್ಮನಿಯ ಗೋಬೆಲ್ಸನ ಉದಾಹರಣೆಯಿಂದ ಲೇಖನವನ್ನು ಆರಂಭಿಸಿದ್ದಾರೆ. ಒಂದು ಸುಳ್ಳನ್ನು ಹಲವು ಬಾರಿ ಹೇಳುತ್ತಾ ಹೋದಾಗ ಜನರು ಅದನ್ನು ಸತ್ಯವೆಂದು ನಂಬುತ್ತಾರೆ ಎಂದು ತಿಳಿಸಿ, ಹಾಗೆ ವೀರಶೈವ - ಲಿಂಗಾಯತ ಬೇರೆ ಬೇರೆ ಎಂದು ಗೋಬೆಲ್ಸ ರೀತಿ ಪ್ರಚಾರ ಮಾಡಲಾಗುತ್ತಿದೆ ಎಂದು ಬರೆದಿದ್ದಾರೆ. ಈ ಸದ್ಯದಲ್ಲಿ ಗೋಬೆಲ್ಸನ ಪಾತ್ರವನ್ನು ಬಹಳ ಚೆನ್ನಾಗಿ ನಿರ್ವಹಿಸುತ್ತಿರುವವರು ಡಾ॥ ಚಿ.ಮೂ ಅವರೆ. ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದಲ್ಲಿ ವೀರಶೈವ ಪದವನ್ನು ತೂರಿಸುವ ಕೆಲಸ 15ನೆಯ ಶತಮಾನದಲ್ಲಿ ಆರಂಭವಾಯಿತು. ಸಮಾಜದಲ್ಲಿ ಈ ಪದವನ್ನು ಸೇರಿಸುವ ಪ್ರಯತ್ನ ಪಂಚಾಚಾರ್ಯ ಮಠಗಳವರಿಂದ ಆಯಿತು; ಮತ್ತು ಅತಿ ಹೆಚ್ಚಾಗಿ ಆದುದು ವೀರಶೈವ ಮಹಾಸಭೆಯು ಹಾನುಗಲ್ ಶ್ರೀಗಳಿಂದ ಸ್ಥಾಪನೆಯಾದ ಮೇಲೆ. ಇವರು ಲಿಂಗಾಯತ ಧರ್ಮ, ಶರಣ ಸಂಸ್ಕೃತಿಯ ಶುಚಿತ್ವ ಕೆಡಿಸಲೆಂದೇ ವೀರಶೈವ ಪದವನ್ನು ತಂದು ಲಿಂಗಾಯತರ ಕಿವಿಯ ಮೇಲೆ ಹಾಕತೊಡಗಿದರು; ಸಾಹಿತ್ಯದಲ್ಲಿ ತೂರಿಸತೊಡಗಿದರು. ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷರಾದ ಶರಣ. ಭೀಮಣ್ಣ ಖಂಡ್ರೆ, ರಂಭಾಪುರಿ ಶ್ರೀಗಳು ಇವರೆಲ್ಲರ ಶಾಲಾ ದಾಖಲಾತಿಯಲ್ಲಿ ಲಿಂಗಾಯತ ಎಂದೇ ನಮೂದಾಗಿದೆ ಎಂದು ಕೇಳಿದ್ದೇನೆ. ಗ್ರಾಮೀಣ ಪ್ರದೇಶದಲ್ಲಿ ಬೀದರ್‌ದಿಂದ ಹಿಡಿದು ಮೈಸೂರು, ಚಾಮರಾಜ ನಗರದ ವರೆಗೂ ಜನ ಜೀವನದಲ್ಲಿ ರೂಢಿಯಲ್ಲಿರುವದು ಲಿಂಗಾಯತ ಪದ ಬಳಕೆಯೆ! 250 ವರ್ಷಗಳ ಜನಗಣತಿಯ ದಾಖಲೆಯಲ್ಲಿ ಸಹ ಇಷ್ಟಲಿಂಗಧಾರಿಗಳ ಸಮಾಜ ಲಿಂಗಾಯತ ಎಂದೇ ಉಲ್ಲೇಖಗೊಂಡಿದೆ. ಇದಕ್ಕೆ ಕೃತಕವಾಗಿ ವೀರಶೈವದ ಬುರ್ಖಾ ತೊಡಿಸಲು ಭಯಂಕರ ಪ್ರಯತ್ನ ಮಾಡುತ್ತಿರುವ ಡಾ॥ ಚಿ.ಮೂ ಗೋಬೆಲ್ಸ್‌ನ ಅಪರಾವತಾರವಲ್ಲವೆ ?

18ನೆಯ ಶತಮಾನದಲ್ಲಿ ಚತುರಾಚಾರ್ಯ ಪುರಾಣ ರಚನೆಯಾಯಿತು. ಅವರು ನಾಲ್ವರೂ ಶರಣ ಪರಂಪರೆಯಲ್ಲಿ ಖ್ಯಾತರಾದವರು. 20ನೆಯ ಶತಮಾನದ ಆದಿ ಭಾಗದಲ್ಲಿ ರೇಣುಕಾದಿ ಪಂಚಾಚಾರ್ಯರು ಕಾಶೀನಾಥ ಶಾಸ್ತ್ರಿಗಳ ಕರ ಸಂಜಾತರಾಗಿ ಲೇಖನಿ ಮೂಲಕ ಹುಟ್ಟಿದರು. ಈ ಕಲ್ಪನೆಯನ್ನು ಹೇಗೆ ಹರಡಿಸಿದರೆಂದರೆ ಅನೇಕ ಮೂಢ ಭಕ್ತರಿಗೆ ಇಂದು ಆದಿ ಪಂಚಾಚಾರ್ಯರ ಅಸ್ತಿತ್ವದಲ್ಲಿ ಅಪಾರ ನಂಬುಗೆ. ವಿದ್ವಾಂಸರಿಗೆ ಗೊತ್ತು ಆದಿ ಪಂಚಾಚಾರ್ಯರು ಕೇವಲ ಕಾಲ್ಪನಿಕ ಎಂದು. ಪಂಚಪೀಠಗಳವರು ಪ್ರಯೋಗಿಸಿದ ಗೋಬಲ್ಸ್ ತಂತ್ರ ಈಗ ಯಶಸ್ವಿಯಾಗಿದೆಯಲ್ಲವೆ?

ತಾತ್ವಿಕವಾಗಿ ಲಿಂಗಾಯತ ವೀರಶೈವ ಸ್ಪಷ್ಟವಾಗಿ ಬೇರೆ ಬೇರೆ. ತತ್ವಜ್ಞಾನ, ನಂಬಿಕೆ, ಯೋಗ, ಸಮಾಜ ಎಲ್ಲ ದೃಷ್ಟಿಯಿಂದಲೂ ಎರಡೂ ಬೇರೆಯೆ ಇವೆ. ಈ ಬಗ್ಗೆ ಕಲ್ಯಾಣ ಕಿರಣದಲ್ಲಿ ಸವಿಸ್ತಾರವಾಗಿ ಬರೆದಿದ್ದೇನೆ. ಡಾ॥ ಚಿ.ಮೂ. ತಾತ್ವಿಕವಾಗಿ ವಿಶ್ಲೇಷಿಸದೆ ವೀರಶೈವ ಪದವನ್ನು ಅವರು ಬಳಸಿದ್ದಾರೆ, ಇವರು ಬಳಸಿದ್ದಾರೆ ಎಂದು ಹೆಸರುಗಳನ್ನು ಹೇಳುತ್ತಾರೆ. ಶರಣ. ಫ.ಗು.ಹಳಕಟ್ಟಿಯವರಾಗಲಿ ಶಿ.ಶಿ.ಬಸವನಾಳರಾಗಲಿ ವೀರಶೈವ ಪದವನ್ನು ಬಳಸಿದ್ದು ಹಾನಗಲ್ ಶ್ರೀಗಳು ಹುಟ್ಟಿಸಿದ ಭ್ರಾಂತಿಯ ಪರಿಣಾಮದಿಂದ. ವಚನ ಸಾಹಿತ್ಯ ಲಭ್ಯವಾಗದಿದ್ದರೂ ಸಮಾಜದಲ್ಲಿ ರೂಢಿಗೊಂಡು ಬಂದಿದ್ದ ಪದ ಲಿಂಗಾಯತ ಎಂಬುದು. ನೀಲಗಿರಿ ಗುಡ್ಡಗಳಲ್ಲಿ ಹಟ್ಟಿಗಳಲ್ಲಿ ಲಿಂಗಾಯತರಿದ್ದಾರೆ. ಅವರಲ್ಲಿ ಕೇವಲ ಕೆಲವರನ್ನು ಬಿಟ್ಟರೆ ವಚನ ಸಾಹಿತ್ಯ ಉಳಿದವರಿಗೆ ಗೊತ್ತೇ ಇಲ್ಲ. ಆದರೆ ಅವರಿಗೆ ತಾವು ಲಿಂಗಾಯತರೆಂದು

ಗೊತ್ತು. ಬಸವಣ್ಣನವರು ತಮ್ಮ ಧರ್ಮಗುರುವೆಂದು ಗೊತ್ತು. ಕರ್ನಾಟಕದಲ್ಲಿ ಬಸವ ಜಯಂತಿಯನ್ನು ಆಚರಿಸುವ ಮೊದಲೇ ನೀಲಗಿರಿ ಲಿಂಗಾಯತರು ಬಸವ ಜಯಂತಿಯನ್ನು ಸಾಂಪ್ರದಾಯಿಕವಾಗಿ ಆಚರಿಸುತ್ತಿದ್ದರು. ಅವರು ಅದೊಂದೇ ಹಬ್ಬ ಆಚರಿಸುತ್ತಿದ್ದುದಂತೆ ಮತ್ತು ಅಂದು ಹೊಸಬಟ್ಟೆಗಳನ್ನು ಧರಿಸುತ್ತಿದ್ದರಂತೆ. ಡಾ|| ಎಂ.ಎಂ.ಕಲಬುರ್ಗಿ, ಡಾ|| ಎನ್.ಜೆ.ಮಹಾದೇವಪ್ಪನವರಂತಹ ವಿದ್ವಾಂಸರು ಬಹಳ ಕಾಲದವರೆಗೆ ಈ ವೀರಶೈವದ ಭ್ರಾಂತಿಗೆ ಒಳಗಾಗಿದ್ದರು. ಈಗ ಅವರು ಹೊರಬಂದಿದ್ದಾರೆ. ನಾನು, ಪೂಜ್ಯ ಅಪ್ಪಾಜಿಯವರು ವೀರಶೈವ ಪದದ ಪ್ರಭಾವದಲ್ಲಿ ಸಿಕ್ಕಿಬಿದ್ದಿದ್ದೆವು. ಮೊಟ್ಟ ಮೊದಲ ಬಾರಿ ನನ್ನ ಬುದ್ಧಿಯ ಮೇಲೆ ಬೆಳಕು ಬಿದ್ದುದು 1973ರಲ್ಲಿ, ತಮಿಳು ನಾಡಿನ ವೀರಶೈವ ಮಠಗಳನ್ನು, ಸ್ವಾಮಿಗಳನ್ನು ನೋಡಿದ ಮೇಲೆ. ಅಯ್ಯೋ, ಎಂಥಾ ಅಜ್ಞಾನ ! ತಮಗೆ ಸಂಬಂಧವಿಲ್ಲದ ಒಂದು ಹೆಸರನ್ನು ಅಂಟಿಸಿಕೊಂಡು ಲಿಂಗಾಯತ ಸಮಾಜದ ಓಡಾಡ (ಒದ್ದಾಡ) ತೊಡಗಿದೆಯಲ್ಲ ಎಂದು ಖೇದವೆನಿಸಿ, ಹೊಸ ದಿಕ್ಕಿನಿಂದ ಅಧ್ಯಯನ ಮಾಡಿದಾಗ ಲಿಂಗಾಯತವು ಒಂದು ಧರ್ಮ, ವೀರಶೈವ ಒಂದು ಪಂಥ, ಸಪ್ತಶೈವಗಳಲ್ಲಿ ಒಂದು ಎಂಬುದು ಮನವರಿಕೆಯಾಯಿತು. ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಮೊದಲು ಬರೆದ ಲಿಂಗ ತತ್ವ ದರ್ಪಣ, ಅಕ್ಕನ ಪ್ರವಚನ, ನಾನು ಬರೆದ ಬಸವ ತತ್ವ ದರ್ಶನ ಇವುಗಳಲ್ಲಿ ವೀರಶೈವ ಪದ ಬಳಸಲಾಗಿತ್ತು. ಇದನ್ನು ಉದಾಹರಿಸಿ ಡಾ|| ಚಿ.ಮೂ. ಸ್ವತಃ ಲಿಂಗಾನಂದ ಸ್ವಾಮಿಗಳೇ ಬಳಸಿದ್ದಾರಲ್ಲ ಎಂದು ಉಲ್ಲೇಖಿಸಬಹುದು. ಅಧ್ಯಯನದ ನಂತರ ತಳೆದ ನಿಲುವು, ಅಭಿಪ್ರಾಯ ಬಹಳ ಮುಖ್ಯ, ಎಂದೋ ಹೊಂದಿದ್ದ ಅಭಿಪ್ರಾಯ ಮುಖ್ಯವಲ್ಲ.

ಧ್ರುವೀಕರಣಕ್ಕೆ ಸಮಯ ಸನ್ನಿಹಿತವಾಗಿದೆ

ಡಾ|| ಚಿ.ಮೂರಂತಹ ಸಂಪ್ರದಾಯ ಬದ್ಧರ ಉದ್ದೇಶ ಲಿಂಗಾಯತ ಸಮಾಜವು ಹಿಂದು ಕಕ್ಷೆಯಿಂದ ಹೊರಗೆ ಹೋಗದೆ ಹಿಂದು ಧರ್ಮದೊಳಗಣ ಒಂದು ಪಂಥವಾಗಿ ಇರಬೇಕು ಎಂಬುದು. ಹೀಗಿರಬೇಕಾದರೆ ವೀರಶೈವ ಪದವನ್ನು ಗಟ್ಟಿಯಾಗಿ ಹಿಡಿದು ವೀರಶೈವದ ಮೂಲವನ್ನು ಆಗಮಗಳಲ್ಲಿ ಹುಡುಕಬೇಕು. ವೇದಾಗಮ ಪುರಾಣಗಳನ್ನು ಒರೆಗೆ ಇಕ್ಕಿ ಸ್ವತಂತ್ರ ಸಂವಿಧಾನವಾಗಿ ವಚನ ಸಾಹಿತ್ಯವನ್ನು ನೀಡಿದ ಗುರು ಬಸವಣ್ಣನವರು ಲಿಂಗಾಯತ ಧರ್ಮ ಎಂಬ ಪ್ರಗತಿಪರ ಧರ್ಮವನ್ನು ಕೊಟ್ಟಿದ್ದಾರೆ. 19ನೆಯ ಶತಮಾನದ ಕಡೆಯ ದಶಕದಿಂದ 20ನೆ ಶತಮಾನ ಪೂರ್ತಿ ವೀರಶೈವವಾದದ ಧೂರ್ತರು ಲಿಂಗಾಯತ ಧರ್ಮ -ಸಮಾಜಗಳಿಗೆ ಹೊದ್ದಿಸಿರುವ ಮುಸುಕು ಇದೀಗ ಸರಿಯತೊಡಗಿದೆ. ಅದಕ್ಕಾಗಿ ಚಿ.ಮೂರಂಥವರು ಬಾಲ ಸುಟ್ಟ ಬೆಕ್ಕಿನಂತೆ ಮುಲುಗಾಡುತ್ತಿದ್ದಾರೆ. ಆಗಮೋಕ್ತ ವೀರಶೈವವನ್ನು ನಚ್ಚಿಕೊಂಡು, ಕಚ್ಚಿಕೊಂಡು ಇವರು ಹಿಂದೂದಲ್ಲಿ ಒಂದು ಪಂಥವಾಗಿರಲಿ. ವಚನೋಕ್ತ ಲಿಂಗಾಯತಕ್ಕೆ ತಳಕು ಹಾಕಿಕೊಂಡು ಲಿಂಗಾಯತ ಧರ್ಮೀಯರಿಗೆ ಅನ್ಯಾಯ ಮಾಡುವುದು ಬೇಡ. ತನ್ನದೇ ಆದ ಧಾರ್ಮಿಕ ಸಾಹಿತ್ಯವಿಲ್ಲದೆ ವೇದಾಗಮಗಳ ಊರು ಗೋಲುಗಳ ನೆರವಿನಿಂದ ನಡೆಯುವ ವೀರಶೈವವೆತ್ತ? ಪರಿಪೂರ್ಣ ಶರೀರಿಯಾಗಿ ವಚನ ವಾಙ್ಮಯದ ಕಿರೀಟ ತೊಟ್ಟ ಸ್ವತಂತ್ರ ಸಾರ್ವಭೌಮನಾದ ಲಿಂಗಾಯತಕ್ಕೆ ಓಟದಲ್ಲಿ ತೊಡರುಗಾಲು ಹಾಕುವುದು ಸರಿಯಲ್ಲ. ವೀರಶೈವ ಪದ ಹಿಡಿದು ಎಷ್ಟು ಶತಮಾನ ಕಾಲ ಪ್ರಯತ್ನಿಸಿದರೂ ಸ್ವತಂತ್ರ ಧರ್ಮದ ಮಾನ್ಯತೆ ಹೊಂದಲು ಸಾಧ್ಯವಿಲ್ಲ. ಆದ್ದರಿಂದ ಕೇವಲ ಒಂದು ಜಾತಿ (ಜಂಗಮ)ಯ ಹಿತಾಸಕ್ತಿಯ ರಕ್ಷಣೆಗಾಗಿ ವೀರಶೈವ ಪದಕ್ಕೆ ಕಚ್ಚಿಕೊಂಡು ಆಗಬಹುದಾದ ಸಾಮಾಜಿಕ ಒಳ್ಳಿತನ್ನು ನಿರ್ಲಕ್ಷಿಸುವುದು ಸೂಕ್ತವಲ್ಲ.

ಲಿಂಗಾಯತ ಸಮಾಜದಲ್ಲಿ 3 ಬಗೆಯ ಜನರನ್ನು ಇಂದು ಕಾಣಬಹುದು.

1. ಹಿಂದು ಕಕ್ಷೆಯಿಂದ ಹೊರಹೋಗಲು ಇಷ್ಟವಿಲ್ಲದೆ, ವೀರಶೈವ ಪದ ಹಿಡಿದು ಇದನ್ನು ಹಿಂದುದೊಳಗಣ ಒಂದು ಪಂಥವಾಗಿ ಮಾಡಬೇಕು ಎನ್ನುವ ಡಾ|| ಚಿದಾನಂದ ಮೂರ್ತಿಯಂಥವರು.

2. ಲಿಂಗಾಯ್ಥತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಬೇಕು ಎಂಬ ಆಕಾಂಕ್ಷೆ ಹೊಂದಿದ್ದರೂ ಲಿಂಗಾಯತರಲ್ಲಿರುವ ಶ್ರೀಮಂತ ವೀರಶೈವ ವರ್ಗದವರನ್ನು ಕಳೆದುಕೊಳ್ಳಲು ಇಷ್ಟವಿಲ್ಲದೆ ಲಿಂಗಾಯತ, ವೀರಶೈವಗಳನ್ನು ಸಮಾನಾರ್ಥದಲ್ಲಿ ಬಳಸುವವರು. ಉದಾ: ಅಖಿಲ ಭಾರತ ವೀರಶೈವ ಮಹಾಸಭೆ

3. ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಬೇಕು. ಬಸವಣ್ಣನವರೇ ಧರ್ಮಗುರು, ವಚನ ಸಾಹಿತ್ಯವೇ ಧರ್ಮ ಸಂಹಿತೆ ಎಂದೊಪ್ಪಿದರೆ ಮಾತ್ರ ಈ ಮಾನ್ಯತೆ ಸಿಗಲು ಸಾಧ್ಯ ಎನ್ನುವ ತತ್ವ ನಿಷ್ಠರು. ಉದಾ: ಬಸವ ಧರ್ಮ ಪೀಠ, ಲಿಂಗಾಯತ ಧರ್ಮ ಮಹಾಸಭಾ, ಬೆಳಗಾವಿಯ ಲಿಂಗಾಯತ ಅಧ್ಯಯನ ಕೇಂದ್ರ ಮುಂತಾದವು.

ಚಿ. ಮೂ ಅವರು ವೀರಶೈವ ಪದ ಬಳಕೆ ಮಾಡುತ್ತಿರುವವರೆಂದು ಕೆಲವು ಸ್ವಾಮಿಗಳ ಹೆಸರು

ಉಲ್ಲೇಖಿಸಿದ್ದಾರೆ. ಅದು ನೂರಕ್ಕೆ ನೂರು ಸತ್ಯ. ಏಕೆಂದರೆ ಅವರಲ್ಲಿ ಬಹುಪಾಲು ಸ್ವಾಮಿಗಳು ಬಹುದೇವತೋಪಾಸಕರು. ಇಷ್ಟಲಿಂಗ ಪೂಜೆ ಮಾಡುವವರಾದರೂ ತತ್ವನಿಷ್ಠರಲ್ಲ, ಏಕದೇವೋಪಾಸಕರಲ್ಲ. ಗಣಪತಿ ಪೂಜೆ, ನವಗ್ರಹ ಪೂಜೆ ಮಾಡುವವರು, ಮಠಗಳಲ್ಲಿ ತನ್ನ ಧರ್ಮಕ್ಕೆ ವಿರುದ್ಧವಾಗಿ ಹೋಮ -ಯಜ್ಞ ಮಾಡಿಸುವವರು. ಯಾವ ಗುಡಿಗಳನ್ನು ಬೇಕಾದರೂ ಕಟ್ಟಿಸುವವರು, ಕಳಸಾರೋಹಣಕ್ಕೆ ಧಾವಿಸುವವರು. ಇವರನ್ನು, ಇವರ ಮಾತುಗಳನ್ನು ಏಕದೇವೋಪಾಸಕರು, ತತ್ವಪ್ರೇಮಿಗಳು, ಬಸವ ಪಥಿಕರೂ ಆದ ಲಿಂಗಾಯತರು ನಂಬಬೇಕೆ? ಅನುಸರಿಸಬೇಕೆ?

ಚಿ.ಮೂ ಎಷ್ಟು ಕೆಳಮಟ್ಟಕ್ಕೆ ಇಳಿಯುವ ಜಾತ್ಯಂಧರಾಗುತ್ತಿದ್ದಾರೆಂಬುದಕ್ಕೆ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರ ಬಗ್ಗೆ ಅವರು ಲೇಖನದಲ್ಲಿ ಬರೆದಿರುವ ಮಾತುಗಳೇ ಸಾಕ್ಷಿ. "ಯೌವನದಲ್ಲೇ ಪತ್ನಿಯನ್ನು ಕಳೆದುಕೊಂಡು ವೈರಾಗ್ಯಪರ ಜೀವನವನ್ನು ನಡೆಸಿದ ಸಾಮಾನ್ಯ ವರ್ಗದ ಅಲ್ಲಮ ಸದಾ ಸಂಚಾರಿಯಾಗಿದ್ದ ಒಬ್ಬ ಶ್ರೇಷ್ಠ ನಿರಾಭಾರಿ ವೀರಶೈವ."

ಈ ಜಾತಿವಾದದ ಅಂತರಂಗದ ವಿಷ ಈಗ ಈ ಮಾತಿನ ಮೂಲಕ ಹೊರಬಂದಿದೆ. ವ್ಯೋಮಕಾಯ ಸಿದ್ಧ ಅಲ್ಲಮಪ್ರಭುದೇವರು ದಾರ್ಶನಿಕ ಜಗತ್ತಿನ ದಿಗ್ಗಜ, ಶ್ರೇಷ್ಠ ಯೋಗಿ, ಮಹಾನ್ ಅನುಭಾವಿ. ಲಭ್ಯವಾಗಿರುವ 1412 (ಕರ್ನಾಟಕ ವಿಶ್ವ ವಿದ್ಯಾಲಯದ ಪ್ರಕಟಣೆ) ವಚನಗಳಲ್ಲಿ ಅಲ್ಲಮ ಪ್ರಭುದೇವರು ಅರಿತು ಮರೆತರಾದರೂ ವೀರಶೈವ ಪದವನ್ನು ಬಳಸಿಲ್ಲ. ಅವರನ್ನು ನಿರಾಭಾರಿ ವೀರಶೈವ ಎಂದು ಕರೆಯುವುದರಲ್ಲಿ ಅರ್ಥವಿದೆಯೆ?

ಗುರು ಬಸವಣ್ಣನವರೇ ತಂದೆಯಾಗಿ , ವಚನ ಸಾಹಿತ್ಯವೇ ತಾಯಿಯಾಗಿ ಸಾಗಿ ಬಂದ ಶರಣ ಪರಂಪರೆ ಒಂದು ಪವಿತ್ರ ಕುಟುಂಬ. ಇದೊಂದು ಅವಿಭಕ್ತ ಕುಟುಂಬದಂತಿರುವ ಮಹಾಮನೆ. ಇದನ್ನೊಡೆಯುವ ಮನೆ ಮುರುಕ ಕೆಲಸವನ್ನು ಚಿ.ಮೂ ಮಾಡುವುದು ಸಲ್ಲದು. ಧರ್ಮಗುರು ಬಸವಣ್ಣನವರು, ವೀರ ವೈರಾಗ್ಯನಿಧಿ ಅಲ್ಲಮಪ್ರಭುದೇವರು ಇವರಿಗೆ ಯಕಃಶ್ಚಿತ ವ್ಯಕ್ತಿಗಳು ! ಈ ರೀತಿ ಪರಧರ್ಮೀಯರಾದ ಲಿಂಗಾಯತರಿಗೆ ಅವಮಾನ ಮಾಡುವ ಹೀನ ಕೆಲಸವನ್ನು ಜಾತಿವಾದದ ಪಿತ್ತ ನೆತ್ತಿಗೇರಿ ಅರೆ ಮರುಳಾಗಿರುವ ಅಂಗದ ಮೇಲೆ ಲಿಂಗಧಾರಣೆ ಇಲ್ಲದ ವೀರಶೈವರಾದ ಚಿದಾನಂದ ಮೂರ್ತಿ ಕೈ ಬಿಡಲಿ. ಚಿ.ಮೂ, ಡಾ|| ಶಿವಕುಮಾರ ಸ್ವಾಮಿ, ವಿದ್ಯಾಶಂಕರ್, ಸಾ.ಶಿ.ಮರುಳಯ್ಯ, ಷಣ್ಮುಖಯ್ಯ ಅಕ್ಕೂರು ಮಠ ಮುಂತಾದ ಮತಾಂಧ, ಪಂಚಾಚಾರ್ಯವಾದಿ ಸಾಹಿತಿಗಳ ಲೇಖನಗಳನ್ನು ಓದುವಾಗ ಓದುಗರು ಎಚ್ಚರಿಕೆಯಿಂದಿರುವುದು ಒಳ್ಳೆಯದು. ಏಕೆಂದರೆ ಶರಣರ ಬಗ್ಗೆ ಬರೆಯುತ್ತಲೇ ಶರಣರ ವ್ಯಕ್ತಿತ್ವಕ್ಕೆ ಅಪಚಾರ ಮಾಡುವ ಆಂತರಿಕ ಶತ್ರುಗಳು ಇವರು!

2. ಮೋದಕ ಯಜ್ಞ - ಪಾಪ ಕಾರ್ಯ

ಶಿವಮೊಗ್ಗಕ್ಕೆ ಹೋಗಿದ್ದೆ. ಶರಣೆ. ಅನ್ನಪೂರ್ಣಮ್ಮ ರಾಮಪ್ಪನವರು ಬಸವ ಪುತ್ಥಳಿಗೆ ಕಾಣಿಕೆ ನೀಡಲು ಮನೆಗೆ ಆಹ್ವಾನಿಸಿದ್ದರು. ಕಾಣಿಕೆ ಸ್ವೀಕರಿಸಿ ಹೊರಗೆ ಬರುತ್ತಿರುವಾಗ ಎದುರುಗಡೆ ದೇವಸ್ಥಾನದಿಂದ ಅರ್ಚಕರು ಅವಸರದಲ್ಲಿ ಧಾವಿಸುತ್ತಿದ್ದರು. ನಮ್ಮ ಬಳಿಗೆ ಬಂದರು, ಅಚ್ಚರಿಯಾಯಿತು.

"ಬಲಮುರಿ ಗಣಪತಿ ದೇವಸ್ಥಾನವಿದೆ. ಬಂದು ದರ್ಶನ ಪಡೆದು ಹೋಗಿರಿ." ಒಳ್ಳೇ ತಾಪತ್ರಯ. ರಾವಣೇಶ್ವರನು ತಂದ ಶಿವಲಿಂಗವನ್ನು ಉಪಾಸನೆ ಮಾಡಲು ಅವಕಾಶ ಕೊಡದಂತೆ ಮರಳಲ್ಲಿ ಹುದುಗಿಸಿದ ಪುರೋಹಿತ ಶಾಹಿಯ ಪ್ರತಿನಿಧಿ ಗಣಪತಿ ಕಂಡರೆ ನಮಗೆ ಅಷ್ಟಕ್ಕಷ್ಟೆ ತಾನೆ?

"ಇಲ್ಲ, ಬೇರೆ ಒಂದು ಕಡೆ ಹೋಗುವುದಿದೆ. ಜನರು ಕಾಯುತ್ತಿದ್ದಾರೆ. ಇನ್ನೊಮ್ಮೆ ಬರುತ್ತೇವೆ." ಎಂದು ತಪ್ಪಿಸಿಕೊಳ್ಳಲು ಯತ್ನಿಸಿದೆ. ಅವರು ಬಿಡಲಿಲ್ಲ.

"ಒಳಗಡೆ ಇಂದು ವಿಶೇಷ ಗಣಪತಿ ಹೋಮ ನಡೆಯುತ್ತಿದೆ. ಒಂದು ನಿಮಿಷ ಬಂದು ಹೋಗಿರಿ." ಇನ್ನೂ ಪೀಕಲಾಟ ! ಹೋಮ ಬೇರೆ ನೋಡಬೇಕೆ ?

ಕಾರಿನ ಎದುರಿಗೇ ನಿಂತಿದ್ದಾರೆ. ಸರಿ, ಒಳಗೆ ಹೋದುದಾಯಿತು. ಮನಸ್ಸಿಗೆ ಅಪಾರ ದುಃಖವಾಯಿತು. ಹೋಮ ಕುಂಡದಲ್ಲಿ ಬೆಂಕಿ ಧಗಧಗ ಉರಿಯುತ್ತಿದೆ. ಸುತ್ತಲೂ ಹತ್ತು -ಹನ್ನೆರಡು ಜನ ವಟವಟ ಮಂತ್ರ ಹೇಳುತ್ತಿದ್ದಾರೆ. ಬಟ್ಟಲುಗಳಲ್ಲಿ ತುಪ್ಪ ಇಟ್ಟುಕೊಂಡು ಕಡುಬುಗಳನ್ನು ಎದ್ದಿ ಎದ್ದಿ ಬೆಂಕಿಯಲ್ಲಿ ಎಸೆಯುತ್ತಿದ್ದಾರೆ. ಸಾಕಷ್ಟು ಆಹುತಿಯಾಗಲಿರುವ ಸಾಮಗ್ರಿಗಳು - ಸಮಿತ್ತುಗಳು ಜೋಡಿಸಲ್ಪಟ್ಟಿದ್ದವು. ಎಂಥಾ ಪಾಪದ ದೃಶ್ಯ! ಸಾವಿರಾರು ಕಡುಬುಗಳು ಅಗ್ನಿ ಕುಂಡದಲ್ಲಿ ಸುಡುತ್ತಿದ್ದವು.

"ಅಯ್ಯೋ ಪಾಪಿಗಳೇ, ಈ ವಸ್ತುಗಳನ್ನು ಸುಟ್ಟು ಕಮಟು ಹೊಗೆ ಕುಡಿಯುತ್ತಿರುವ ನಿಮಗೆ

ಹೃದಯವಿಲ್ಲವೆ? ಹೊಟ್ಟೆಗಿಲ್ಲದೆ ಜನ ಸಾಯುತ್ತಿದ್ದಾರೆ. ಇವನ್ನು ತಿನ್ನಲು ಕೊಡಲು ಬರುತ್ತಿರಲಿಲ್ಲವೆ? ಎಂಥಾ ಪಾಪ ಕಾರ್ಯ ಮಾಡುತ್ತಿದ್ದೀರಿ!'' ಎಂದುಕೊಂಡು ಬರುವಾಗ ಮೂಢ ಭಕ್ತಿಯ ದಂಪತಿಗಳು ತಮ್ಮ ಪರಿವಾರದೊಡನೆ ನಮಸ್ಕಾರ ಮಾಡಿದರು. ಆಗ ನಾನು ಊಹಿಸಿದೆ, ''ಇಂದಿನ ಈ ಹೋಮಕ್ಕೆ ಇವರೇ ದಾನಿಗಳು. ಯಾಗಶಾಲೆಯ ಕಿಟಕಿಯಲ್ಲಿ ನಾವು ಬಂದುದನ್ನು ನೋಡಿ ಸಂತರ ದರ್ಶನ ಪುಣ್ಯದಾಯಕ ಎಂಬ ನಂಬಿಕೆ ಇರುವುದರಿಂದ ಪುರೋಹಿತರನ್ನು ಆಗ್ರಹಿಸಿ ನಮ್ಮನ್ನು ಕರೆಸಿ ಕೊಂಡಿದ್ದಾರೆ.'' ಮುಗ್ಧ ಭಕ್ತರ ನಂಬಿಕೆಯನ್ನು ವೈದಿಕ ಹಿಂದು ಧರ್ಮ ಹೇಗೆ ಶೋಷಿಸುತ್ತಿದೆ ಎನ್ನಿಸಿತು.

ಗುರು ಬಸವಣ್ಣನವರ ತತ್ವದ ಪ್ರಕಾರ ಒಂದು ಅಗುಳನ್ನು ಕೆಡಿಸಬಾರದು, ಚೆಲ್ಲಬಾರದು, ಅಭಿಷೇಕದ ಮೂಲಕ ಹಾಳು ಮಾಡಬಾರದು. ಎಂಥ ಘನವಾದ ತತ್ವವನ್ನು ಕೊಟ್ಟರು. ಅದರ ಹಿಂದೆ ಎಂಥಾ ಮಾನವೀಯ ಭಾವನೆ ಇದೆ ಎನ್ನಿಸಿತು.

''ಇಂಥಾ ಅಮಾನವೀಯ ಆಚರಣೆ ಇರುವ ಜನರ ಮಧ್ಯೆ ನಿಮ್ಮಂತಹ ಮೃದು ಹೃದಯಿ ಹೇಗೆ ಹುಟ್ಟಿ ಬಂದಿರಿ?'' ಎಂದು ಮನದಲ್ಲಿಯೇ ಧರ್ಮಪಿತ ಬಸವಣ್ಣನವರನ್ನು ಸ್ಮರಿಸಿದೆ.

3.ಶ್ರೀನಿವಾಸ ಕಲ್ಯಾಣ

ಹಿಂದು ಧರ್ಮದಲ್ಲಿ ಯೋಗ, ಅಧ್ಯಾತ್ಮ, ಆಯುರ್ವೇದದಂತಹ ಉತ್ತಮ ಅಂಗಗಳು ಇದ್ದರೂ ಸಹ ಮೂಢ ನಂಬಿಕೆಯ ಪ್ರಮಾಣ ನೋಡಿದರೆ ನೂರರಲ್ಲಿ ಹತ್ತು ಅಂಶದಷ್ಟು ಒಳ್ಳೆಯದು ಸಿಕ್ಕರೆ ಹೆಚ್ಚು ಅನಿಸುತ್ತದೆ. ಇದಕ್ಕೆ ಇನ್ನೊಂದು ಪುರಾವೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ದಿ. 22-6-2008ರಂದು ನಡೆದ ಶ್ರೀನಿವಾಸ ಕಲ್ಯಾಣ. ಜನಮರುಳೋ ಜಾತ್ರೆ ಮರುಳೋ ಎಂಬಂತೆ ಆ ದೃಶ್ಯ ಕಂಡಿತು.

ತಿರುಪತಿಯಲ್ಲಿ ನಡೆಯುವ ಶ್ರೀನಿವಾಸ ಕಲ್ಯಾಣೋತ್ಸವ ಎಲ್ಲರಿಗೂ ನೋಡಲು ಸಿಗದು ಎಂದು ದೇಶದ ಪ್ರಮುಖ ಪಟ್ಟಣಗಳಲ್ಲಿ ತಿರುಗಾಡುವ ಗೊಂಬೆಗಳನ್ನು(Mobile gods) ಹೊತ್ತು ತಂದು, ಮದುವೆ ಮಾಡಿಸುವ ಪುರೋಹಿತ ಶೋಷಣಾ ವೈಖರಿ ಅದ್ಭುತ! ಸ್ಥಳೀಯವಾಗಿ ಬಂದ ಭಕ್ತರ ತಲೆ ಬೋಳಿಸಿ ಕಾಣಿಕೆ ಪಡೆಯುವ ತಿಮ್ಮಪ್ಪನಿಗೆ (ದೇವಸ್ಥಾನ ಸಮಿತಿಯವರಿಗೆ) ಇನ್ನೂ ಸಮಾಧಾನವಿಲ್ಲ; ಊರೂರು ತಿರುಗಿ ದೋಚುವ ಯೋಜನೆಯನ್ನು ರೂಪಿಸಿದ್ದಾರೆ. ಒಂದು ತತ್ವವಿಲ್ಲ, ಜ್ಞಾನ ಬೋಧೆಯಿಲ್ಲ, ಧಾರ್ಮಿಕ ಸಂಸ್ಕಾರ ನೀಡುವುದಿಲ್ಲ, ಭವ್ಯವಾದ ದೇವಾಲಯದ ಪ್ರತಿಕೃತಿ, ಮಂತ್ರ ವಟಗುಟ್ಟುವ ಮೂರು ನಾಮದ ಪುರೋಹಿತರು; ಆ ಗೊಂಬೆಗಳಿಗೆ ಆಭರಣಗಳ ವೈಭವ. ಮುಖ್ಯ ಪುರೋಹಿತನೇ ಶ್ರೀದೇವಿ, ಭೂದೇವಿ ಎಂಬ ಎರಡು ಗೊಂಬೆಗಳಿಗೆ ಶ್ರೀನಿವಾಸನ ಪರವಾಗಿ ಮಾಂಗಲ್ಯ ಧಾರಣೆ ಮಾಡಿಬಿಟ್ಟ. ಅಂದೇನೋ ವೆಂಕಟೇಶ ಪದ್ಮಾವತಿಯನ್ನು ವಿವಾಹವಾದ; ಅದೇ ವೆಂಕಟೇಶ ಶ್ರೀನಿವಾಸನಾಗಿ ಶ್ರೀದೇವಿ -ಭೂದೇವಿ ಎಂಬ ಇಬ್ಬರೊಡನೆ ಊರೂರು ತಿರುಗುತ್ತ ಮಧುಚಂದ್ರ (Honey Moon)ಯಾನ ನಡೆಸಿದ್ದಾನೆ.

ಇದನ್ನು ಗಂಟೆಗಟ್ಟಳೆ ಕುಳಿತು ಕಣ್ಣು ಮಿಟುಕಿಸದೆ ನೋಡುವ ಮೂಢ ಭಕ್ತರ ಸಮೂಹ; ಜನರ ಸಮಯ, ಹಣ, ಶಕ್ತಿ, ಬೌದ್ಧಿಕ ಚಿಂತನೆ ಈ ನಾಲ್ಕರ ಅಪವ್ಯಯ ಸಂಚಾರಿ ಶ್ರೀನಿವಾಸ ಕಲ್ಯಾಣ. ಸಾಮಾನ್ಯ ಜನ ಜೀವನದ ಒಂದು ಸಹಜ ಅಂಗವಾದ ವಿವಾಹದ ಘಟನೆಯನ್ನು ಇಷ್ಟು ವೈಭವೋಪೇತವಾಗಿ ಗೊಂಬೆಗಳಿಗೆ ಮಾಡಿಸುವುದೆ?

ಗಣಪತಿ ಮೋದಕ ಯಜ್ಞ ಮತ್ತು ಸಂಚಾರಿ ಶ್ರೀನಿವಾಸ ಕಲ್ಯಾಣದ ದೃಶ್ಯವನ್ನು (ಟಿ.ವಿ.ಮೂಲಕ) ನೋಡಿದ ಮೇಲೆ ಎಷ್ಟು ಬೇಗ ಹಿಂದು ಧರ್ಮದಿಂದ ಲಿಂಗಾಯತ ಧರ್ಮವು ತನ್ನ ಸಂಬಂಧ ಕಳಚಿಕೊಂಡು ಸ್ವತಂತ್ರವಾಗುವುದೋ; ಈ ನರಕ ಕೂಪದಿಂದ ಹೊರ ಹೋಗುವುದೋ ಎನ್ನುವ ಚಟಪಟಿಕೆ ಉಂಟಾಯಿತು.

ವಚನ ಪುಷ್ಪ

ಸೂರ್ಯನಿಂದ ಅಗ್ನಿ ದೂರಾದರಾಗಲಿ,
ತಾರೆಯಿಂದ ಬೆಳಕು ದೂರಾದರಾಗಲಿ,
ಭೂಮಿಯಿಂದ ಮಣ್ಣು ದೂರಾದರಾಗಲಿ.
ಸಮುದ್ರದಿಂದ ತೆರೆಯು ದೂರಾದರಾಗಲಿ
ನಿರಾಕಾರ ಪ್ರಭು ಲಿಂಗದೇವ
ನಿಮ್ಮ ಶರಣರ ವಚನಗಳಿಂದ ಎನ್ನ ದೂರವಿರಿಸದಿರು

ಸಿ.ಅರುಣ್ ಕುಮಾರ್
8ನೇ ತರಗತಿ ವಿದ್ಯಾರ್ಥಿ, ಬೆಂಗಳೂರು

ದಶಹರ ಹಬ್ಬದಲ್ಲಿ ಶರಣರ ಚರಿತ್ರೆ ಪಠಣ

ಶರಣ ಬಂಧುಗಳೇ,

ಸತ್ತವರ ಕಥೆ, ಕೊಂದವರ ಕಥೆಗಳನ್ನು ಓದದೆ ಲೋಕವನ್ನು ಉಳಿಸಿದ ಶರಣರ ಕಥೆ ಓದುವ ಪರಿಪಾಠ ಬೆಳೆಸಿಕೊಂಡು, ನವರಾತ್ರಿಯಲ್ಲಿ 9 ಶರಣರ ಚರಿತ್ರೆ ಓದಬೇಕೆಂದು ತಮ್ಮಲ್ಲಿ ಬಿನ್ನೈಸಲಾಗಿತ್ತು. ಅನೇಕರು ನಮಗೆ ಸಂಕ್ಷಿಪ್ತವಾಗಿ ಕಥೆಗಳನ್ನು ಕೊಡಿರಿ ಎಂದು ಕೋರಿ ಕೊಂಡಿದ್ದರು. ಅದಕ್ಕಾಗಿ 2008ರ ಸೆಪ್ಟಂಬರ್ 30ರಿಂದ ಆರಂಭವಾಗುವ ದಸರಾ (ನವರಾತ್ರಿ) ಕಾರ್ಯಕ್ರಮದಲ್ಲಿ ಕೆಳಕಂಡಂತೆ ಶರಣರ ಚರಿತ್ರೆ ಪಾರಾಯಣ ಮಾಡಬೇಕು.

1.	ದಿ. 30 -09-2008	-	ವಿಶ್ವಗುರು ಬಸವಣ್ಣನವರು (ಪ್ರತಿಪದೆ)
2.	ದಿ. 01-10-2008	-	ಚಿನ್ಮಯಜ್ಞಾನಿ ಚನ್ನಬಸವಣ್ಣ
3.	ದಿ. 02-10-2008	-	ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರು
4.	ದಿ. 03-10-2008	-	ಲಿಂಗಾಂಗಯೋಗಿ ಸಿದ್ಧರಾಮೇಶ್ವರ
5.	ದಿ. 04-10-2008	-	ವೀರ ವಿರಾಗಿಣಿ ಅಕ್ಕಮಹಾದೇವಿ
6.	ದಿ. 05-10-2008	-	ವೀರ ಮಾತೆ ಅಕ್ಕನಾಗಲಾಂಬಿಕೆ
7.	ದಿ. 06-10-2008	-	ವೀರ ಗಣಾಚಾರಿ ಮಡಿವಾಳ ಮಾಚಿದೇವರು
8.	ದಿ. 07-10-2008	-	ಹುತಾತ್ಮರಾದ ಹರಳಯ್ಯ -ಮಧುವಯ್ಯ
9.	ದಿ. 08-10-2008	-	ಕಲ್ಯಾಣ ಕ್ರಾಂತಿ
10.	ದಿ. 09-10-2008	-	ಬಸವ ಧರ್ಮ ವಿಜಯೋತ್ಸವ

ದಿ.9-10-2008ರಂದು ವಿಶೇಷ ಕಾರ್ಯಕ್ರಮ, ಗಣ ದಾಸೋಹ ಮಾಡಬೇಕು. ಶರಣರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ -ಕಲ್ಯಾಣ ಕಿರಣಗಳಲ್ಲಿ ಕೊಡಲಾಗುವುದು. ತನ್ನಿಮಿತ್ತ ಈ ಸಲ ಅಲ್ಲಮ ಪ್ರಭುದೇವರು ಮತ್ತು ಸಿದ್ಧರಾಮೇಶ್ವರರ ಚರಿತ್ರೆ ಕೊಡಲಾಗುವುದು.

ಪಾರಾಯಣಕ್ಕೆ ಮೊದಲು ಅಲ್ಲಮ ಪ್ರಭುದೇವರ ಪೂಜೆ

ಗುರು ಪ್ರಭುವೆ ನಾ ನಿನಗೆ ಅನವರತ ವಂದಿಪೆನು
ವ್ಯೋಮಕಾಯ ಸಿದ್ಧ ಶೂನ್ಯ ಪೀಠಾಧೀಶ ॥ಪ॥
ಅನುಭವ ಮಂಟಪದ ಜ್ಞಾನ ದೀಪ್ತಿಯು ಆಗಿ
ಶರಣ ಸಾಧಕರುಗಳ ಮುನ್ನಡೆಸಿದಾ ಮಹಿಮ ॥ ಅ.ಪ॥

ಧರ್ಮಪಿತ ಬಸವಗುರು ನೀಡಿದಾ ಲಿಂಗವನು
ಅನಿಮಿಷ ಯೋಗಿಯಿಂ ಪಡೆದು ಪುಳಕಿತನಾದೆ
ಬ್ರಹ್ಮಾಂಡದೊಳಗಿಪ್ಪ ಶ್ರೀ ಲಿಂಗದೇವನಿಗೆ
ಘನ ಗುಹೇಶ್ವರನೆಂಬ ದಿವ್ಯ ನಾಮವನಿತ್ತೆ ॥ 1 ॥

ಆಸೆ ಆಮಿಷವಳಿದು ಕಾಮ ಮೋಹವ ಗೆಲಿದು
ಮಾಯೆಯಂ ಮಣಿಸಿ ಅಲ್ಲಮ ಪ್ರಭುವೆನಿಸಿ
ಹರಿವ ನದಿಯ ತೆರದಿ ಚರಿಪ ಜಂಗಮವಾಗಿ
ಅಪರಿಮಿತ ಸಾಧಕರ ಹೃನ್ಮನಗಳನು ತೊಳೆದೆ ॥ 2 ॥

ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದೆ ನೀನು ಭ್ರಾಂತಿಯೆಂಬುವ ಬೇರ
ನಾನು ನನ್ನದು ಎಂಬ ಮಮಕಾರವಂ ತೊರೆದು
ಬ್ರಹ್ಮ ಬೀಜವ ಬಿತ್ತಿ ಪರಮಾರ್ಥ ಬೆಳೆ ತೆಗೆದೆ ॥ 3 ॥

ಧರ್ಮಗುರು ಬಸವಣ್ಣನ ಸಾಂಗತ್ಯ ಬಯಸುತ್ತ
ಸಿದ್ಧರಾಮರ ಕೂಡಿ ಶರಣ ಸಂಗಮ ಸೇರಿ
ವಿಶ್ವ ವಸು ವರ್ಷದ ಚೈತ್ರ ಪ್ರತಿಪದೆಯಂದು
ಶೂನ್ಯ ಪೀಠದ ಪ್ರಥಮ ಗುರುವಾಗಿ ಮೆರೆದೆ ॥ 4 ॥

ನಳನಾಮ ವರ್ಷದ ಆಷಾಡ ಮಾಸದಲಿ
ಪ್ರತಿಪದೆಯ ದಿನದಂದು ಕದಳಿಯಲಿ ಬಯಲಾದೆ
ಜಯ ಜಯ ಅಲ್ಲಮನೆ ಜಯತು ಮಹ ಜಗದ್ಗುರುವೆ
ಜಯ ಸಚ್ಚಿದಾನಂದ ಜಯ ಜಯತು ಸದ್ಗುರುವೆ! ॥5॥

3. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರ ಜೀವನ ಚರಿತ್ರೆ

ಹೊನ್ನಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಮಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಹೆಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಲಿಂಗದೇವರಲ್ಲಿ ಎನಗಾರು ಇಲ್ಲವೆಂದು
ಬೋಳಾದನೆನ್ನ ಪ್ರಭುದೇವರು

'ಕೆಲವರು ವಿರಕ್ತ ವೇಷಧಾರಿಗಳಾಗುವುದು ಹೊನ್ನು ,ಹೆಣ್ಣು, ಮಣ್ಣಿನ ಆಸೆಗಾಗಿ. ಆದರೆ ಪ್ರಭುದೇವರು ಬೋಳು ಮಂಡೆ ಹೊಂದಿದುದು ನನಗೆ ಆಸರೆಯಾಗಲೆಂದು' ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು. ಮಹಾಮನೆಯನ್ನು ಕಟ್ಟಿ, ಅನುಭವ ಮಂಟಪ ನಿರ್ಮಾಣ ಮಾಡಿ, ಶೂನ್ಯ ಪೀಠವನ್ನು ಸ್ಥಾಪಿಸಿ ಹಲವು ವರ್ಷಕಾಲ ಸೂಕ್ತ ಅಧಿಕಾರಿಗಾಗಿ ಚಾತಕ ಪಕ್ಷಿಯಂತೆ ಕಾಯ್ದ ಬಸವಣ್ಣನವರು ಶ್ರೀ ಸಿದ್ಧರಾಮೇಶ್ವರರ ಒಡಗೂಡಿ ಪ್ರಭುದೇವರು ಬಂದಾಗ ಹರ್ಷಭರಿತರಾಗಿ ನುಡಿಯುವ ವಚನವಿದು. ಲಿಂಗಾಯತ ಧರ್ಮದ ಷಡ್ ಗಣಾಧೀಶರಲ್ಲಿ ಒಬ್ಬರಾದ ಅಲ್ಲಮ ಪ್ರಭುದೇವರು ಅನುಭವ ಮಂಟಪದಲ್ಲಿ ಅಸಾಮಾನ್ಯ ವ್ಯಕ್ತಿತ್ವದವರು. ಇಂಥ ಮಹಾ ದಾರ್ಶನಿಕ ದಿಗ್ಗಜರೆಲ್ಲ ಬಸವಣ್ಣನ ಕಲ್ಯಾಣದಲ್ಲಿ ಒಟ್ಟುಗೂಡಿದುದು ಸೃಷ್ಟಿಕರ್ತನು ಭೂಮಿಯ ಮೇಲೆ ಮಾಡಿರುವ ಒಂದು ಪವಾಡವೇ ಸರಿ.

ಅಲ್ಲಮ ಪ್ರಭುದೇವರು ಜನಿಸಿದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೋಕಿನ ಬಳ್ಳಿಗಾವೆಯ ಸನಿಹದ ಕರವೂರು ಎಂಬಲ್ಲಿ. ತಾಯಿಯ ಹೆಸರು ಸುಜ್ಞಾನಿ ದೇವಿ, ತಂದೆಯ ಹೆಸರು ನಿರಹರಕಾರ. ತಂದೆ ನಾಗವಾಸಾಧಿಪತಿ; ನಟುವರ ಜಾತಿಯ ಇವರ ಕುಲಕಸುಬು ನರ್ತಕಿಯರಿಗೆ ಮೃದಂಗ, ಮದ್ದಳೆ ನುಡಿಸುವಂಥದ್ದು. ಬಾಲ್ಯದಿಂದಲೂ ಅಧ್ಯಾತ್ಮಿಕ ಪ್ರವೃತ್ತಿಯುಳ್ಳ ಅಲ್ಲಮರು ಯೌವನಕ್ಕೆ ಬರುತ್ತಲೇ ಸತ್ಯಾನ್ವೇಷಕರಾಗಿ ಮನೆ ತೊರೆದು ಗುರುವನ್ನು ಅರಸತೊಡಗಿದರು. ಮಮಕಾರ ಭೂಪಾಲನೆಂಬ ಓರ್ವ ರಾಜನು ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಅವನ ಪತ್ನಿ ಮೋಹಿನಿ ದೇವಿ. ಇವರಿಗೆ ಒಬ್ಬಳೇ ಮಗಳು ಅಪ್ರತಿಮ ಸುಂದರಿಯಾದ ಮಾಯಾದೇವಿ.

ಈ ಮಾಯಾದೇವಿಗೆ ತನ್ನ ರೂಪದ ಬಗ್ಗೆ ಅಪಾರ ಅಭಿಮಾನ, ಹಮ್ಮು, ತನ್ನ ಸೌಂದರ್ಯಕ್ಕೆ ಸರಿಸಾಟಿಯಾಗುವ ಗಂಡಸು ಜಗತ್ತಿನಲ್ಲಿ ಇಲ್ಲವೇ ಇಲ್ಲ. ಆದ್ದರಿಂದ ಯಾವ ಲೌಕಿಕ ಪುರುಷನನ್ನೂ ಮದುವೆಯಾಗುವುದಿಲ್ಲ ಎಂಬ ನಿರ್ಧಾರ ತಳೆದ ಮಾಯಾದೇವಿ ಬನವಾಸಿಯ ನಗರ ದೇವತೆ ಮಧುಕೇಶ್ವರನನ್ನೇ ಪತಿ ಎಂದು ಭಾವಿಸಿ ನಿತ್ಯವೂ ಪೂಜೆ ಮಾಡಿ, ನರ್ತನ ಸೇವೆಯನ್ನು ಸಲ್ಲಿಸುತ್ತಿದ್ದಳು. ಅಲ್ಲಮರು ತಿರುಗಾಡುತ್ತಾ ಬನವಾಸಿ ನಗರದ ರಾಜ ಬೀದಿಗೆ ಬಂದರು. ಜನರು ಕುತೂಹಲದಿಂದ ಸಾಲುಗಟ್ಟಿ ನಿಂತು ಯಾರದೋ ನಿರೀಕ್ಷೆಯಲ್ಲಿದ್ದರು. ಅಲ್ಲಮರು ಸಹ ಜನ ಸಮೂಹದೊಡನೆ ನಿಂತರು. ಭವ್ಯವಾದ ರಥದಲ್ಲಿ ರಾಜಕುಮಾರಿ ಮಾಯಾದೇವಿ ಬಂದಳು. ಅಲಂಕೃತಳಾದ ಆಕೆಯನ್ನು ಜಯಘೋಷ ಮಾಡಿ ಜನರು ಸ್ವಾಗತಿಸುತ್ತಿದ್ದರು. ಆಕೆ ಠೀವಿಯಿಂದ ಮುಂದೆ ಸಾಗಿದಳು. ಕುತೂಹಲಗೊಂಡ ಅಲ್ಲಮರು ತಾವೂ ಹಿಂದೆ ಸಾಗಿ ಮಧುಕೇಶ್ವರನ ಗುಡಿಯತ್ತ ನಡೆದರು. ಒಳಗೆ ವಾದ್ಯ ಸಹಿತವಾಗಿ ಮಾಯಾದೇವಿ ನೃತ್ಯ ಮಾಡತೊಡಗಿದಳು. ಆಗ ಅಲ್ಲಮರು ಹೊರಗೆ ನಿಂತು ಮದ್ದಳೆಯನ್ನು ತಾಳಬದ್ಧವಾಗಿ ನುಡಿಸತೊಡಗಿದರು. ಪುಳಕಿತಳಾದ ಮಾಯೆ ಅದಕ್ಕೆ ತಕ್ಕಂತೆ ಹೆಜ್ಜೆ ಹಾಕಿದಳು. ಮಾಯೆಯ ವಿದ್ವತ್ತನ್ನು ಪರೀಕ್ಷಿಸುವಂತೆ ಅಲ್ಲಮರು ವಿವಿಧ ರೀತಿಯ ತಾಳಗಳಿಂದ ಕೂಡಿದ ಮದ್ದಳೆ (ಮೃದಂಗ)ಯನ್ನು ನುಡಿಸುತ್ತಿದಂತೆಯೇ ಇನ್ನಷ್ಟು ಮತ್ತಷ್ಟು ಪ್ರಚೋದಿತಳಾದ ಮಾಯೆ ಕಾರ್ಮುಗಿಲಿನ ಗರ್ಜನೆಯನ್ನು ಕೇಳಿದ ನವಿಲು ಕುಣಿವಂತೆ ಕುಣಿಕುಣಿದು ದಣಿದಳು. ತನ್ನ ಆಪ್ತ ಸಖಿಯರನ್ನು ಕರೆದು ಮದ್ದಳೆ ನುಡಿಸುವ ಆತ ಯಾರು ಎಂದು ಕೇಳಲು ತಿಳಿಸಿದಳು. ದೇಹಾಭಿಮಾನ ಅಹಂ ತುಂಬಿ ತುಳುಕುವ ಮಾಯೆ ಮತ್ತು ಆಕೆಯ ಅರಮನೆಯ ಪರಿಸರದ ಜನರನ್ನು ತಿದ್ದಲು ಒಳ್ಳೆಯ ಸುವರ್ಣಾವಕಾಶ ಸಿಕ್ಕಿತು ಎಂಬ

ಭಾವದಿಂದ ಅಲ್ಲಮರು ಅರಮನೆಗೆ ಹೋಗುವರು. ಪಾರಮಾರ್ಥಿಕ ಹಂಬಲವೇ ಇಲ್ಲದ ಮಾಯೆ ಅತಿ ಶ್ರೇಷ್ಠ ಪಾರಮಾರ್ಥ ಸಾಧಕ ಅಲ್ಲಮರಿಂದ ಜ್ಞಾನವನ್ನು ಪಡೆದುಕೊಳ್ಳುವ ಬದಲು ತನ್ನ ಪ್ರೇಮ ಜಾಲವನ್ನು ಬೀಸುವ ಯತ್ನ ಮಾಡುತ್ತಾಳೆ. ಅವಳನ್ನು ಪರಿವರ್ತಿಸಲು, ಅವಳ ಪರಿಸರವನ್ನು ತಿದ್ದಲು ಸಾಧ್ಯವೇ ಇಲ್ಲ ಎಂಬುದನ್ನು ಮನಗಂಡ ಅಲ್ಲಮರು "ಗುರು ಎಂಬ ಅಕ್ಕಸಾಲಿಗನು ಸುಂದರ ಆಭರಣ ಮಾಡಬೇಕಾದರೆ ಶಿಷ್ಯನು ಪಾರಮಾರ್ಥಿಕ ಹಂಬಲ ಉಳ್ಳ ಚಿನ್ನದಂತಿರಬೇಕು. ಮಾಯೆಯಂತಹ ಲೌಕಿಕ ವೃತ್ತಿಯ ಕಬ್ಬಿಣದಿಂದ ತಾನು ಮುಕ್ತಾತ್ಮ ಎಂಬ ಆಭರಣ ಮಾಡಲು ಸಾಧ್ಯವಿಲ್ಲ." ಎಂಬುದನ್ನು ಮನಗಂಡು ಅರಮನೆಯನ್ನು ತೊರೆಯುವರು.

ಸ್ವಲ್ಪ ಕಾಲ ತಮ್ಮ ಅನ್ವೇಷಣೆಯ ಪಥದಿಂದ ಪಕ್ಕಕ್ಕೆ ಸರಿದಿದ್ದ ಅಲ್ಲಮರು ಪುನಃ ಗುರುವನ್ನು ಅರಸುತ್ತಾ ಮುನ್ನಡೆದರು. ಹೀಗೆ ಸಾಧಕರಾಗಿ ತಿರುಗುತ್ತಿರುವಾಗ ಒಂದು ದಿನ ಬಳ್ಳಿಗಾವಿಯ ಬಳಿ ಗೊಗ್ಗಯ್ಯನು ದುಡಿದು ತಿನ್ನಬೇಕೆಂದು ಹೇಳಿದಲ್ಲದೆ ತಾನು ಹೇಗೆ ರಟ್ಟೆ ಮುರಿದು ದುಡಿದು ತೋಟವನ್ನು ಮಾಡಿದ್ದೇನೆಂಬುದನ್ನು ಜಂಭದಿಂದ ಕೊಚ್ಚಿಕೊಂಡ. ಆಗ ಅಲ್ಲಮ ಪ್ರಭು ಇವನನ್ನು ಲೌಕಿಕಾಸಕ್ತಿಯ ಕೆಸರಿನಿಂದ ಹೊರ ತೆಗೆಯಬೇಕೆಂದು ಬಯಸಿ ಹೇಳುವರು.

ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯಾ, ಭ್ರಾಂತಿಯ ಬೇರ.
ಒಡೆದು ಸಂಸಾರದ ಹೆಂಟೆಯು, ಬಗಿದು ಬಿತ್ತಿದೆನಯ್ಯಾ, ಬ್ರಹ್ಮ ಬೀಜವ
ಅಖಂಡ ಮಂಡಲವೆಂಬ ಬಾವಿ, ಪವನವೆ ರಾಟಾಳ.
ಸುಷುಮ್ನನಾಳದಿಂದ ಉದಕವ ತಿದ್ದಿ,
ಪಶುಗಳೈದು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ,
ಆವಾಗಳೂ ಈ ತೋಂಟದಲ್ಲಿ ಜಾಗರವಿದ್ದು
ಸಸಿಯ ಸಲಹಿದೆನು ಕಾಣಾ, ಗುಹೇಶ್ವರಾ.

ನಾನೂ ದುಡಿಮೆಗಾರನೆ. ನೀನು ಭೌತಿಕ ಭೂಮಿಯಲ್ಲಿ ಭೌತಿಕ ಬೆಳೆ ತೆಗೆದರೆ ನಾನು ಶರೀರದ ತೋಟದಲ್ಲಿ ಪಾರಮಾರ್ಥದ ಬೆಳೆ ತೆಗೆಯುವ ಕೃಷಿಕ ಎಂದು ಹೇಳಿದರು. ಈ ಬೋಧೆಯಿಂದ ಗೊಗ್ಗಯ್ಯನ ಕಣ್ತೆರೆಯಿತು. ತನ್ನ ತೋಟದಲ್ಲಿದ್ದು ಸಾಧನೆ ಮಾಡುತ್ತ ತನಗೂ ಮಾರ್ಗದರ್ಶನ ಮಾಡಬೇಕೆಂದು ಕೋರಿಕೊಂಡ.

ಹೀಗಿರುವಾಗಲೇ ಒಂದು ದಿನ ಮಣ್ಣಿನ ದಿಬ್ಬವೊಂದರ ಮೇಲೆ ಪಳಪಳನೆ ಹೊಳೆಯುವ ವಸ್ತುವೊಂದನ್ನು ಕಂಡು ಅಲ್ಲಮರು ಇದೇನೆಂದು ಕೇಳಲು ಗೊಗ್ಗಯ್ಯನು ಹೇಳಿದ, "ಯಾರೋ ಓರ್ವ ಉತ್ತರ ದೇಶದ ರಾಜರಂತೆ. ಸಹಚರರೊಡನೆ ಬೇಟೆಯಾಡುತ್ತಾ ಬಂದು ವೈರಾಗ್ಯ ಹುಟ್ಟಿ ತಪಸ್ಸಿಗೆ ಕುಳಿತರಂತೆ. ಜೊತೆಗೆ ಬಂದವರು ಒಂದು ಗವಿಯನ್ನು ಕಟ್ಟಿ ತಮ್ಮ ದೇಶಕ್ಕೆ ಹೋದರಂತೆ. ಅರ್ಧತೆರೆದ ಕಣ್ಣಿನಿಂದ ಅಂಗೈಯೊಳಗಣ ವಸ್ತುವನ್ನು ನೋಡುತ್ತ ಕುಳಿತುದರಿಂದ ಅನಿಮಿಷಯೋಗಿ ಎಂದೇ ಜನರು ಕರೆಯತೊಡಗಿದರು. ಗೊಗ್ಗಯ್ಯ ನೀಡಿದ ವಿವರ ಕೇಳಿ ಅಲ್ಲಮರ ಕುತೂಹಲ ಕೆರಳಿತು. ಮಣ್ಣಿನ ದಿಬ್ಬದ ಮೇಲೆ ಬೆಳೆದ ಗಿಡ ಕಂಟಿಗಳನ್ನು ಕಡಿದರು. ಬಾಗಿಲಿಗೆ ಅಡ್ಡಲಾಗಿ ಆನಿಸಿದ್ದ ಕಲ್ಲನ್ನು ಸರಿಸಿ, ಒಳಗೆ ಪ್ರವೇಶಿಸಿದಾಗ ಕಂಡಿದ್ದೇನು? ಬೆಳಕು. ಬರೀ ಬೆಳಕು. ಆ ಬೆಳಕಿನ ಪ್ರಕಾಶವನ್ನು ಬಗಿದು ಒಳ ಹೊಕ್ಕಾಗ ಕಂಡದ್ದೆಂದರೆ ಓರ್ವ ತೇಜಸ್ವಿ ಪದ್ಮಾಸನದಲ್ಲಿ ಕುಳಿತಿದ್ದಾನೆ. ಅವನ ದೃಷ್ಟಿ ಎಡಗೈಯಲ್ಲಿ ಇದ್ದ ಇಷ್ಟಲಿಂಗದಲ್ಲಿ ನಟ್ಟಿದೆ. ಬಹಿರಂಗದ ಪ್ರಜ್ಞೆ ಇಲ್ಲ. ಅಲ್ಲಮರು ಸಂಭ್ರಾತರಾದರು. ಹೀಗೆ ಆ ತೇಜೋಮೂರ್ತಿಯನ್ನು ಸ್ತುತಿಸಿದರು.

ಕಾಯದಲಾದ ಮೂರ್ತಿಯಲ್ಲ, ಜೀವದಲಾದ ಮೂರ್ತಿಯಲ್ಲ,
ಪ್ರಾಣದಲಾದ ಮೂರ್ತಿಯಲ್ಲ, ಪುಣ್ಯದಲಾದ ಮೂರ್ತಿಯಲ್ಲ,
ಮುಕ್ತಿಯಲಾದ ಮೂರ್ತಿಯಲ್ಲ,
ಯುಗದಲಾದ ಮೂರ್ತಿಯಲ್ಲ, ಜುಗದಲಾದ ಮೂರ್ತಿಯಲ್ಲ,
ಶಿವನಲಾದ ಮೂರ್ತಿಯಲ್ಲ, ಶಕ್ತಿಯಲಾದ ಮೂರ್ತಿಯಲ್ಲ
ಇದೆಂತಹ ಮೂರ್ತಿಯೆಂದುಪಮಿಸುವೆ?

ಕಾಣಬಾರದ ಕಾಯ, ನೋಡಬಾರದ ತೇಜ,
ಉಪಮಿಸಬಾರದ ನಿಲವು !
ಕಾರಣವಿಡಿದು ಕಣ್ಗೆ ಗೋಚರವಾದ ಸುಖವನು
ಏನೆಂದು ಹೇಳುವೆ ಗುಹೇಶ್ವರಾ ?

ಸ್ಫಟಿಕದ ಘಟದಂತೆ ಒಳಹೊರಗಿಲ್ಲ ನೋಡಾ !
ವಿಗಡ ಚರಿತ್ರಕ್ಕೆ ಬೆರಗಾದೆನು
ನೋಡುವಡೆ ಕಾಣ ಬರುತ್ತಿದೆ, ಮುಟ್ಟುವಡೆ ಕೈಗೆ ಸಿಲುಕದು
ಹೊದ್ದುವಡೆ ಸಮೀಪ, ಸಾರಿದಡೆ ಅತ್ತತ್ತ ತೋರುತ್ತಿದೆ.
ಆಕಾರ ನಿರಾಕಾರವ ನುಂಗಿ
ಬಯಲ ಸಮಾಧಿಯಲ್ಲಿ ಸಿಲುಕಿತ್ತು ನೋಡಾ !
ದರ್ಶನದಿಂದ ಅಮೃತಾಹಾರವಾಯಿತ್ತು
ಬೆರಸಿದಡಿನ್ನೆಂತೋ ಗುಹೇಶ್ವರಾ

ಅನಿರೀಕ್ಷಿತವಾಗಿ ಒದಗಿದ ಈ ಭಾಗ್ಯವನ್ನು ಬಣ್ಣಿಸಲಾರದ ಆನಂದ ಮನದುಂಬಿತು.

ಪುಣ್ಯವುಳ್ಳ ಕಾಲಕ್ಕೆ ಮಣ್ಣು ಹೊನ್ನಹುದು
ಪುಣ್ಯವುಳ್ಳ ಕಾಲಕ್ಕೆ ಪಾಷಾಣ ಪರುಷವಪ್ಪುದು ನೋಡಾ !
ಮುನ್ನ ಮುನ್ನವೆ ಅಚೊತ್ತಿದ ಭಾಗ್ಯವೆನ್ನ
ಕಣ್ಣ ಮುಂದೆ ಕಾಣಬಂದಿತ್ತು ನೋಡಾ !
ಮಣ್ಣ ಮರೆಯ ದೇಗುಲದೊಳಗೊಂದು
ಮಾಣಿಕ್ಯವ ಕಂಡೆ ಬಳಿಕ ಇನ್ನು ಮುನ್ನಿನಂತಪ್ಪುದೇ ಗುಹೇಶ್ವರಾ

ಅರಸುವ ಬಳ್ಳಿ ಕಾಲ ಸುತ್ತಿತ್ತೆಂಬಂತೆ
ಬಯಸುವ ಬಯಕೆ ಕೈ ಸಾರಿದಂತೆ
ಬಡವ ನಿಧಾನವನೆಡಹಿ ಕಂಡಂತೆ
ನಾನರಸುತ್ತಲರಸುತ್ತ ಬಂದು
ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ
ಎನ್ನ ಅರಿವಿನ ಹರಿವ ಕಂಡೆ ನೋಡಾ
ಎನ್ನ ಒಳಹೊರಗೆ ಎಡದೆರಹಿಲ್ಲದೆ ಥಳಥಳಿಸಿ ಬೆಳಗಿ
ಹೊಳೆವುತ್ತಿಪ್ಪ ಅಖಂಡ ಜ್ಯೋತಿಯ ಕಂಡೆ ನೋಡಾ
ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋಟದ
ಎನ್ನ ಪರಮ ಗುರುವ ಕಂಡು ಬದುಕಿದೆನು ಕಾಣಾ ಗುಹೇಶ್ವರಾ

ಆ ತೇಜೋಮಯ ಮೂರ್ತಿ ಸಂಪೂರ್ಣ ಮೌನಿ. ಮರು ಮಾತನಾಡಿಲ್ಲ, ದೃಷ್ಟಿಯನ್ನು ಹರಿಸಲೂ ಇಲ್ಲ. ಆಗ ಅಲ್ಲಮರು ತಾವೇ ಅನುಗ್ರಹವನ್ನು ಪಡೆದುಕೊಳ್ಳುವುದಾಗಿ ನಿಶ್ಚಯಿಸಿ ಪ್ರಾರ್ಥಿಸುವರು.

ಕಾಣಬಾರದ ಗುರು ಕಣ್ಗೆ ಗೋಚರವಾದಡೆ
ಹೇಳಲಿಲ್ಲದ ಬಿನ್ನಪ, ಮುಟ್ಟಲಿಲ್ಲದ ಹಸ್ತಮಸ್ತಕಸಂಯೋಗ
ಹೂಸಲಿಲ್ಲದ ವಿಭೂತಿಯ ಪಟ್ಟ, ಕೇಳಲಿಲ್ಲದ ಕರ್ಣಮಂತ್ರ
ತುಂಬಿ ತುಳುಕದ ಕಳಶಾಭಿಷೇಕ, ಆಗಮವಿಲ್ಲದ ದೀಕ್ಷೆ
ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ !
ಆನು ಕೊಂಬಂತೆ ಮಾಡಾ ಗುಹೇಶ್ವರಾ

ನೀನೆನಗೆ ಶ್ರೀಗುರುವಪ್ಪಡೆ, ನಾ ನಿನಗೆ ಶಿಷ್ಯನಪ್ಪಡೆ
ಎನ್ನ ಕಾಯದ ಕರ್ಮವ ತೊಡೆದು, ಎನ್ನ ಕರಣಾದಿ ಗುಣಂಗಳ ಕಳೆದು
ಎನ್ನ ಪ್ರಾಣದ ಧರ್ಮವ ನಿಲಿಸಿ

ನೀನೆನ್ನ ಕಾಯದಲಡಗಿ, ನೀನೆನ್ನ ಪ್ರಾಣದಲಡಗಿ
ನೀನೆನ್ನ ಭಾವದಲಡಗಿ, ನೀನೆನ್ನ ಕರಸ್ಥಲಕ್ಕೆ ಬಂದು
ಕಾರುಣ್ಯವ ಮಾಡಾ, ಗುಹೇಶ್ವರ

ಸಾಷ್ಟಾಂಗವೆರಗಿ ಅನಿಮಿಷಯೋಗಿಯ ಮುಂದೆ ಕುಳಿತು ದೃಷ್ಟಿಯಿಟ್ಟು ನೋಡಿ, ಅವರ ಕೈಯೊಳಗಣ ಇಷ್ಟಲಿಂಗವನ್ನು ತಮ್ಮ ಕೈಯೊಳಗೆ ಇಟ್ಟುಕೊಂಡಾಗ ಮಿಂಚು ಮೈಯಲ್ಲಿ ಹರಿದಂತಾಯಿತು. ಅನಿಮಿಷ ಯೋಗಿಯ ದೃಷ್ಟಿಯಿಂದ ಚಿತ್ಕಳಾಭರಿತವಾದ ಆ ಇಷ್ಟಲಿಂಗವು ಅಲ್ಲಮರನ್ನು ಪ್ರಭುವನ್ನಾಗಿ ಪರಿವರ್ತಿಸಿತು, ದೈವೀಕರಿಸಿತು.

ಅಲ್ಲಮರು ಇಂಥದೊಂದು ಸೌಭಾಗ್ಯವನ್ನು ನಿರೀಕ್ಷಿಸಿರಲಿಲ್ಲ. ಒಂದೇ ಸಲಕ್ಕೆ ಮೂರು ಲಾಭ - ಗುರು ಕಾರುಣ್ಯ ಪ್ರಾಪ್ತಿ, ಇಷ್ಟಲಿಂಗ ಪ್ರಾಪ್ತಿ, ಚಿಚ್ಛಕ್ತಿಯ ಅವತೀರ್ಣ.

ಬಟ್ಟೆಯ ಬಡಿವ ಕಳ್ಳಂಗೆ ಬೇಹು ಸಂದು ಕಳವು ದೊರಕಿದಂತಾಯಿತ್ತು
ಕುರುಡನೆಡಹುತ್ತ ತಡಹಿ ಹಿಡಿದು ಕಂಡಂತಾಯಿತ್ತು
ನಿರ್ಧನಿಕ ಧನದ ಬಯಕೆಯಲ್ಲಿ ನಡೆವುತ್ತ
ಎಡಹಿದ ಕಲ್ಲು ಪರುಷವಾದಂತಾಯಿತ್ತು
ಅರಸುವಂಗೆ ಅರಿಕೆ ತಾನಾದಂತಾಯಿತ್ತು
ಎಲೆ ಗುಹೇಶ್ವರಾ, ನೀನೆನಗೆ ದೊರಕುವದೆಂಬುದು
ನಾ ಮುನ್ನ ಮಾಡಿದ ಸುಕೃತಕ ಫಲ ! ಏನ ಬಣ್ಣಿಪೆ ಹೇಳಾ ?

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ ?
ಬೆಟ್ಟದ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ?

ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದಡೆ
ಎನಗಿದು ಸೋಜಿಗ, ಎನಗಿದು ಸೋಜಿಗ
ಅಹುದೆನಲಮ್ಮೆನು ಅಲ್ಲೆನಲಮ್ಮೆನು
ಗುಹೇಶ್ವರ ಲಿಂಗವು ನಿರಾಳ ನಿರಾಕಾರ ಬಯಲು ಆಕಾರವಾದಡೆ

ಮಣ್ಣಿನ ಮರೆಯಲ್ಲಿದ್ದ ಗುಹೆಯೊಳಗೆ ಅಪ್ರತಿಮ ಯೋಗಿ ಗುರು ಅನಿಮಿಷಯ್ಯನನ್ನು, ಅರಿವಿನ ಕುರುಹಾದ ಕರಸ್ಥಲದ ಮಾಣಿಕ್ಯ ಇಷ್ಟಲಿಂಗವನ್ನು ಕಂಡುದರಿಂದ ನಿರಾಕಾರ, ನಿರ್ಗುಣನಾದ ಲಿಂಗದೇವನನ್ನು ಗುಹೇಶ್ವರಾ ಎಂದು ಅಲ್ಲಮಪ್ರಭುಗಳು ಕರೆದರು. ಹೃದಯದ ಗುಹೆಯಲ್ಲಿ ಅಡಗಿದ ದೇವನು ಗುಹೇಶ್ವರ ಎಂದು ಭಾವಿಸಿ ಇದನ್ನೇ ತಮ್ಮ ವಚನಾಂಕಿತವನ್ನಾಗಿ ಅಲ್ಲಮಪ್ರಭುಗಳು ಇಟ್ಟುಕೊಂಡರು.

ಈ ಹೊತ್ತಿಗಾಗಲೇ ಕ್ರಾಂತಿಪುರುಷ ಬಸವಣ್ಣನವರು ಚಾಲುಕ್ಯರ ರಾಜಧಾನಿ ಕಲ್ಯಾಣವನ್ನು ಸೇರಿ ಅನುಭವ ಮಂಟಪವನ್ನು ಕಟ್ಟಿದ್ದರು. ಅವರ ಖ್ಯಾತಿಯು ನಾಲ್ದೆಸೆಗೂ ಹಬ್ಬುತ್ತಿತ್ತು. ಅವರ ಹೆಸರಿನ ಬಳ್ಳಿ ಹಬ್ಬಿದಲ್ಲೆಲ್ಲ ಲಿಂಗದೇವನ ಮಹಿಮೆ, ಲಿಂಗದೇವನ ಕುರುಹಾದ ಇಷ್ಟಲಿಂಗದ ಮಹತಿ; ಇದನ್ನು ಆಧರಿಸಿದ ಲಿಂಗಾಯತ ಧರ್ಮದ ಘನತೆ ಹಬ್ಬುತ್ತಿತ್ತು. ತಾವು ಆಕಸ್ಮಿಕವಾಗಿ ಪಡೆದುಕೊಂಡ ಇಷ್ಟಲಿಂಗದ ಅರ್ಥವೇನು? ಸ್ವರೂಪವೇನು? ಯೋಗಕ್ಕೆ ಬಳಸಿಕೊಳ್ಳುವುದು ಹೇಗೆ? ಮುಂತಾದ ವಿಷಯಗಳನ್ನು ಆಳವಾಗಿ ತಿಳಿಯಲು ಬಸವಣ್ಣನವರ ಬಳಿಗೆ ಹೋಗುವ ಸಂಕಲ್ಪ ತೊಟ್ಟು ಅಲ್ಲಮರು ಹೊರಟರು.

ಗುರು ಮುಟ್ಟಿ ಗುರುವಾದ ಅಲ್ಲಮ ಪ್ರಭು ಹೊತ್ತಿದ ಜ್ಯೋತಿಯಾಗಿ ಇನ್ನಷ್ಟು ಜ್ಯೋತಿಗಳನ್ನು ಹೊತ್ತಿಸುವ ಉದ್ದೇಶವನ್ನು ಸಂಚಾರದಲ್ಲಿ ಅಳವಡಿಸಿಕೊಂಡರು. ಹರಿಯುವ ನದಿಯು ಭೂಮಿಗೆ ನೀರುಣಿಸುತ್ತಾ ಮುಂದೆ ಸಾಗುವಂತೆ ಅಸಂಖ್ಯಾತ ಮುಮುಕ್ಷುಗಳನ್ನು ಅಲ್ಲಮಪ್ರಭುಗಳು ತಿದ್ದಿ ತೀಡುತ್ತ ಸಾಗಿದರು.

ಹಾಗೆ ಸಂದರ್ಶಿಸಿದವರಲ್ಲಿ ಗಮನಾರ್ಹವಾದ ಓರ್ವ ವ್ಯಕ್ತಿ ಶರಣೆ ಮುಕ್ತಾಯಕ್ಕ.

ಅಜಗಣ್ಣನೆಂಬ ಓರ್ವ ಮೌನಜ್ಞಾನಿಯ ಸೋದರಿ ಮುಕ್ತಾಯಕ್ಕ. ಅಣ್ಣನು, ಗುರುವೂ ಆದ ಅಜಗಣ್ಣನ ಮಾರ್ಗದರ್ಶನದಲ್ಲಿ ತನ್ನ ಅಧ್ಯಾತ್ಮ ಸಾಧನೆಯನ್ನು ಗುಟ್ಟಾಗಿ ಮುಂದುವರಿಸಿದ್ದಳು. ಸ್ತ್ರೀಗೆ ಪತಿಯೇ ದೇವರು, ಪತಿಯ ಸೇವೆಯ ಮೂಲಕವೇ ಉತ್ತಮ ಜನ್ಮ ಎಂಬ ವಾದವಿಡಿದು ಸ್ತ್ರೀಯು ಗೃಹಬಂಧಿಯಾದಂತಹ ಕಾಲವದು. ಹೀಗಾಗಿ ಆಕೆ ಗುಟ್ಟಾಗಿಯೇ ಸಾಧನೆಯನ್ನು ಮಾಡುತ್ತಿದ್ದಳು. ಸಾಧನೆಗೆ ಮಾರ್ಗದರ್ಶಕನಾದ ಅಣ್ಣ ಇದ್ದಕ್ಕಿದ್ದಂತೆಯೇ ಲಿಂಗೈಕ್ಯನಾಗಿದ್ದ. ಇದರಿಂದ ವಿಪರೀತ ದುಃಖಿತಳಾಗಿದ್ದಳಾಕೆ. ಈ ವಿಷಯ ತಿಳಿದು ಅಲ್ಲಮಪ್ರಭುಗಳು ಮುಕ್ತಾಯಕ್ಕನನ್ನರಸಿ ಬಂದು ಬುದ್ಧಿವಾದ ಹೇಳಿದರು.

"ನೀನು ನಿಜಕ್ಕೂ ಜ್ಞಾನಿ, ನಿನ್ನ ಕಣ್ಣಿನ ತೇಜಸ್ಸು ನೋಡಿದರೆ ಅಸಾಮಾನ್ಯ ಮಹಿಳೆ ಎನ್ನಿಸುವುದು. ಆದರೆ ಕಣ್ಣೀರು ಅಜ್ಞಾನದ ದ್ಯೋತಕ. ಇದೇನಿಂತಹ ದ್ವಂದ್ವ?" ಎಂದು ಅಲ್ಲಮ ಪ್ರಭುಗಳು ಸಂವಾದಕ್ಕೆ ಇಳಿಯುತ್ತಾರೆ. "ನಾನು ದುಃಖ ಪಡುತ್ತಿರುವುದು ಅಣ್ಣನು ತೀರಿಕೊಂಡನೆಂದಲ್ಲ, ನನಗೆ ಮಾರ್ಗದರ್ಶನ ಮಾಡುತ್ತಿದ್ದ ಗುರುವು ಇಲ್ಲವಾದನು. ನನಗೆ ಮಾರ್ಗದರ್ಶನ ಮಾಡುವವರಿನ್ನಾರು? ಎಂಬುದೇ ನನ್ನ ಚಿಂತೆ" ಎಂದು ಮುಕ್ತಾಯಕ್ಕ ನುಡಿದಾಗ "ನಿನ್ನ ಅರಿವನ್ನೇ ಗುರುವನ್ನಾಗಿ ಮಾಡಿಕೋ. ಯಾರು ಯಾರನ್ನು ಅಗಲುವರು? ಎಲ್ಲರೂ ಬಂದಿರುವುದು ಮೂಲನೆಲೆ ಪರಮಾತ್ಮನಿಂದ. ಮತ್ತೆ ಎಲ್ಲರೂ ಕೂಡುವುದು ಅಲ್ಲಿಯೆ. ಮಧ್ಯದ ಸಂಬಂಧಗಳೆಲ್ಲ ತಾತ್ಕಾಲಿಕ" ಎಂದು ಬೋಧಿಸಿ ಮುಂದೆ ಸಾಗುವರು.

ನಂತರ ಸಂದರ್ಶಿಸಿದವರಲ್ಲಿ ಮುಖ್ಯರು ಲಿಂಗಾಯತ ಧರ್ಮದ ಷಡ್‌ಗಣಾಧೀಶರಲ್ಲಿ ಒಬ್ಬರಾದ ಸೊನ್ನಲಾಪುರದ ಕರ್ಮಯೋಗಿ ಸಿದ್ಧರಾಮೇಶ್ವರರು. ಅವರು ರಾಜಗುರುವಾಗಿದ್ದರು. ಲೋಕೋಪಕಾರಕ್ಕಾಗಿ ಅವರು ಕೆರೆ ಭಾವಿಗಳನ್ನು ಕಟ್ಟಿಸುವುದರಲ್ಲಿ, ಶಿವಾಲಯಗಳನ್ನು ಕಟ್ಟಿ ಲಿಂಗಗಳನ್ನು ಪ್ರತಿಷ್ಠಾಪಿಸುವುದರಲ್ಲಿ ಬಹಳ ಆಸಕ್ತರಾಗಿದ್ದರು. ಅನ್ನದಾನ ಸಾಲೆಗಳನ್ನು ಸತತವಾಗಿ ನಡೆಸುತ್ತಿದ್ದರು. ಸಿದ್ಧರಾಮೇಶ್ವರರ ಪಾರಮಾರ್ಥಿಕ ಜ್ಞಾನವು ಕೇವಲ ಸ್ಥಾವರಗಳನ್ನು ನಿರ್ಮಿಸುವುದರಲ್ಲಿ ವ್ಯಯವಾಗುತ್ತಿರುವುದನ್ನು ನೋಡಿ ಅಲ್ಲಮಪ್ರಭುಗಳು ಸೊನ್ನಲಾಪುರಕ್ಕೆ ಬಂದು ಸಿದ್ಧರಾಮೇಶ್ವರರನ್ನು "**ವಡ್ಡ**" ಎಂದು ವ್ಯಂಗ್ಯವಾಗಿ ಛೇಡಿಸುವರು. ಸಿದ್ಧರಾಮೇಶ್ವರರ ಶಿಷ್ಯರು ಸಿಟ್ಟಿಗೆದ್ದು ಹೊಡೆಯಲು ಬಂದಾಗ ಅದನ್ನು ಮೀರಿ ನಿಲ್ಲುವರು. ಅಲ್ಲಮಪ್ರಭುಗಳಿಗೆ ಎಸೆದ ಕಲ್ಲು ಮರಳಿ ತಮಗೇ ಬಂದು ಬಡಿದಾಗ ನೊಂದ ಆ ಶಿಷ್ಯರು ಗುರು ಸಿದ್ಧರಾಮೇಶ್ವರರಲ್ಲಿ ದೂರು ನೀಡಿದರು. ಅವರು ಕೋಪದಿಂದ ಬಂದು ಅಲ್ಲಮಪ್ರಭುವಿನೊಡನೆ ವಾಗ್ವಾದಕ್ಕೆ ಇಳಿಯುವರು.

"ಸಿದ್ಧರಾಮ ನೀನು ನಿಜ ಜ್ಞಾನಿ; ನಿನ್ನ ಶಕ್ತಿಯನ್ನು ಬರೀ ಸ್ಥಾವರ ನಿರ್ಮಾಣದಲ್ಲಿ ಅಪವ್ಯಯ ಮಾಡುತ್ತಿರುವೆ. ಕೆರೆ ಬಾವಿ ಕಟ್ಟಿಸುವುದು ರಾಜರ ಕರ್ತವ್ಯ. ನೀನು ಗುರುವಾಗಿ ಪಾರಮಾರ್ಥಿಕ ಕೆರೆ ಕಟ್ಟು, ಭೌತಿಕ ಕೆರೆಯ ನೀರು ದೂರ ದೂರದವರೆಗೆ ಹೋಗದು. ಕೆರೆಯ ನೀರು ದೇಹದ ತೃಷೆ ತಣಿಸಿದರೆ ಜ್ಞಾನದ ನೀರು ಆತ್ಮದ ತೃಷೆಯನ್ನು ತಣಿಸುತ್ತದೆ. ಕಲ್ಲುಮಣ್ಣುಗಳ ಸ್ಥಾವರಗುಡಿಗಳನ್ನು ಕಟ್ಟುವುದರಿಂದ ಜಂಗಮಾತ್ಮಕವಾದ ಧನ ಸಂಪತ್ತು ಜಡಗಟ್ಟುವುದು. ಸತ್ಯವಂತರೂ ಜ್ಞಾನಿಗಳೂ ಕಾಯಕ ಜೀವಿಗಳೂ ಆದ ಜನಾಂಗ ನಿರ್ಮಾಣ ಜಂಗಮ ದೇವಾಲಯ ಕಟ್ಟಿದಂತೆ. ಅದನ್ನೇ ಕಲ್ಯಾಣದಲ್ಲಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಮಾಡುತ್ತಿರುವುದು. ಅಲ್ಲಿಗೆ ಹೋಗಿ ಪುನೀತರಾಗೋಣ." ಎಂದರು.

ಸಿದ್ಧರಾಮೇಶ್ವರರು ಹರ್ಷಪುಳಕಿತರಾದರು. ಉಭಯತರೂ ಸೇರಿ ಕಲ್ಯಾಣಕ್ಕೆ ಕ್ರೋಧಿ ನಾಮ ಸಂವತ್ಸರದಲ್ಲಿ ಬರುವರು. ಕ್ರಾಂತಿಯೋಗಿ ಬಸವಣ್ಣನವರ ನೇತೃತ್ವದಲ್ಲಿ ನಡೆಯುತ್ತಿದ್ದ ಆ ಜನಪರಿವರ್ತನೆಯ ಕಾರ್ಯಕ್ರಮ ಕಂಡು ಅಲ್ಲಮಪ್ರಭುಗಳು ಹೀಗೆ ಉದ್ಗರಿಸಿದರು.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ
ಶಿವಭಕ್ತರಿದ್ದ ದೇಶ ಪಾವನವೆಂಬುದು ಹುಸಿಯೆ?
ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು
ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ
ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಗುರು
ಸಂಗನ ಬಸವಣ್ಣನ ಮಹಿಮೆಯ ನೋಡಾ, ಸಿದ್ಧರಾಮಯ್ಯಾ.

ಈ ಉಭಯ ದಾರ್ಶನಿಕ ದಿಗ್ಗಜರನ್ನು ಶರಣ ಸಂದೋಹ ಸಂತೋಷದಿಂದ ಸ್ವಾಗತಿಸುತ್ತದೆ. ಇಷ್ಟಲಿಂಗದ ಮಹತ್ವ, ಲಿಂಗಾಂಗ ಯೋಗದ ಶ್ರೇಷ್ಠತೆ ಅರಿತು ಕರ್ಮಯೋಗಿ ಸಿದ್ಧರಾಮೇಶ್ವರರು ಚಿನ್ಮಯ ಜ್ಞಾನಿ ಚನ್ನಬಸವಣ್ಣನವರಿಂದ ಇಷ್ಟಲಿಂಗದೀಕ್ಷೆ ಹೊಂದಿ ಲಿಂಗಾಂಗಯೋಗಿಯಾಗುವರು. ಧರ್ಮಗುರು ಬಸವಣ್ಣನವರನ್ನು ಹೃನ್ಮನ ಬುದ್ಧಿಗಳಲ್ಲಿ ತುಂಬಿಕೊಂಡ ಬಸವಯೋಗಿಯೇ ಆಗುವರು.

ಅನುಭವ ಮಂಟಪ ನಿರ್ಮಾಣ ಮಾಡಿದ ಧರ್ಮಪಿತ ಬಸವಣ್ಣನವರು ಶೂನ್ಯ ಪೀಠವನ್ನು ರಚಿಸಿ ಸೂಕ್ತ ವ್ಯಕ್ತಿಯ ಆಗಮನಕ್ಕಾಗಿ ಕಾಯುತ್ತಿದ್ದರು. ಅಂಥ ಪರಮೋನ್ನತ ಪೀಠಕ್ಕೆ ಅಧಿಕಾರಿಯಾಗಬಲ್ಲ ಅಲ್ಲಮಪ್ರಭುಗಳು ಆಗಮಿಸಿದಾಗ ವಿಶ್ವಾವಸು ವರ್ಷದ ಚೈತ್ರ ಪ್ರತಿಪದೆ ಯುಗಾದಿಯ ಶುದ್ಧ ಪಾಡ್ಯ ಸೋಮವಾರದಂದು ರೇವತಿ ನಕ್ಷತ್ರದಲ್ಲಿ ವಿಧ್ಯುಕ್ತವಾಗಿ ಶೂನ್ಯಪೀಠಕ್ಕೆ ಪೀಠಾರೋಹಣ ಮಾಡಿಸಿದಾಗ ಶರಣರ ಹರ್ಷ ಮೇರೆ ಮೀರಿತು.

ಅಲ್ಲಮನಾಗಿ ಹುಟ್ಟಿ ಆ ದಿವ್ಯ ಚೇತನ ಗುರುಕಾರುಣ್ಯ ಪಡೆದು ಪ್ರಭುವಾಗಿ, ಶೂನ್ಯ ಪೀಠವನ್ನೇರಿ ಅಲ್ಲಮಪ್ರಭುದೇವರಾದರು. ಅಲ್ಲಮ ಪ್ರಭುದೇವರ ಪೀಠಾರೋಹಣವು ಭಾರತ ದೇಶದ ಧಾರ್ಮಿಕ ಇತಿಹಾಸದಲ್ಲಿ ಅಭೂತಪೂರ್ವ ಘಟನೆ. ಗುರುತ್ವ, ಮಠ ಪೀಠಗಳ ಅಧಿಕಾರವು ಕೇವಲ ಬ್ರಾಹ್ಮಣ ವರ್ಣದ ಸೊತ್ತಾಗಿದ್ದಾಗ ಶೂದ್ರಾತಿಶೂದ್ರವಾದ ನಟುವರ ಜಾತಿಯಲ್ಲಿ ಹುಟ್ಟಿದ ಅಲ್ಲಮ ಪ್ರಭುವನ್ನು ಶೂನ್ಯ ಪೀಠಾರೋಹಣ ಮಾಡಿಸಿದ ಕೆಲಸವು ಸಮತಾವಾದವನ್ನು ಮೊಳಗಿದ ದುಂದುಭಿ ಧ್ವನಿಯಾಗಿದೆ ಎಂಬುದು ನಮಗೆಲ್ಲ ಹೆಮ್ಮೆಯ ವಿಷಯ.

ಅನುಭವ ಮಂಟಪದ ಪರಮೋನ್ನತ ಸ್ಥಾನ ಹೊಂದಿ ಅಲ್ಲಿ ನಡೆಯುತ್ತಿದ್ದ ಅನುಭವ ಗೋಷ್ಠಿಗಳ ನೇತೃತ್ವವನ್ನು ಅಲ್ಲಮಪ್ರಭುದೇವರು ವಹಿಸುತ್ತಿದ್ದರು. ಒಮ್ಮೆ ಅವರು ಧರ್ಮಪ್ರಚಾರಾರ್ಥ ಸಂಚಾರ ಹೋಗಿ, ಪುನಃ ಬಂದರು.

ಆ ಸಂದರ್ಭದಲ್ಲಿ ಪ್ರಭುದೇವರು ಎದುರಿಸಿದ ಇಬ್ಬರು ವ್ಯಕ್ತಿಗಳು ಬಹಳ ಗಮನಾರ್ಹರು. ಒಬ್ಬ ನಾಥ ಪಂಥದ ಯೋಗಿ, ಇನ್ನೊಬ್ಬ ಕಾಡಿನಲ್ಲಿ ಬೇಟೆಯಾಡುತ್ತಿದ್ದ ಕಿರಾತ. ನಾಥ ಪಂಥದ ಯೋಗಿ, ಹಠಯೋಗ ಸಾಧನೆಯಿಂದ ವಜ್ರದೇಹಿಯಾಗಿದ್ದ. ಖಡ್ಗವನ್ನು ತೆಗೆದುಕೊಂಡು ಹೊಡೆದರೆ ಆ ಖಡ್ಗವು ಕಲ್ಲಿನ ಬಂಡೆಗೆ ಹೊಡೆದಂತಾಗಿ ವಾಪಸ್ಸು ಬಂದಿತು. ಆಗ ಅಲ್ಲಮ ಪ್ರಭುದೇವರು ಅದೇ ಖಡ್ಗದಿಂದ ಹೊಡೆಯಲು ಹೇಳಿದಾಗ ಆತನು ಶಿಲೆಗೆ ಹೊಡೆಯುವಂತೆ ಖಡ್ಗ ಬೀಸಿದನು. ಅಲ್ಲಮಪ್ರಭುದೇವರ ಕಾಯವು ವ್ಯೋಮಕಾಯವಾಗಿದ್ದರಿಂದ ಖಡ್ಗವು ಹಾಯ್ದು ಆತನು ಮುಗ್ಗರಿಸಿ ಬಿದ್ದನು. ಆಗ ಪ್ರಭುದೇವರು "ಕೆಲಸಕ್ಕೆ ಬಾರದ, ಅಹಂಕಾರ ಬೆಳೆಸುವ ಇಂಥ ಸಿದ್ಧಿಗಳ ಮೋಹ ತೊರೆದು ಪರಮಾತ್ಮನ ದಿವ್ಯಜ್ಞಾನ ಪಡೆ" ಎಂದು ತಿಳಿಹೇಳಿದರು.

ಓರ್ವ ಕಿರಾತ ಕಾಡಿನ ಮುಗ್ಧ ಪ್ರಾಣಿಗಳ ಪಾಲಿಗೆ ಯಮಕಿಂಕರನಾಗಿ ಅವುಗಳನ್ನು ಬೇಟೆಯಾಡುತ್ತಿದ್ದ. "ಈ ಮುಗ್ಧ ಪಶುಪ್ರಾಣಿ ಪಕ್ಷಿಗಳನ್ನೇಕೆ ಕೊಲ್ಲುವೆ? ನಿನ್ನ ಕಾಯ ಕಾನನದಲ್ಲಿ ಚಂಚಲತೆ ಎಂಬ ಜಿಂಕೆ, ಕಾಪಟ್ಯವೆಂಬ ನರಿ, ಅಷ್ಟಮದಗಳೆಂಬ ಆನೆ, ರೋಷವೆಂಬ ಸರ್ಪ ಇವೆ. ಇವನ್ನು ಮೊದಲು ಮನಸ್ಸೆಂಬ ಬಿಲ್ಲಿಗೆ ವಿವೇಕವೆಂಬ ಬಾಣವನ್ನು ಹೂಡಿ, ಸಂಹರಿಸು" ಎಂದು ಬೋಧಿಸಿದರು.

ಉಡುತಡಿಯ ಮಹಾದೇವಿಯಕ್ಕ ವೈರಾಗ್ಯಮೂರ್ತಿಯಾಗಿ ಶರಣ ಸಂಗಮವನ್ನು ಸೇರಲು ಹಂಬಲಿಸಿ ಆಗಮಿಸಿದಾಗ ಕಟುವಾದ ಪ್ರಶ್ನೆಗಳನ್ನು ಕೇಳಿ ಪರೀಕ್ಷಿಸಿದರಾದರೂ ಈ ಸಂವಾದದ ಮೂಲಕ ಅಕ್ಕನ ಔನ್ನತ್ಯವನ್ನು ಶರಣ ಸಭೆಗೆ ಮನದಟ್ಟು ಮಾಡಿಕೊಟ್ಟುದಲ್ಲದೆ, ಗುಣಗ್ರಾಹಿಗಳಾಗಿ 'ಅಕ್ಕಾ', 'ಎನ್ನಕ್ಕಾ' ಎಂದು ಗೌರವಿಸಿದರು. ಹೀಗಾಗಿ ಅಕ್ಕ ಎಂಬುದು ಉಡುತಡಿಯ ಮಹಾದೇವಿ (ಅಕ್ಕ)ಗೆ ಪ್ರಾಪ್ತವಾದ ಗೌರವಾನ್ವಿತ ಬಿರುದಾಯಿತು. ಶ್ರೀಮದಲ್ಲಮ ಪ್ರಭುದೇವರ ದಿವ್ಯ ನೇತೃತ್ವದಲ್ಲಿ ನಡೆದ ಗಣ ಮೇಳಾಪಗಳ ವಿವರವು ಶೂನ್ಯ ಸಂಪಾದನೆ ಎಂಬ ತಾತ್ವಿಕ ಸಂವಾದ - ಕೃತಿಯಲ್ಲಿ ದಾಖಲೆಯಾಗಿರುವುದನ್ನು ಕಾಣಬಹುದು.

ಯೋಗ ಮಾರ್ಗದಲಿ ತೊಡಗಿಸಿಕೊಂಡ ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮೇಶ್ವರರಂತಹ ವಿಶೇಷ ಸಾಧಕರಿಗೆ ಅಲ್ಲಮಪ್ರಭುದೇವರು ಮಾರ್ಗದರ್ಶನ ಮಾಡುತ್ತಿದ್ದರು. ಸಗುಣ ಸಾಕ್ಷಾತ್ಕಾರ, ನಿರ್ಗುಣ ಸಾಕ್ಷಾತ್ಕಾರಗಳೆಲ್ಲವನ್ನು ಸಾಧಿಸಿದ ಅಕ್ಕಮಹಾದೇವಿ ತಾನು ಇಚ್ಛಾಮರಣಿಯಾಗಿ ಶರೀರವನ್ನು ವಿಸರ್ಜಿಸುವುದು ಹೇಗೆ ಮತ್ತು ಎಲ್ಲಿ ಎಂದು ಕೇಳಿದಾಗ ವಿಧಾನದ ವಿವರವನ್ನು ಹೇಳಿದ ಅಲ್ಲಮ ಪ್ರಭುದೇವರು ಕದಳಿಯ ವನದತ್ತ ಬೆರಳು ತೋರಿದರು. ಕೆಲವು ಸಮಯದ ನಂತರ ತಾವೂ ಸಹ ತೆರಳಿ, ನಳನಾಮ ಸಂವತ್ಸರದ ಆಷಾಢ ಶುದ್ಧ ಪ್ರತಿಪದೆ

ಸೋಮವಾರದಂದು ಕದಳಿಯ ಬನದಲ್ಲಿ ಬಯಲಾದರು, ಉರಿಯುಂಡ ಕರ್ಪುರದಂತೆ ಲಿಂಗದೇವನಲ್ಲಿ ಲೀನವಾದರು.

ನಾನೊಂದು ಕಾರಣ ಮರ್ತ್ಯಕ್ಕೆ ಬಂದೆನು
ಬಂದ ಬಳಲಿಕೆಯ ಪರಿಹರಿಸಲಿಕೆ ಚನ್ನಬಸವಣ್ಣ ಬಂದನು
ಇನ್ನು ಬಾರದಂತೆ ಪ್ರಭುದೇವರು ಬಂದರು
ಇದಕ್ಕೆ ಆಜ್ಞಾಕರ್ತ ಮಡಿವಾಳ ಮಾಚಿತಂದೆ ಬಂದನು
ನಾನಿನ್ನಾರಿಗಂಜೆನು, ಬದುಕಿದೆನು ಕಾಣಾ ಲಿಂಗದೇವಾ

ಇನ್ನು ಬಾರದಂತೆ ಪ್ರಭುದೇವರು ಬಂದರು ಎಂಬ ಧರ್ಮಪಿತರ ಮಾತಿನಲ್ಲಿ ಅಪಾರ ಅರ್ಥವಿದೆ. ಧರ್ಮಪಿತ ಬಸವಣ್ಣನವರು ಕೈಗೊಂಡ ಸಮಾಜದ ಪರಿವರ್ತನೆಯ ಕಾರ್ಯ ಸಾಮಾನ್ಯವಾದುದಲ್ಲ; ಈದ ಹುಲಿಯ ಗವಿಯನ್ನು ಹೊಕ್ಕಂತೆ. ಪುರೋಹಿತಶಾಹಿ ಅತ್ಯಂತ ಬಲಿಷ್ಠವಾಗಿರುವಾಗ, ಇದಕ್ಕೆ ಪೋಷಕವಾಗಿ ರಾಜಶಾಹಿ ಇರುವಾಗ, ಸಮತಾವಾದಿ ಸಿದ್ಧಾಂತ ಮಂಡಿಸುವುದು ಹುಡುಗಾಟದ ಮಾತಲ್ಲ. ಇಂಥ ಪರಿವರ್ತನೆಯ ಕಾರ್ಯದಲ್ಲಿ ಸಮಾನ ಮನಸ್ಕರಾಗಿ ಅರ್ಥಮಾಡಿಕೊಂಡು ಹೆಗಲುಕೊಡುವ ಸಾಮರ್ಥ್ಯವಿದ್ದ ಪ್ರೌಢ ಚೇತನ ಅಲ್ಲಮಪ್ರಭುಗಳು ಬಂದಾಗ ಧರ್ಮಪಿತ ಬಸವಣ್ಣನವರಿಗಾದ ಆನಂದ ಅಷ್ಟಿಷ್ಟಲ್ಲ. ಈ ಮಾರ್ಗದಲ್ಲಿ ಇನ್ನು "ಬಳಲಿಕೆ ಬಾರದಂತೆ ಪ್ರಭುದೇವರು ಬಂದರು" ಎಂದು ಧರ್ಮಪಿತರು ಉದ್ಗರಿಸುತ್ತಾರೆ.

ಇಂಥ ಅಲ್ಲಮಪ್ರಭುದೇವರು ನಾಡಿನಾದ್ಯಂತ ಸಂಚರಿಸಿದ್ದಾರೆ. ಹೀಗಾಗಿ ಅವರು ಪಾದವಿಟ್ಟವು ಪುಣ್ಯಕ್ಷೇತ್ರಗಳಾಗಿವೆ. ಭಕ್ತರು ತೋರುಗದ್ದುಗೆಗಳನ್ನು ಮಾಡಿ ಪೂಜಿಸುತ್ತ ಬಂದಿದ್ದಾರೆ. ಶರಣರ ಲಕ್ಷಣಗಳನ್ನು ಹೇಳುವಾಗ ಅವರು ಹೇಳುವ ಕೆಳಕಂಡ ವಚನಗಳು ಶ್ರೀ ಅಲ್ಲಮಪ್ರಭುದೇವರಿಗೆ ಅನ್ವಯವಾಗುತ್ತವೆಂದರೆ ಉತ್ಪ್ರೇಕ್ಷೆಯಲ್ಲ.

ಪುಣ್ಯಪಾಪವಿಲ್ಲಾಗಿ ಯಮನ ಹಂಗಿಲ್ಲ
ಬಂದುದನುಂಬನಾಗಿ ಮಾನವರ ಹಂಗಿಲ್ಲ
ಭವಗೆಟ್ಟವನಾಗಿ ದೈವದ ಹಂಗಿಲ್ಲ
ಸತ್ಯ ಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ
ಇನ್ನಾರ ಹಂಗಿಲ್ಲದಾತ ಗುಹೇಶ್ವರಲ್ಲಯ್ಯನೊಬ್ಬನೆ !

ಕಂಡುದೆಲ್ಲ ಪಾವನ, ಕೇಳಿತ್ತೆಲ್ಲ ಪರಮಬೋಧೆ,
ಮುಟ್ಟಿತ್ತೆಲ್ಲ ಪರುಷದ ಸೋಂಕು,
ಒಡನೆ ನುಡಿದವರೆಲ್ಲ ಸದ್ಯೋನ್ಮುಕ್ತರು
ಸುಳಿದ ಸುಳುಹೆಲ್ಲ ಜಗತ್ಪಾವನ, ಮೆಟ್ಟಿದ ಧರೆಯೆಲ್ಲ ಅವಿಮುಕ್ತ ಕ್ಷೇತ್ರ,
ಸೋಂಕಿದ ಜಲವೆಲ್ಲ ಪುಣ್ಯತೀರ್ಥಂಗಳು
ಶರಣೆಂದು ಭಕ್ತಿಯ ಮಾಡಿದವರೆಲ್ಲರು ಸಾಯುಜ್ಯರು
ಗುಹೇಶ್ವರಾ, ನಿಮ್ಮ ಸುಳುಹಿನ ಸೊಗಸನುಪಮಿಸಬಾರದು !

ಇಂತಹ ಮಹಾಮಹಿಮ ಅಲ್ಲಮಪ್ರಭುದೇವರನ್ನು ಮನದುಂಬಿ ಹಾಡಿ ಕೃತಜ್ಞತೆ ಸಲ್ಲಿಸೋಣ.

ಮಂಗಲ ಗೀತೆ

ಬೆಳಗುವೆ ಬೆಳಗುವೆ ಮಂಗಲದಾರತಿ
ಜಂಗಮ ಜ್ಯೋತಿ ಅಲ್ಲಮಪ್ರಭುವಿಗೆ ||ಪ||

ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿಯ ನೆಲದಿ
ಸುಜ್ಞಾನಿ ಮಾತೆಯ ಚಿದ್ಗರ್ಭದಿ ಜನಿಸಿ
ತಂದೆ ನಿರಂಕಾರನ ವಾತ್ಸಲ್ಯದಲಿ ಬೆಳೆದು
ದೇವನನೆ ನೆರೆ ನಂಬಿ ಶಿವಪಥದಲಿ ನಡೆದ ||1||

ಅನಿಮಿಷ ಯೋಗಿಯಿಂ ದೀಕ್ಷೆಯಿಂ ಹೊಂದಿ
ಹರಿಯುವ ತೊರೆಯಲು ಅರಿವನು ನೀಡುತ

ಬಗೆ ಬಗೆ ಸಿದ್ಧಿಯ ಸಾಧಿಸಿ ಪಡೆದು
ಬಸವ ಯೋಗ ಮಾರ್ಗಕೆ ಪ್ರೇಮದಿ ಒಲಿದ ||2||

ಗುರು ಬಸವ ಪಥವನು ಮುದದಿಂದ ಹಿಡಿದು
ಶರಣರ ಪ್ರೇಮದ ಬಿನ್ನಹಕೆ ಒಲಿದು
ಬಸವ ಕಲ್ಯಾಣದ ಅನುಭವ ಮಂಟಪದಿ
ಶ್ರೀ ಶೂನ್ಯ ಪೀಠವನು ಏರಿದ ಜಗದ್ಗುರು ||3||

ನಾನು ನನ್ನದೆಂಬ ಮಮಕಾರವಳಿದು
ಎಲ್ಲರು ನನ್ನವರೆಂಬ ಭೂಮಭಾವ ಬೆಳೆದು
ಕದಳಿಯ ಬನದಲ್ಲಿ ಲಿಂಗದೇವನ ಬೆರೆದ
ಸಚ್ಚಿದಾನಂದ ಶರಣ ಅಲ್ಲಮಪ್ರಭುಯೋಗಿ || 4 ||

4.ಲಿಂಗಾಂಗಯೋಗಿ ಸಿದ್ಧರಾಮೇಶ್ವರರ ಜೀವನ ಚರಿತ್ರೆ

(ಪಾರಾಯಣಕ್ಕೆ ಮೊದಲು ಪೂಜೆ)

ಶ್ರೀ ಸಿದ್ಧರಾಮೇಶ ಬದ್ಧತೆಯ ತೊಡೆವೀಶ
ಶರಣ ಸಂದೋಹದ ಪರಮ ಶಿವಯೋಗೀಶ || ಪ ||

ಅನುಭವ ಮಂಟಪದ ಅಮರ ಜ್ಯೋತಿಯು ಆಗಿ
ಅನುಭಾವ ದೀಪ್ತಿಯನು ಹೊಮ್ಮಿಸಿದ ಸತ್ಪುರುಷ || ಅ.ಪ ||

ಸೊನ್ನಲಾಪುರದಲ್ಲಿ ಜನ್ಮಿಸಿದ ಶಿವ ತನುಜ
ಮೃಣ್ಮಯದ ದೇಹವಂ ಮುದ್ದುಗೌಡನಿಂ ಪಡೆದೆ
ಚಿನ್ನದಂತಹ ತಾಯಿ ಸುಗ್ಗವ್ವೆಯೊಡಲಿನಿಂ
ಚಿನ್ಮಯದ ಚೋಹವಂ ತೊಟ್ಟು ನೀ ಧರೆಗಿಳಿದೆ || 1 ||

ಮೌನಯೋಗಿಯು ಆಗಿ ಬಾಲ್ಯವನು ನೀ ಕಳೆದೆ
ಧ್ಯಾನ ಲೀಲೆಯೊಳಿರ್ದು ಬಂಧನವ ಸೈರಿಸಿದೆ
ಮಲ್ಲಯ್ಯ ಮಲ್ಲಯ್ಯ ಎಂದು ಹಂಬಲಿಸುತಲಿ
ಛಲವ ತೊಟ್ಟು ನಿಜ ಮಲ್ಲಿನಾಥನ ಪಡೆದೆ || 2 ||

ಶಿಕ್ಷಾಗುರು ಪ್ರಭುವಿನಿಂ ಆತ್ಮ ಜಾಗೃತಿ ಹೊಂದಿ
ದೀಕ್ಷೆಯಿಂ ಗುರು ಚನ್ನಬಸವೇಶನಿಂ ಪಡೆದೆ
ಮೋಕ್ಷಗುರು ಬಸವನ ದಿವ್ಯ ಪಥದೊಳು ನಡೆದು
ಸೂಕ್ಷ್ಮ ಶಿವಯೋಗದ ಅನುಭೂತಿಯಂ ಪಡೆದೆ || 3 ||

ಸೊನ್ನಲಾಪುರವಾಸ ಶರಣ ಜನರೀಶ
ಅನುಭವ ಮಂಟಪದ ವಚನ ಪೀಯೂಷ
ಬಸವ ಮಾರ್ಗದಿ ನಡೆದ ಚಿನ್ಮಯ ಪುರುಷ
ಷಡ್ಗಣಾಧೀಶರಲ್ಲಿ ದಾರ್ಶನಿಕ ಪರುಷ || 4 ||

ಸಿದ್ಧರಾಮನೆ ನಿನ್ನ ಸದ್ಭಾವವಂ ಕಂಡು
ಮುಗ್ಧಳಾದೆನು ಗುರುವೆ ಪರಮ ವರವೇ
ಶರಣ ಧರ್ಮಕ್ಕೆ ಶ್ರೇಷ್ಠ ವರರತ್ನ ನೀನು
ಎಂದು ಬಸವಾತ್ಮಜೆಯು ಶರಣಾದೆ ನಾನು || 5 ||

ಶೂನ್ಯ ಪೀಠದ ಗುರುವು ನೀನಾಗಿ ಮೆರೆದೆ
ಶೂನ್ಯ ತತ್ವದ ಅರಿವ ಮಸ್ತಕದಿ ಧರಿಸಿದೆ
ವಚನದೈಸಿರಿಯ ಭಾಂಡಾರವಂ ಬೆಳೆಸಿ
ಸಚ್ಚಿದಾನಂದನ ಮೆಚ್ಚುಗೆಯ ಮಗನಾದೆ || 6 ||

4. ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರ ಜೀವನ ಚರಿತ್ರೆ

ಲಿಂಗಾಯತ ಧರ್ಮದ ಷಡ್ಗಣಾಧೀಶರಲ್ಲಿ ಒಬ್ಬರಾಗಿ, ದಾರ್ಶನಿಕ ದಿಗ್ಗಜರಾಗಿ, ಅಸಂಖ್ಯಾತ ಅನುಯಾಯಿಗಳನ್ನು ಪಡೆದು ಶರಣ ಧರ್ಮವನ್ನು ವಿಸ್ತಾರವಾಗಿ ಹಬ್ಬಿಸಿದ ಮಹಾನ್ ಚೇತನ ಬಸವ ಯೋಗಿ ಸೊನ್ನಲಾಪುರದ ಸಿದ್ಧರಾಮೇಶ್ವರರು. ಕರ್ಮಯೋಗಿ ಎಂಬ ಬಿರುದು ಅವರ ಮೇರು ವ್ಯಕ್ತಿತ್ವಕ್ಕೆ ಧ್ವನಿಯಾಗದು. ಕರ್ಮಯೋಗದ ಸಿದ್ಧಿಯನ್ನು ಪಡೆದುಕೊಂಡುದಲ್ಲದೆ ಬಸವ ಧರ್ಮ, ಬಸವ ಯೋಗ ಎಂಬ ಹೊಸ ಪದಗಳನ್ನು ಬಳಸಿದ ಶ್ರೇಷ್ಠ ತತ್ವಜ್ಞಾನಿ ಸಿದ್ಧರಾಮೇಶ್ವರರು. ಲಿಂಗಾಯತ ಧರ್ಮವನ್ನು ಕ್ರೋಢೀಕರಿಸಿ, ಸೂತ್ರೀಕರಿಸಲು ಬೇಕಾದ ವೈವಿಧ್ಯ ತಾತ್ವಿಕ ಪ್ರಮೇಯಗಳನ್ನು ವಚನಗಳಲ್ಲಿ ಕೊಟ್ಟಿರುವ ಬಸವ ಯೋಗಿ ಸಿದ್ಧರಾಮೇಶ್ವರರ ಕೊಡುಗೆ ಅಪ್ರತಿಮ.

ಇಂಥ ಸಿದ್ಧರಾಮೇಶ್ವರರು ಹುಟ್ಟಿದ್ದು ಇಂದಿನ ಮಹಾರಾಷ್ಟ್ರದಲ್ಲಿ, ಕನ್ನಡ ನಾಡಿನ ಗಡಿನಾಡಾಗಿರುವ ಸೊನ್ನಲಾಪುರದಲ್ಲಿ. ಸೊನ್ನಲಾಪುರದಲ್ಲಿ ಕೃಷಿ ಕಾಯಕದ ದಂಪತಿಗಳಾದ ಮುದ್ದೇಗೌಡ ಸುಗ್ಗವ್ವೆಯವರಿಗೆ ಇಳಿವಯಸ್ಸು ಪ್ರಾಪ್ತಿಯಾದಾಗ ಪುತ್ರ ಸಂತಾನದ ನಿರೀಕ್ಷೆಯಳಿದಿದ್ದ ಸಮಯದಲ್ಲಿ ಚಿತ್ಕಳೆಯೊಂದು ಸುಗ್ಗವ್ವೆಯಲ್ಲಿ ಮೂಡಿ ನಿಂತಾಗ ಎಲ್ಲರಿಗೂ ಅಚ್ಚರಿ. ಸಿದ್ಧಮಾರ್ಗಾನುಯಾಯಿಯಾಗಿದ್ದ ರೇವಣಸಿದ್ಧರು ಸಂಚಾರಾರ್ಥವಾಗಿ ಸೊನ್ನಲಾಪುರಕ್ಕೆ ಬಂದವರು ಒಂದು ಚಿತ್ಕಳೆಯನ್ನನುಸರಿಸಿ ಸಾಗಿದಾಗ ಶಿಷ್ಯ ವೃಂದಕ್ಕೆ ಅಚ್ಚರಿ. ಅವರು ಆಗಮಿಸಿ ಮುದ್ದೇಗೌಡನ ಮನೆಯ ಬಾಗಿಲಲ್ಲಿ ನಿಂತು ಬಿಟ್ಟಾಗ ಓಣಿಯವರಿಗಷ್ಟೇ ಅಲ್ಲ ಮುದ್ದೇಗೌಡ ದಂಪತಿಗಳಿಗೂ ಗಾಬರಿ ಮತ್ತು ಅಚ್ಚರಿ. ಆಗಮಿಸಿದ ಮುನಿಯ ಪಾದಕ್ಕೆ ನೀರೆರೆದು ಗೌರವಿಸಲು ನಿಂತ ಸುಗ್ಗವ್ವೆಗೆ ರೇವಣಸಿದ್ಧರು ತಲೆ ಬಾಗಿ ವಂದಿಸಿದಾಗ ದಂಪತಿಗಳಿಗೆ ಗಾಬರಿ ಇನ್ನಷ್ಟು ಜಾಸ್ತಿಯಾದಾಗ ರೇವಣಸಿದ್ಧರು ನುಡಿದರು, "ವಂದಿಸುತ್ತಿರುವುದು ನಿನಗಲ್ಲ ತಾಯಿ; ನಿನ್ನ ಗರ್ಭದಲ್ಲಿ ಬೆಳೆಯುತ್ತಿರುವ ಶಿವ ಚೇತನಕ್ಕೆ. ಹುಟ್ಟಿದ ಬಳಿಕ ಆ ಶಿಶುವಿಗೆ ಸಿದ್ಧರಾಮ ಎಂದು ಹೆಸರಿಡಿ" ಎಂದು ಆದೇಶ ನೀಡಿ ಹೋದರು.

ಅಂದು ಸಂಕ್ರಾಂತಿ, ಹಳತು ಕಳೆದು ಹೊಸತು ಮೂಡಿಸುವಂತೆ, ಆಗಸದ ಸೂರ್ಯನು ಪಥ ಬದಲಿಸುವ ದಿನ. ಸುಗ್ಗವ್ವೆಗೆ ಸುಖ ಪ್ರಸವವಾಯಿತು. ಮಗುವಿಗೆ ಹೆಸರಿಡುವಾಗ ರೇವಣಸಿದ್ಧರು ಹೇಳಿದ ಮಾತನ್ನು ಮೀರಿ ಮುದ್ದೇಗೌಡ -ಸುಗ್ಗವ್ವೆಯರು ಶಿವಪುತ್ರ ಸಿದ್ಧರಾಮರನ್ನು ತಮ್ಮ ಮಗನೆಂದೇ ಭಾವಿಸಿ ತಮ್ಮ ಮನೆಯ ದೈವದ ಹೆಸರು "ಧೂಳಿಮಾಕಾಳ"ಎಂದಿಟ್ಟರು. ಏನಾಶ್ಚರ್ಯ?! ಮಗು ಹಾಲನ್ನು ಕುಡಿಯುವುದನ್ನೇ ಬಿಟ್ಟಿತು. ಪಶ್ಚಾತ್ತಾಪ ಪಟ್ಟು ತಪ್ಪು ತಿದ್ದಿಕೊಂಡು ಸಿದ್ಧರಾಮ ಎಂದು ಕರೆದಾಗ ತಾಯಿಯ ಹಾಲನ್ನು ಕುಡಿಯಿತು.

ಸಿದ್ಧರಾಮರು ಪರಮ ಮೌನಿಗಳು. ಲೌಕಿಕ ಜೀವನದಲ್ಲಿ ಅನಾಸಕ್ತರು. ಉಳಿದೆಲ್ಲ ಹುಡುಗರು ಉಂಡು ತಿಂದು, ಉಟ್ಟು ತೊಟ್ಟು ನಲಿದಾಡುತ್ತಿದ್ದರೆ ಈ ಬಾಲಕ ಗಹನವಾದ ಚಿಂತೆಯಲ್ಲಿ ನೋಡುವವರ ಕಣ್ಣಿಗೆ ಮಂದಮತಿಯಂತೆ ಕಾಣುತ್ತಿದ್ದ. ತಂದೆ ತಾಯಿಯರಿಗೆ ಈಗ ಎರಗಿತು ಬುದ್ಧಿ ಮಾಂದ್ಯ ಮಗುವಿನ ಚಿಂತೆ. ಕೆಲಸ ಕಾರ್ಯಗಳಲ್ಲಿ ತೊಡಗಿದರೆ ಚಟುವಟಿಕೆ ವೃದ್ಧಿಯಾಗಬಹುದು; ಹಸಿವೆಯಾಗಿ ಚೆನ್ನಾಗಿ ಉಣ್ಣಬಹುದು ಎಂದು ತಾಯಿ ತಂದೆಯರು ಮಗ ಸಿದ್ಧರಾಮರನ್ನು ದನ ಕಾಯಲು ತಮ್ಮ ಹೊಲಕ್ಕೆ ಕಳಿಸತೊಡಗಿದರು. ಗಿಡವೊಂದರ ಕೆಳಗೆ ಶಿವಲಿಂಗವೊಂದನ್ನಿಟ್ಟುಕೊಂಡು ಪೂಜಿಸುತ್ತಾ ಹಾಡುತ್ತ ಸಿದ್ಧರಾಮರು ದಿನಗಳೆಯುತ್ತಿದ್ದರು.

ಒಂದು ದಿವಸ ಸಿದ್ಧರಾಮರು ಹೊಲದಲ್ಲಿ ಧ್ಯಾನಾಸಕ್ತರಾಗಿ ಇರುವ ಸಂದರ್ಭದಲ್ಲಿ ಓರ್ವ ಜಟಾಜೂಟಧಾರಿಯಾದ ಯೋಗಿಗಳು ಬಂದು ವಾತ್ಸಲ್ಯ ಪೂರ್ಣ ಧ್ವನಿಯಲ್ಲಿ ಸಿದ್ಧರಾಮ ಎಂದು ಕರೆದು, ತಲೆ ನೇವರಿಸಿದರು. ತನ್ನ ಅಂತರಂಗದ ಹಂಬಲಕ್ಕೆ ಬಹಿರಂಗದಲ್ಲಿ ಧ್ವನಿಕೊಟ್ಟಂತಾಗಿತ್ತು. ಸಿದ್ಧರಾಮರು ಕಣ್ತೆರೆದು ನೋಡಿ ಸಂಭ್ರಮಿತರಾಗಿ ಯೋಗಿಯ ಪಾದಕ್ಕೆ ಎರಗಿದರು. "ಇನ್ನೆಷ್ಟು ದಿನ ಈ ಮಮಕಾರದ ಗೃಹ ಬಂಧನ?"ಎಂದು ಎಚ್ಚರಿಸುವಂತೆ ಈ ಯೋಗಿಗಳು ಬಂದಿದ್ದಾರೇನೋ ಎಂಬ ಭಾವ ಸಿದ್ಧರಾಮರಲ್ಲಿ ಮೂಡಿತು. ಕಂಬಳಿಯನ್ನು ಹಾಸಿ ಕುಳ್ಳಿರಿಸಿ, ಸಂಭ್ರಮದಿಂದ ನವಣೆಯ ತೆನೆಯನ್ನು ಕಿತ್ತು ಕಾಳನ್ನು ಬೇರ್ಪಡಿಸಿ ತಿನ್ನಲು ಕೊಟ್ಟಾಗ ತಿಂದು ಹರ್ಷಿಸಿದ ಯೋಗಿಗಳು, "ನನಗೆ ಹಸಿವೆಯಾಗಿದೆ. ಮೊಸರಂಬಲಿ ಮಾಡಿಸಿಕೊಂಡು ಬರುವೆಯಾ?" ಎಂದು ಕೇಳಿದರು. ಸಿದ್ಧರಾಮರಿಗೆ ಅತೀವ ಸಂತೋಷವಾಯಿತು.

"ಆಗಲಿ, ಆದರೆ ನಾನು ಬರುವವರೆಗೆ ಇಲ್ಲೇ ಇರುವಿರಾ?"

"ಖಂಡಿತವಾಗಿಯೂ.........."

"ನೀವಾರು, ನೀವು ಎಲ್ಲಿಯವರು?" ಸಿದ್ಧರಾಮರ ಪ್ರಶ್ನೆ

"ನನ್ನ ಹೆಸರು ಮಲ್ಲಿನಾಥ ಯೋಗೀಶ್ವರ ಎಂದು, ಸದಾ ಇರುವುದು ಶ್ರೀಶೈಲದಲ್ಲಿ."

"ನಾನು ಮೊಸರಂಬಲಿ ತರುವವರೆಗೂ ಎಲ್ಲಿಗೂ ಹೋಗಬಾರದು." ಎಂದು ಬಾಲಕ ಸಿದ್ಧರಾಮರು ಮನೆಯತ್ತ ಓಡಿದರು. ಮೊಸರಂಬಲಿ ಬೇಕು ಎಂದು ಮಗ ಕೇಳುತಲೇ ಸುಗ್ಗವ್ವೆ ಹಿಗ್ಗಿ ಹೀರೆಯಾದಳು. ಎಂದೆಂದೂ ಬಾಯಿಬಿಡದ, ಆಸೆ ಪಡದ ಮಗ ಇನ್ನು ಆಸೆಪಟ್ಟು ಕೇಳುತ್ತಿದ್ದಾನೆಂದರೆ ಆಕೆಯ ಸಂತೋಷ ಹೇಳತೀರದಷ್ಟಾಯಿತು. ನವಣೆ ಅಕ್ಕಿಯ ಅನ್ನ ಮಾಡಿ, ಮೊಸರು ಕಲಸಿ ಬುತ್ತಿ ಮಾಡಿ ಕೊಟ್ಟಳು. ತೆಗೆದುಕೊಂಡು ಓಡುತ್ತಾ ಬಾಲಕ ಸಿದ್ಧರಾಮರು ಬಂದರೆ "ಮಲ್ಲಯ್ಯ ಅವನು ಇಲ್ಲಯ್ಯ" ಎಂಬ ಪರಿಸ್ಥಿತಿ. ದುಃಖವು ಉಕ್ಕಿ ಬಂದಿತು. ಯೋಗಿಯಂತೆ ಕಂಡ ಮಲ್ಲಯ್ಯ ಹೀಗೆ ಸುಳ್ಳು ಹೇಳಬಹುದೆ? ವಂಚಿಸಬಹುದೆ? "ಗಿಡಗಳೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ, ಪೇರಡವಿಯೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ" ಎಂದು ಬಾಲಕ ಸಿದ್ಧರಾಮರು ಹುಡುಕಿ ಹತಾಶರಾದರು.

ಅದೇ ಸಮಯಕ್ಕೆ ಶ್ರೀಶೈಲಕ್ಕೆ ಹೊರಟ ಪರಿಷೆಯ ತಂಡವೊಂದು ಇದಿರಾಯಿತು. "ಶ್ರೀಗಿರಿ ಮಲ್ಲಯ್ಯ ಉಘೇ ಉಘೇ. ಮಹಾಂತ ಮಲ್ಲಯ್ಯ ಉಘೇ ಉಘೇ, ಹರ ಹರ ಮಹಾದೇವ" ಎಂಬ ಘೋಷಗಳು ಅವರ ಬಾಯಿಂದ ಹೊರಹೊಮ್ಮಿ, ಬೆಟ್ಟಗಳಲ್ಲಿ ಬಯಲಲ್ಲಿ ಮಾರ್ದನಿಸುತ್ತಿತ್ತು. 'ಮಲ್ಲಯ್ಯ' ಎಂಬ ಪದ ಕೇಳಿ ಮುಗ್ಧ ಸಿದ್ಧರಾಮರ ಮನವು ಕಾರ್ಮುಗಿಲಿನ ಗರ್ಜನೆಯನ್ನು ಕೇಳಿದ ನವಿಲಿನಂತೆ ಕುಣಿದಾಡಿತು. ಕೂದಲು ನೆಟ್ಟಗಾದವು.

"ನಿಮಗೆ ಶ್ರೀಶೈಲದ ಮಲ್ಲಿನಾಥ ಗೊತ್ತೆ?" ಪರಿಷೆಯ ತಂಡದವರನ್ನು ಸಿದ್ಧರಾಮರು ಕೇಳಿದರು.

"ಗೊತ್ತು. ಅಲ್ಲಿಗೇ ನಾವು ಹೋಗುತ್ತಿರುವುದು."

ಹರ್ಷೋದ್ವಿಗ್ನರಾಗಿ ಪರಿಷೆಯ ತಂಡದೊಡನೆ ಬಾಲಕ ಸಿದ್ಧರಾಮರು ಸಾಗಿದರು. ಪಾತಾಳ ಗಂಗೆಯಲ್ಲಿ ಮಿಂದು ಸಾಲಿನಲ್ಲಿ ದರ್ಶನಕ್ಕೆ ನಡೆದರು. ಗರ್ಭಗುಡಿಯೊಳಗೆ ಹೋಗಿ ಸ್ಥಾವರ ಲಿಂಗವನ್ನು ನೋಡುತ್ತಲೇ ಅವರ ಆಸೆಯ ಗುಳ್ಳೆ ಸಿಡಿಯಿತು.

"ಅಯ್ಯೋ.......... ಈ ಮಲ್ಲಯ್ಯ ಅಲ್ಲ ನನಗೆ ಬೇಕಾಗಿರುವುದು. ಜೀವಂತ ಮಲ್ಲಯ್ಯ ಬೇಕು." ನಿರಾಶೆಯಿಂದ ನುಡಿದರು.

"ನಮಗೆ ಗೊತ್ತಿರುವುದು ಈ ಮಲ್ಲಯ್ಯ ಮಾತ್ರ........" ಎಂದರವರು.

ಸಿದ್ಧರಾಮರು ಶ್ರೀಶೈಲದ ಅರಣ್ಯದಲ್ಲಿ ಹುಡುಕ ತೊಡಗಿದರು. ಮಲ್ಲಯ್ಯ ಸಿಗದೆ ಇದ್ದಾಗ ಛಲ ತೊಟ್ಟರು. "ಮೂರು ದಿವಸ ಹುಡುಕುತ್ತೇನೆ. ಸಿಗದಿದ್ದರೆ ಮರಳಿ ಊರಿಗೆ ಹೋಗದೆ ಈ ರುದ್ರಗಮ್ಮರಿಯಲ್ಲಿ ಹಾರಿ ಸಾಯುತ್ತೇನೆ." ಬಾಲಕ ಸಿದ್ಧರಾಮರ ಈ ಪ್ರತಿಜ್ಞೆಯ ಧ್ವನಿ ಎಲ್ಲಡೆ ಪ್ರತಿಧ್ವನಿಸಿತು. ಶ್ರೀಶೈಲದ ಕಾನನದಲ್ಲಿ ಹಬ್ಬಿ ಹರಿದಾಡಿತು. ಒಂದು ದಿನ ಕಳೆಯಿತು. ಮಲ್ಲಿನಾಥರು ಸಿಗಲೇ ಇಲ್ಲ, ಎರಡನೆಯ ದಿನವೂ ಕಳೆಯಿತು. ಮೂರನೆಯ ದಿನ ಬಂದಿತು. ಸೂರ್ಯಾಸ್ತವು ಸಮೀಪಿಸುತ್ತದೆ. ಬಾಲಕ ಸಿದ್ಧರಾಮರು ರುದ್ರಗಮ್ಮರಿಯ ತುದಿಯಲ್ಲಿ ಪದ್ಮಾಸನದಲ್ಲಿ ಕುತಿದ್ದಾರೆ. ಎಲ್ಲ ಜನರು ಉದ್ವಿಗ್ನಗೊಂಡಿದ್ದಾರೆ. ಯಾರು ಏನೇ ಹೇಳಿದರೂ ಬಾಲಕ ಸಿದ್ಧರಾಮರು ತಮ್ಮ ದೃಢ ಸಂಕಲ್ಪದಿಂದ ಹಿಂದೆ ಸರಿಯಲು ಸಿದ್ಧರಿಲ್ಲ. ಸೂರ್ಯಾಸ್ತದ ಗಳಿಗೆ ಇನ್ನೇನು ಬರುತ್ತಿದೆ.

"ಮಲ್ಲಿನಾಥ ಯೋಗೀಶ್ವರ ನನ್ನನ್ನು ನಂಬಿಸಿ, ವಂಚಿಸಿದ್ದೇಕೆ? ಸೂರ್ಯನು ಪಶ್ಚಿಮದಲ್ಲಿ ಕಾಣೆಯಾಗುತಲೇ ನಾನು ನಿನ್ನ ನಾಮಸ್ಮರಣೆ ಮಾಡಿ ರುದ್ರಗಮ್ಮರಿಯಲ್ಲಿ ಧುಮುಕಲಿದ್ದೇನೆ. ಆ ಕ್ಷಣ ಸಮೀಪಿಸುತ್ತಿದೆ."

ಮಲ್ಲಿನಾಥ ಯೋಗೀಶ್ವರರು ಶ್ರೀಶೈಲದ ಸಮೀಪದಲ್ಲಿ ಹೆಚ್ಚು ಸಂಚಾರವಿಲ್ಲದ ಪ್ರದೇಶದಲ್ಲಿ ಧ್ಯಾನ -ಮೌನಗಳಲ್ಲಿ ತಲ್ಲೀನರಾಗಿದ್ದರು. ಕೆಲವು ಜನ ಯಾತ್ರಿಕರು ಸಿದ್ಧರಾಮರ ಕಥೆಯನ್ನೇ ಬಗೆಬಗೆಯಾಗಿ ಬಣ್ಣಿಸುತ್ತ ಓಡಾಡುತ್ತಿದ್ದರು. ಕೈಯಲ್ಲಿ ಮೊಸರಂಬಲಿಯ ಗಂಟನ್ನು ಹಿಡಿದ ಬಾಲಕನೋರ್ವ ಮಲ್ಲಿನಾಥಾ ಎಂದು ಕಾಡಿನಲ್ಲೆಲ್ಲ ಅರಸುತ್ತಿದ್ದಾನೆ. ಮೂರು ದಿನದೊಳಗೆ ಬರದೇ ಇದ್ದರೆ ರುದ್ರಗಮ್ಮರಿಯೊಳಕ್ಕೆ ಹಾರುತ್ತಾನಂತೆ.

ಮೊಸರಂಬಲಿ ಎಂಬ ಪದ ಕೇಳುತ್ತಲೇ ಮಲ್ಲಿನಾಥ ಯೋಗೀಶ್ವರರಿಗೆ ಬಾಲಕ ಮೌನಯೋಗಿ ಸಿದ್ಧರಾಮರ ನೆನಪಾಯಿತು. ಎಳೆಗರುವನ್ನು ನೆನಪು ಮಾಡಿಕೊಂಡು ಓಡಿ ಬರುವ ಆಕಳಂತೆ. ಆ ಬಾಲಕನನ್ನು ಅರಣ್ಯದಲ್ಲಿ ಹುಡುಕುತ್ತ ಧಾವಿಸಿದರು. ಸೂರ್ಯಾಸ್ತಕ್ಕೆ ಕೆಲವೇ ಕ್ಷಣಗಳಿರುವಾಗ ಓಡಿ ಬಂದು, ಕಣ್ಣು

ಮುಚ್ಚಿ ಕುಳಿತ ಬಾಲಕನ ತಲೆಯ ಮೇಲೆ ಕೈಯಿಟ್ಟು "ವತ್ಸಾ...... ನೋಡು ನಾನು ಬಂದಿದ್ದೇನೆ. ನೀನು ಹುಡುಕುತ್ತಿರುವ ನಾನೇ ಬಂದಿದ್ದೇನೆ......" ಎಂದು ನೇವರಿಸಿದರು. ಕಣ್ತೆರೆದ ಸಿದ್ಧರಾಮರು ಪಾದದ ಮೇಲೆ ಬಿದ್ದು ಹರ್ಷಾತಿರೇಕದಿಂದ ಆನಂದ ಬಾಷ್ಪಹರಿಸಿದರು. ಸಿದ್ಧರಾಮರನ್ನು ಮಲ್ಲಿನಾಥ ಯೋಗಿಗಳು ಮೇಲೆತ್ತಿ ಸಂತೈಸಿದರು. ಸಿದ್ಧಮಾರ್ಗದ ಮಂತ್ರೋಪದೇಶವನ್ನು ಮಾಡಿದರು. ಕೆಲವು ಕಾಲ ಅವರ ಸನ್ನಿಧಿಯಲ್ಲಿ ಸಾಧನಾ ಮಾರ್ಗದಲ್ಲಿದ್ದ ಸಿದ್ಧರಾಮರನ್ನು ಎಚ್ಚರಿಸಿ ಯೋಗಿಗಳು ನುಡಿದರು. "ಇನ್ನು ಕರ್ತವ್ಯ ಪರನಾಗು. ಸೊನ್ನಲಾಪುರವೇ ಶ್ರೀಶೈಲವಾಗಲಿ, ಮಲ್ಲಿಕಾರ್ಜುನನನ್ನು ಅಲ್ಲೇ ಸ್ಥಾಪಿಸಿ, ಲೋಕಹಿತದ ಕಾರ್ಯಗಳನ್ನು ಮಾಡು."

ಸಿದ್ಧರಾಮರು ಮರಳಿದರು, ಕರ್ಮಯೋಗಿಗಳಾದರು. ಕೆರೆ ಬಾವಿ ದೇವಾಲಯ ಕಟ್ಟುತ್ತ ನೂರೊಂದು ಗುಡಿ ಕಟ್ಟಿ ಶಿವಲಿಂಗ ಸ್ಥಾಪನೆ ಮಾಡುವ ಸಂಕಲ್ಪ ಹೊತ್ತರು. ಅನ್ನದಾನ ಸತ್ರಗಳನ್ನು ಏರ್ಪಡಿಸಿ ನಿರಂತರ ಅನ್ನದಾನ ಮಾಡಿಸತೊಡಗಿದರು. ಅವರ ಕೀರ್ತಿವಾರ್ತೆ ನಾಲ್ದೆಸೆಗೂ ಹಬ್ಬ ತೊಡಗಿತು.

ಕೀರ್ತಿವಾರ್ತೆಯ ಪ್ರವಾಹದಲ್ಲಿ ಆನಂದ ತುಂದಿಲರಾಗಿ ಅವರು ತೇಲುತ್ತಿರುವಾಗ ಅವರ ಅಹಂಮ್ಮಿನ ಗುಳ್ಳೆಯನ್ನು ಒಡೆಯುವಂತೆ ಜಂಗಮ ಮೂರ್ತಿ ಅಲ್ಲಮಪ್ರಭುಗಳು ಬಂದರು. ಸಿದ್ಧರಾಮರ ಅಧ್ಯಾತ್ಮಿಕ ಪ್ರವೃತ್ತಿ ಅವರ ಅಂತರಂಗಕ್ಕೆ ಮನವರಿಕೆಯಾಯಿತು. ಆದರೆ ಬಹಿರಂಗದಲ್ಲಿ ಬಹುದೊಡ್ಡ ಸಂಸಾರವನ್ನು, ಜಂಜಾಟವನ್ನು ಅವರು ಹಚ್ಚಿಕೊಂಡಂತೆ ಕಾಣಿಸುತ್ತಿತ್ತು. ನೂಲ ಸಂಕೋಲೆಯಾದ ಸಂಸಾರ ಬೇಡವೆಂದು ನಿರಾಕರಿಸಿ ಈ ವ್ಯವಹಾರ ಜಂಜಡ ಎಂಬ ಬಂಗಾರದ ಸಂಕೋಲೆಯಲ್ಲಿ ಸಿಕ್ಕಿಬಿದ್ದ ಈ ಮಹಾನ್ ಚೇತನ ತನ್ನ ಕರ್ತವ್ಯವನ್ನು ಅರಿಯದಂತಾಗಿದೆ ಎಂದು ವಿಷಾದಿಸಿ, ಕೆರೆ ಕಟ್ಟುತ್ತಿದ್ದ ಶಿಷ್ಯರನ್ನು ಕಂಡು, "ಎಲ್ಲಿ ನಿಮ್ಮ ವಡ್ಡರಾಮಯ್ಯ? ಎಂಥಾ ಹಗರಣಕ್ಕೆ ಸಿಕ್ಕಿಬಿದ್ದಿದ್ದಾರೆ ನಿಮ್ಮ ಗುರುಗಳು!" ಎಂದು ಛೇಡಿಸಿದರು. ಇಂಥ ಮೂದಲಿಕೆ ಕೇಳಿ ಸಿಟ್ಟಿಗೆದ್ದ ಆ ಶಿಷ್ಯರು ಅಲ್ಲಮ ಪ್ರಭುವಿನತ್ತ ಕಲ್ಲು ಬೀಸಿದರು, ಹಗ್ಗ ಹಾಕಿ ಕಟ್ಟಲು ಶ್ರಮಿಸಿದರು. ವ್ಯೋಮಕಾಯ ಸಿದ್ಧರಾದ ಅವರನ್ನು ಕಟ್ಟಲಾಗದೆ ತಮ್ಮನ್ನು ತಾವೇ ಕಟ್ಟಿಕೊಂಡರು, ಎಸೆದ ಕಲ್ಲು ಪುನಃ ಅವರಿಗೇ ಬಡಿದವು. ಘಾಸಿಯಾಗಿ ಶ್ರೀ ಸಿದ್ಧರಾಮರತ್ತ ಓಡಿ ಹೋಗಿ ಪಾದಕ್ಕೆರಗಿ ತಮಗಾದ ಗಾಯಗಳನ್ನು ತೋರಿಸಿದರು. ಕೆರಳಿದ ಸಿದ್ಧರಾಮರು ಕೋಪೋದ್ರಿಕ್ತರಾಗಿ ಬಂದರು, ಅಲ್ಲಮಪ್ರಭುವನ್ನು ಸುಟ್ಟು ಬಿಡುವರೇನೋ ಎಂಬಂತೆ ರೌದ್ರಾವತಾರ ತಾಳಿ ಕೆಂಗಣ್ಣು ಬೀರಿ ನಿಂತರು. ಅಲ್ಲಮಪ್ರಭುಗಳು ವಿಚಲಿತರಾಗದೆ ಮೋಹಕ ನಗೆ ನಕ್ಕರು.

"ಯೋಗಿಗೆ ಕೋಪವೇ ಮಾಯೆ! ಎಂಥಾ ಜಂಜಾಟದ ಜಾಲ ನಿನ್ನದು ಸಿದ್ಧರಾಮಯ್ಯ. ಕಲ್ಲುಮಣ್ಣುಗಳ ಕೆರೆ ಕಟ್ಟಿ ನೀರು ನಿಲ್ಲಿಸುವ ಕೆಲಸವನ್ನು ಯಾರು ಬೇಕಾದರೂ ಮಾಡುವರು. ನೀನು ರಾಜಗುರು; ಶಿಷ್ಯರಿಗೆ ಆಜ್ಞೆ ಮಾಡು. ನಾನು-ನೀನು ಕಟ್ಟಬೇಕಾದುದು ಪಾರಮಾರ್ಥದ ಕೆರೆ, ತುಂಬ ಬೇಕಾದುದು ಜ್ಞಾನದ ನೀರು. ಈ ನೀರು ಸೀಮಿತವಾಗಿ ನಿಲ್ಲುವುದು. ಜ್ಞಾನದ ನೀರು ದೇಶ-ಕಾಲಾತೀತವಾಗಿ ಹರಿಯುವುದು. ಸ್ಥಾವರ ಗುಡಿ ಕಟ್ಟಿ ಸಂಪತ್ತನ್ನು ಜಡಗಟ್ಟಿಸುವುದೇಕೆ? ಜಂಗಮ ದೇವಾಲಯ ಕಟ್ಟುವಂತೆ ಜನರಿಗೆ ಉದಾತ್ತ ಸಂಸ್ಕಾರ ನೀಡಬೇಕು. ನಿಜ ಜಂಗಮನು ನಿಂತ ನೀರಾಗಬಾರದು. ಹರಿಯುವ ನದಿಯಾಗಬೇಕು. ನೀನು ಅಪ್ರತಿಮ ಜ್ಞಾನಿ. ನಿನ್ನ ಶಕ್ತಿ, ಸಮಯ ಕೀರ್ತಿವಾರ್ತೆಯ ಕೆಲಸದಲ್ಲಿ ವ್ಯರ್ಥವಾಗುತ್ತಿದೆ. ಕಲ್ಯಾಣದ ಬಸವಣ್ಣನವರ ಜನ ಪರಿವರ್ತನೆಯ ಕಾರ್ಯವನ್ನು ನೋಡು ಸಿದ್ಧರಾಮಯ್ಯ. ಕಾಲ್ಪನಿಕ ಕೈಲಾಸದ ಕಲ್ಪನೆ ಬಿಡಿಸಿ, ಸತ್ತಂತಿದ್ದ ಸಮಾಜದ ಗರ್ಭದಿಂದಲೇ ಜೀವಂತ ಸಮಾಜವೊಂದನ್ನು ನಿರ್ಮಿಸಿದ್ದಾರೆ. ಆ ಮಹಾಪುರುಷನ ಕಾರ್ಯದಲ್ಲಿ ನಾನು-ನೀನು ಕೈಜೋಡಿಸೋಣ."

ಸಿದ್ಧರಾಮರ ಕಣ್ಣಿಂದ ಹೊರಟ ಕೋಪದ ಅಗ್ನಿ, ಅಲ್ಲಮ ಪ್ರಭುವಿನ ಶ್ರೀಚರಣದಲ್ಲಿ ಅಡಗಿತೇನೋ ಎಂಬಂತೆ ಸಿದ್ಧರಾಮೇಶ್ವರರು ವಂದಿಸಿದರು.

"ಕಲ್ಯಾಣ, ಬಸವಣ್ಣ ಈ ಪದಗಳು ನನ್ನನ್ನು ರೋಮಾಂಚಿತನನ್ನಾಗಿ ಮಾಡುತ್ತಿವೆ. ಹೋಗೋಣ ನಡೆಯಿರಿ." ಎಂದು ಸಹರ್ಷದಿಂದ ನುಡಿದರು. ಗೌರಿಶಂಕರ ಮತ್ತು ಮೇರು ಪರ್ವತಗಳೆರಡೂ ಜೊತೆಗೂಡಿ ಬಂದಂತೆ ಕಲ್ಯಾಣಕ್ಕೆ ಅಲ್ಲಮಪ್ರಭುಗಳು, ಸಿದ್ಧರಾಮರು ಬಂದರು. ಇಷ್ಟಲಿಂಗದ ಆವಶ್ಯಕತೆ ಏನಿದೆ? ಎಂಬ ಸಂವಾದದಲ್ಲಿ ಭಾಗಿಯಾದರು. ಕಡೆಗೆ ಅದರ ಮಹತ್ವವನ್ನು ಅರಿತು ಧರ್ಮಗುರು ಬಸವಣ್ಣನವರ ಸನ್ನಿಧಿಯಲ್ಲಿ, ವ್ಯೋಮಕಾಯ ಸಿದ್ಧ ಅಲ್ಲಮಪ್ರಭುಗಳ ದಿವ್ಯ ಸಮ್ಮುಖದಲ್ಲಿ ಚಿನ್ಮಯಜ್ಞಾನಿ ಚೆನ್ನಬಸವಣ್ಣನವರಿಂದ ಸಿದ್ಧರಾಮೇಶ್ವರರಿಗೆ ಇಷ್ಟಲಿಂಗ ದೀಕ್ಷೆಯು ನೆರವೇರಿತು.

ಕರ್ಮಯೋಗದವರ ಕಡಿದು ಖಂಡಿಸಿದನು
ನಿರ್ಮಳ ನಿರ್ವಂಚಕನು ಬಸವ ಲಿಂಗ
ನಿರ್ಮಳ ರೂಪನು ಬಸವ ಲಿಂಗಕೆ ಅಂಜಿ
ಎನ್ನ ಕಾಡಿತು ಗುರುವೆ ಯೋಗಿನಾಥ

ಎಂದು ನುಡಿದು, ಕರ್ಮಯೋಗದ ಸಂಕೋಲೆ ಕಳಚ ಲಿಂಗಾಂಗ ಯೋಗಿಯಾದರು ಸಿದ್ಧರಾಮೇಶ್ವರರು. ತಮ್ಮ ದೀಕ್ಷಾನುಗ್ರಹ ಪ್ರಸಂಗವನ್ನು ಬಹಳ ಮಾರ್ಮಿಕವಾಗಿ ಅವರು ಬಣ್ಣಿಸುತ್ತಾರೆ.

ಅಧ್ಯಾತ್ಮ ಅಧ್ಯಾತ್ಮವೆಂಬಿರಿ; ಅಧ್ಯಾತ್ಮವಾರಿಗೆ?
ಶ್ರೀಗುರು ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ,
ಕರಸ್ಥಳದಲಿ ಕೊಟ್ಟ ಬಳಿಕ, ಅಕ್ಷರವೈದರಲ್ಲಿ ಮುಕ್ತನ ಮಾಡಿದ ಬಳಿಕ,
ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯು ಪ್ರಾಣಿಯಾಗಿರ್ದುದ ಕೊಂದು
ಲಿಂಗಪ್ರಾಣಿಯ ಮಾಡಿದ ಬಳಿಕ,
ಮರಳಿ ಯೋಗವುಂಟೆ ಶಿವಯೋಗವಲ್ಲದೆ?
ಲಿಂಗಾರ್ಚನೆಯ ಮಾಡಿ ಜಂಗಮಪ್ರಸಾದವ ಕೊಂಡ ಬಳಿಕ,
ಬರಿಯ ಯೋಗಕ್ಕೆ ಒಡಂಬಡುವುದೆ ಅರಿವು?
ಇಂತಪ್ಪವನತಿಗಳೆದು ಶುದ್ಧಶಿವಯೋಗಿಯ ಮಾಡಿದಾತ ಚನ್ನಬಸವಣ್ಣ
ಮಹಾಲೋಕದಲ್ಲಿಪ್ಪ ಅಕ್ಷರದ್ವಯವ ಭೇದಿಸಿ ತಂದು ಕರಸ್ಥಲದಲ್ಲಿರಿಸಿ,
ಇದು ಉರುತರ ಪದವೆಂದು ತೋರಿಸಿಕೊಟ್ಟು,
ಎನ್ನ ತನ್ನಂತೆ ಮಾಡಿದ ಗುರು ಚನ್ನಬಸವಣ್ಣ.
ಆನು ಚನ್ನಬಸವಣ್ಣನ ಕರುಣದಿಂದ ಅಭ್ಯಾಸಯೋಗವನತಿಗಳೆದು,
ಶಿವಯೋಗದಲ್ಲಿ ನಿತ್ಯನಾಗಿ,
ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಎಂಬ
ಷಡುಸ್ಥಲಕ್ಕೆ ಅಧಿಕಾರಿಯಾದೆನು, ನಿನ್ನವರ ಸಲುಗೆಗೆ ಸಂದೆನು.
ಶ್ರೀ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ.

ದೀಕ್ಷಾಬದ್ಧರಾಗಿ, ಇಷ್ಟಲಿಂಗಧಾರಿಗಳಾಗಿ ಸಿದ್ಧರಾಮೇಶ್ವರರು ಸೊನ್ನಲಾಪುರಕ್ಕೆ ಹೋದಾಗ ಕೆಲವು ಜನರು ಆಕ್ಷೇಪವನ್ನು ಹೀಗೆ ವ್ಯಕ್ತಪಡಿಸುತ್ತಾರೆ. ಅಪ್ರತಿಮ ಸಿದ್ಧಪುರುಷರಾದ ನೀವು ಇಷ್ಟಲಿಂಗ ದೀಕ್ಷೆ ಹೊಂದಿದುದು ಏಕೆ? ಎಂದು. ಆಗ ಅವರು ಕೊಡುವ ಉತ್ತರ ಅತ್ಯಂತ ಅಮೂಲ್ಯ

ಕಸವಕೊಂಡು ಹೊಸ ಧಾನ್ಯವ ಕೊಟ್ಟಡೆ, ಒಲ್ಲೆಂಬ ಚದುರರಾರು?
ಜಲವಕೊಂಡು ಅಮೃತವ ಕೊಟ್ಟಡೆ, ಒಲ್ಲೆಂಬ ಭಾಷೆಯದಾರದು?
ಎನ್ನಂತರಂಗದ ಅಜ್ಞಾನವ ಕೊಂದು ಸುಜ್ಞಾನವಪ್ಪ ಕರತೇಜವ ಕೊಟ್ಟಡೆ,
ಒಲ್ಲೆಂಬ ಪಾತಕಿ ಯಾರು, ಕಪಿಲಸಿದ್ಧ ಮಲ್ಲಿಕಾರ್ಜುನ ?

ಪರುಷ ಸೋಂಕಿದ ಬಳಿಕ ಕಾರ್ಬೊನ್ನದ ಕೇಡು ನೋಡಿರಯ್ಯಾ,
ಜ್ಯೋತಿ ಸೋಂಕಿದ ಬಳಿಕ ತಮಂಧದ ಕೇಡು ನೋಡಿರಯ್ಯಾ,
ಅಮೃತ ಸೋಂಕಿದ ಬಳಿದ ರೋಗದ ಕೇಡು ನೋಡಿರಯ್ಯಾ,
ನಮ್ಮ ಯೋಗಿನಾಥನ ಸೋಂಕಿದ ಬಳಿಕ ಭವದ ಕೇಡು ನೋಡಿರಯ್ಯಾ.

ಭಾರತ ದೇಶದ ಇತಿಹಾಸದಲ್ಲಿ ಶರಣ ಧರ್ಮಕ್ಕೆ ಕೀರ್ತಿಯ ಕಿರೀಟವನ್ನೇರಿಸಿದ ವರ್ಣಾಂತರ ವಿವಾಹವು ಕಲ್ಯಾಣದಲ್ಲಿ ನಡೆಯುತ್ತದೆ. ಹುಟ್ಟಿನಿಂದ ಸಮಗಾರರಾಗಿ ಶರಣರಾದ ಹರಳಯ್ಯನವರ ಮಗನಿಗೆ ಹುಟ್ಟಿನಿಂದ ಬ್ರಾಹ್ಮಣರಾಗಿ ಶರಣರಾದ ಮಧುವರಸರ ಮಗಳು ಲಾವಣ್ಯವತಿಯನ್ನು ಕೊಟ್ಟು ವಿವಾಹವನ್ನು ಧರ್ಮಗುರು ಬಸವಣ್ಣನವರು ಮಾಡಿಸಿದಾಗ ಸಂಪ್ರದಾಯವಾದಿಗಳು ಸಿಡಿದೆದ್ದರು. ಬಿಜ್ಜಳ ರಾಜನಿಗೆ ಪ್ರಚೋದನೆ ನೀಡಿ ಧರ್ಮಗುರು ಬಸವಣ್ಣನವರನ್ನು ಗಡಿಪಾರು ಮಾಡಿಸಲಾಯಿತು. ವಿವಾಹದಲ್ಲಿ ಭಾಗಿಗಳಾದುದಕ್ಕೆ ಶರಣರಾದ ಹರಳಯ್ಯ, ಮಧುವರಸ, ಶೀಲವಂತರನ್ನು ಬಂಧಿಸಿ, ಕಾಯ್ದ ಕಬ್ಬಿಣದ ಸಲಾಕೆಯಿಂದ ಕಣ್ಣು ಕೀಳಿಸಿ, ಆನೆಯ ಕಾಲಿಗೆ ಕಟ್ಟಿ ಎಳೆಹೂಟೆ ಶಿಕ್ಷೆ ನೀಡಿ ವಧಿಸಲಾಯಿತು. ಜಾತಿವಾದಿಗಳ ಕಣ್ಣು ಇದ್ದುದು ವಚನ ಸಾಹಿತ್ಯದ ಮೇಲೆ ಅದನ್ನು ನಾಶ ಪಡಿಸುವ ತಂತ್ರವನ್ನು

ಸಂಪ್ರದಾಯವಾದಿಗಳು ಹೂಡಿದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಯ್ಯನವರು ಪ್ರಾಣವನ್ನು ಪಣಕ್ಕಿಟ್ಟು ವಚನ ಸಾಹಿತ್ಯ ರಕ್ಷಿಸುವ ಸಂಕಲ್ಪ ತೊಟ್ಟರು. ಎರಡು ತಂಡಗಳಾಗಿ ಮಾಚಯ್ಯನವರ ನೇತೃತ್ವದಲ್ಲಿ ಒಂದು ತಂಡವು ಸಹ್ಯಾದ್ರಿಯತ್ತ ಸಾಹಿತ್ಯದೊಡನೆ ಹೊರಟಿತು. ಚಿನ್ಮಯಜ್ಞಾನಿ ಚನ್ನಬಸವಣ್ಣ, ಅಕ್ಕನಾಗಲಾಂಬಿಕೆಯವರು ಸೊನ್ನಲಾಪುರಕ್ಕೆ ಧಾವಿಸಿ ಕ್ಷಿಪ್ರ ಕ್ರಾಂತಿಯ ವಿವರಗಳನ್ನು ಸಿದ್ಧರಾಮೇಶ್ವರರಿಗೆ ವಿವರಿಸಿ, ಶೂನ್ಯ ಪೀಠದ ಮೂರನೆಯ ಅಧಿಕಾರಿಯನ್ನಾಗಿ ಅವರನ್ನು ಮಾಡಿ, ಅಧಿಕಾರವನ್ನು ಹಸ್ತಾಂತರಿಸಿ ಸಹ್ಯಾದ್ರಿಯತ್ತ ನಡೆದರು. ಬಹಳ ದೂರ ಕ್ರಮಿಸಲಾರದ ವಯೋವೃದ್ಧರು, ನಿಸ್ಸಹಾಯಕರಾದ ಶರಣರಿಗೆ ಸಿದ್ಧರಾಮೇಶ್ವರರು ಆಶ್ರಯ ನೀಡಿದರು. ಮಾತ್ರವಲ್ಲ ತಮ್ಮ ಶಿಷ್ಯೆ ರಾಜಮಾತೆ ರಾಣಿ ಚಾಮಲಾದೇವಿಗೆ ಆದೇಶ ನೀಡಿ ಶರಣರ ಬೆಂಗಾವಲಿಗೆ, ವಚನ ವಾಙ್ಮಯ ರಕ್ಷಣೆಗಾಗಿ ಸೈನ್ಯವನ್ನು ಕಳಿಸಲು ನೆರವಾದರು.

ಒಂದು ಹೃದಯ ಸ್ಪರ್ಶಿ ಪ್ರಸಂಗವು ಬಸವ ಯೋಗಿ ಸಿದ್ಧರಾಮೇಶ್ವರರ ಔನ್ನತ್ಯವನ್ನು ಚಿತ್ರಿಸುತ್ತದೆ. ಬಿಜ್ಜಳನ ಸಾವಿನ ನಂತರ ಆತನ ತಮ್ಮ ಕರ್ಣದೇವನು ಪಟ್ಟಕ್ಕೆ ಏರಲು ಬಯಸಿ, ಶೂನ್ಯ ಪೀಠಾಧೀಶ ಸಿದ್ಧರಾಮೇಶ್ವರರ ಅಮೃತ ಹಸ್ತದಿಂದ ಪಟ್ಟಾಭಿಷೇಕ ಮಾಡಿಸಿಕೊಳ್ಳಲು ಆಹ್ವಾನ ನೀಡುತ್ತಾನೆ. ''ನಮ್ಮ ಶರಣರಿಗೆ ವಿಲಕ್ಷಣ ಹಿಂಸೆ ಕೊಟ್ಟು ವೈಯಕ್ತಿಕವಾಗಿ ನನ್ನನ್ನು ಸನ್ಮಾನಿಸುವುದು ನನಗೆ ಇಷ್ಟವಾಗದ ವಿಚಾರ. ಬಸವಣ್ಣನಿಲ್ಲದ ಕಲ್ಯಾಣ ಕಟುಕರ ಕೇರಿಯಾಗಿದೆ. ಅಲ್ಲಿಗೆ ನಾನು ಬರುವುದಿಲ್ಲ.'' ಎಂದು ನಿರಾಕರಿಸುತ್ತಾರೆ. ಎಂಥಾ ತತ್ವ ನಿಷ್ಠೆ! ಬಸವಾದಿ ಪ್ರಮಥರೊಡನೆ ಎಂಥಾ ಭಾವನಾತ್ಮಕ ಸಂಬಂಧ! ಒತ್ತಾಯಪೂರ್ವಕವಾಗಿ ಕರೆತರಲು ಕರ್ಣದೇವನು ಸೈನ್ಯಾಧಿಕಾರಿಗಳನ್ನು ಕಳಿಸುತ್ತಾನೆ. ಅವರು ಮೇನೆಯಲ್ಲಿ ಕುಳ್ಳಿರಿಸಿಕೊಂಡು ಬರುವರು. ಮಾರ್ಗಮಧ್ಯ ಒಂದು ಕಡೆ ಬೀಡುಬಿಟ್ಟಿರುತ್ತಾರೆ. ರಾತ್ರಿ ಕಳೆದು ಬೆಳಿಗ್ಗೆ ನೋಡಿದರೆ ಮೇನೆಯಲ್ಲಿ ಸಿದ್ಧರಾಮೇಶ್ವರರು ಇರುವುದೇ ಇಲ್ಲ.

ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರು ದಾರ್ಶನಿಕ ಹೃದಯಿ, ಹೆಂಗರುಳಿನ ಸಂತ, ಭಾವ ಜೀವಿ, ಬಸವಾದಿ ಪ್ರಮಥರ ಪ್ರಭಾವದಿಂದ ದೀಕ್ಷಾಪೂರ್ವದಲ್ಲೇ ವಚನಗಳನ್ನು ಬರೆಯಲು ಆರಂಭಿಸಿದಾಗ ಕಪಿಲಸಿದ್ಧಮಲ್ಲಿಕಾರ್ಜುನ ಎಂಬ ವಚನಾಂಕಿತದೊಡನೆ ಬರೆದರು. ಅಲ್ಲಮಪ್ರಭುಗಳ ಪ್ರಯತ್ನದಿಂದ ಕರ್ಮಯೋಗದ ಜಂಜಡ ತೊರೆದು ಶರಣ ಮಾರ್ಗಕ್ಕೆ ಬಂದರು. ನಂತರ ನಿರಾಕಾರ, ನಿರ್ಗುಣ ಚೇತನನಾದ ಪರಮಾತ್ಮನನ್ನು ಸಂಕೇತಿಸುವಂತೆ ಯೋಗಿನಾಥ ಎಂಬ ವಚನ ಮುದ್ರಿಕೆ ಇಟ್ಟುಕೊಂಡರು.

ಬಸವ ಯೋಗಿ ಸಿದ್ಧರಾಮೇಶ್ವರರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಅವರ ಸಾಹಿತ್ಯವು ನಿರರ್ಗಳವಾಗಿ, ಅರ್ಥ ಪೂರ್ಣವಾಗಿ, ತಾಳ ಲಯಬದ್ಧವಾಗಿ ಹರಿಯುತ್ತದೆ. ಸಂಗೀತ ಶಾಸ್ತ್ರ ಕೋವಿದರಿರಬೇಕೆಂಬುದಕ್ಕೆ ಸಾಕ್ಷಿ ನುಡಿವಂತೆ ಛಂದೋಬದ್ಧವಾಗಿ ಬಸವ ಸ್ತೋತ್ರ ತ್ರಿವಿಧಿ, ಮಿಶ್ರ ಸ್ತೋತ್ರ ತ್ರಿವಿಧಿ, ಅಷ್ಟಾವರಣ ತ್ರಿವಿಧಿಗಳು ಬರೆಯಲ್ಪಟ್ಟಿವೆ. ಅಧ್ಯಾತ್ಮಿಕವಾಗಿ ಅತ್ಯುನ್ನತ ಸ್ಥಿತಿಯನ್ನು ಪಡೆದಿದ್ದರೂ ಹಸುಮಗುವಿನಂತೆ ಎಲ್ಲ ಶರಣರ ಸ್ತೋತ್ರವನ್ನು ಮಿಶ್ರ ಸ್ತೋತ್ರದ ತ್ರಿವಿಧಿಯಲ್ಲಿ ಮಾಡಿದ್ದಾರೆ. ವಿಶ್ವಗುರು ಬಸವಣ್ಣನವರ ಬಹುಮುಖಿಯಾದ ವಿರಾಟ ರೂಪಿ ವ್ಯಕ್ತಿತ್ವವನ್ನು ಬಸವ ಸ್ತೋತ್ರ ತ್ರಿವಿಧಿಯಲ್ಲಿ ಚಿತ್ರಿಸುತ್ತಾರೆ. ಮಡಿವಾಳಯ್ಯನ ಮನೆಯ ಕಡೆಯ ಬಾಗಿಲ ಕಾಯ್ವ ಭಂಟ ನಾನು ಎಂದು ಅತ್ಯಂತ ವಿನೀತರಾಗಿ ನುಡಿದು ನಮ್ಮಗಳ ಹೃದಯದಲ್ಲಿ ಉನ್ನತ ಸ್ಥಾನವನ್ನು ಗಳಿಸಿಕೊಳ್ಳುತ್ತಾರೆ. ಅತ್ಯಂತ ಸಾಮಾನ್ಯ ಕಾಯಕದ, ಹಿಂದುಳಿದ ವರ್ಗಗಳಿಂದ ಬಂದ ಶರಣರನ್ನು ಸಿದ್ಧರಾಮೇಶ್ವರರು ಕೊಂಡಾಡುವುದನ್ನು ನೋಡಿದಾಗ ಅವರ ಹೃದಯ ವೈಶಾಲ್ಯಕ್ಕೆ ನಮ್ಮ ಮನಸ್ಸು ಮೂಕವಾಗುತ್ತದೆ.

ಸೊನ್ನಲಾಪುರದ ಪ್ರಾಂತ್ಯದಲ್ಲಿ ಲಿಂಗಾಯತ ಧರ್ಮವು ಹಬ್ಬಬೇಕಾದರೆ ಮುಖ್ಯ ಕಾರಣ ಮಹಾಶರಣ ಸಿದ್ಧರಾಮೇಶ್ವರರು. ದಕ್ಷಿಣ ಕರ್ನಾಟಕವನ್ನು ಸಹ ಸಂದರ್ಶಿಸಿ ಧರ್ಮ ಜಾಗೃತಿ ಮಾಡಿದ್ದಾರೆ. ಯೋಗ ಶರೀರಿಯಾಗಿ ದೀರ್ಘಕಾಲ ಬಾಳಿ ನಂತರ ಇಚ್ಛಾಮರಣಿಯಾಗಿ ಸೊಲ್ಲಾಪುರದಲ್ಲೇ ಉರಿಯುಂಡ ಕರ್ಪುರದಂತೆ ಲಿಂಗದೇವನಲ್ಲಿ ಐಕ್ಯರಾಗಿದ್ದಾರೆ. ಇಂತಹ ಶ್ರೇಷ್ಠ ಚೇತನ ಸಿದ್ಧರಾಮೇಶ್ವರರನ್ನು ಒಂದು ಗೀತೆಯ ಮೂಲಕ ಕೊಂಡಾಡಿ ಅವರ ಅನುಗ್ರಹಕ್ಕಾಗಿ ಪ್ರಾರ್ಥನೆ ಸಲ್ಲಿಸೋಣ.

ಮಂಗಲ ಗೀತೆ

ಬೆಳಗುವೆ ಬೆಳಗುವೆ ಮಂಗಲದಾರತಿ
ಜಂಗಮ ಜ್ಯೋತಿ ಸಿದ್ಧರಾಮೇಶಗೆ ॥ ಪ ॥

ಸುಗ್ಗವ್ವೆ ಮುದ್ದುಗೌಡ ದಂಪತಿ ಗರ್ಭದಿ

ಸೊನ್ನಲಾಪುರದಲ್ಲಿ ಜನನವಂ ಹೊಂದಿ
ನಂಬಿದ ಭಕ್ತರ ಮಮತೆಯಿಂ ಪೊರೆಯಲು
ಇಂಬಿನಿಂ ವಿರತಿಯ ಪಥವನು ಹಿಡಿದ ॥ 1 ॥

ಗುರು ಚನ್ನಬಸವನ ಕರಜನಿತನಾಗಿ
ವರಗುರು ಬಸವನ ಕರುಣೆಯ ಪಡೆದು
ಅನುಭಾವ ಸಿರಿಯನು ಉರದಲಿ ಧರಿಸಿ
ಸುಜ್ಞಾನ ಬೆಳಗಿನಿಂ ಮೆರೆದಿಹ ಶಿವಗುರು ॥ 2 ॥

ಅನುಭವ ಮಂಟಪದ ಚಿಜ್ಯೋತಿಯಾಗಿ
ವಚನದ ನುಡಿಗಳ ಹೃದಯದಿಂ ಉಲಿದು
ಪರಮಾರ್ಥ ಕೆರೆಯನು ಪ್ರೇಮದಿ ಕಟ್ಟಿ
ಅರಿವಿನ ಜಲವನು ಲೋಕಕೆ ನೀಡಿದ ॥ 3 ॥

ದಾರ್ಶನಿಕ ಕ್ಷೇತ್ರದ ದಿಗ್ಗಜವಾಗಿ
ವರ್ಷಿಸಿ ಕರುಣೆಯ ಸುಜಲವ ತ್ಯಾಗಿ
ಘನಯೋಗಿನಾಥಗೆ ಒಲಿದ ವಿರಾಗಿ
ಸಚ್ಚಿದಾನಂದ ಸುತ ಸಿದ್ಧರಾಮಯೋಗಿ ॥ 4 ॥

ಅಕ್ಟೋಬರ್ 12, 13, 14ರಂದು ಬಸವ ಕಲ್ಯಾಣದಲ್ಲಿ ಏಳನೆಯ ಕಲ್ಯಾಣ ಪರ್ವ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ಮೇ 1, 2 ಮತ್ತು 3ರಂದು ಕಲ್ಯಾಣ ಪರ್ವ ಎಂಬ ಧಾರ್ಮಿಕ ಉತ್ಸವವನ್ನು 2002ರಿಂದಲೂ ನಡೆಸಿಕೊಂಡು ಬರಲಾಗುತ್ತಿತ್ತಷ್ಟೆ. ಏಳನೆಯ ಕಲ್ಯಾಣ ಪರ್ವವು 2008ರ ಮೇ 1, 2,3ರಂದು ನಡೆಯಬೇಕಿತ್ತು. ಆದರೆ ಎರಡೂ ವರ್ಷ ಮಳೆ ಮತ್ತು ಭಯಂಕರ ಗಾಳಿಯಿಂದ ಪೆಂಡಾಲ್ ಕಿತ್ತು ಹೋಯಿತು. ತಗಡುಗಳು ಗಾಳಿಗೆ ಹಾರಿಹೋದವು. ಅದು ತೀವ್ರವಾದ ಬಿಸಿಲಿನ ಪ್ರದೇಶವಾದ್ದರಿಂದ ಕೆಲವು ಭಾಗಗಳವರು ಬರಲು ಹಿಂಜರಿಯುತ್ತಾರೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕಲ್ಯಾಣ ಪರ್ವದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ.

ಅಶ್ವಯುಜ ಪೌರ್ಣಿಮೆಯನ್ನು ವೀರ ಮಾತೆ ಅಕ್ಕನಾಗಲಾಂಬಿಕೆಯ ಹೆಸರಿನಲ್ಲಿ ಆಚರಿಸುತ್ತಿದ್ದೇವೆ. ಇದಕ್ಕೆ ಹೊಂದಿಕೊಂಡು ಕಲ್ಯಾಣ ಪರ್ವವನ್ನು 2008ರ ಅಕ್ಟೋಬರ್ 12, 13, 14ರಂದು ಆಚರಿಸಲಾಗುವುದು (ಸಂಸ್ಥೆಯ ಕ್ಯಾಲೆಂಡರಿನಲ್ಲಿ ಅಕ್ಟೋಬರ್ 7, 8, 9ರಂದು ಎಂದು ಮುದ್ರಿಸಲಾಗಿದೆ. ಅದು ದಸರಾದ ದಿನಗಳಾದ್ದರಿಂದ ಜನರಿಗೆ ಅನಾನುಕೂಲವಾಗುತ್ತದೆ ಎಂದು ಬಹಳ ಜನರು ಅಭಿಪ್ರಾಯಪಟ್ಟುದರಿಂದ ವಿಜಯ ದಶಮಿ (ದಿ.9) ಮುಗಿದ ಎರಡು ದಿನಗಳ ಮೇಲೆ ಇಡಲಾಗಿದೆ.)

ಈ ಬದಲಾವಣೆಯನ್ನು ಗಮನಿಸಬೇಕು ಮತ್ತು ಪ್ರಚಾರ ಮಾಡಬೇಕೆಂದು ವಿನಂತಿಸುತ್ತೇವೆ.

ವಚನ ಪುಷ್ಪ

ಅಗ್ನಿಯ ಧಗೆಗೆನ್ನ ತನುವು ಸುಡಲಿ ; ಕಾಮದ ಧಗೆಗೆ ಎನ್ನ ಮನವು ಸುಡದಿರಲಿ;
ಕ್ರೂರ ಪ್ರಾಣಿಯ ಬಾಯಿಗೆ ಎನ್ನ ತನುವು ಸಿಗಲಿ ; ಕ್ರೋಧದ ಬಾಯಿಗೆ ಎನ್ನ ಮನವು ಸಿಗದಿರಲಿ;
ಸಂಪೂರ್ಣ ವಿಷವುಳ್ಳ ಸರ್ಪವೆನ್ನ ಕಚ್ಚಲಿ ; ಲೋಭದಾ ವಿಷಸರ್ಪ ಎನ್ನ ಮನವ ಕಚ್ಚದಿರಲಿ;
ಜ್ವಾಲಾಮುಖಿಗೆ ಎನ್ನ ತನುವು ಸಿಲುಕಲಿ; ಮೋಹದಾ ಜ್ವಾಲಾಮುಖಿಗೆ ಎನ್ನ ಮನವು ಸಿಲುಕದಿರಲಿ
ಮಂಜಿನಲ್ಲಿ ಎನ್ನ ತನುವು ಮಂಜುಗಡ್ಡೆಯಾಗಲಿ,
ಮದವೆಂಬ ಮಂಜಿನಲ್ಲಿ ಎನ್ನ ಮನವು ಗಡ್ಡೆಯಾಗದಿರಲಿ
ಭೂಗರ್ಭದೊಳಗೆನ್ನ ತನುವು ಬೀಳಲಿ; ಮತ್ಸರದ ಗರ್ಭದೊಳಗೆನ್ನ ಮನವು ಬೀಳದಿರಲಿ
ನಿರಾಕಾರ ಪ್ರಭು ಲಿಂಗದೇವ
ಇಂತಿ ಅರಿಷಡ್‌ವರ್ಗಗಳು ಎನ್ನ ಮನವ ಕಾಡದಿರಲಿ.

- ಅರುಣ ಕುಮಾರ್.ಸಿ.
8ನೇ ತರಗತಿ, ಬಸವ ಗಂಗೋತ್ರಿ, ಅನಾಥಾಲಯ

ಮಾಯೆಯ ಉಪಟಳ

ಕಳೆದ ಸಂಚಿಕೆ (ಜೂನ್ 2008)ಯಲ್ಲಿ ಜನಿತಕ್ಕೆ ತಾಯಾಗಿ ಎಂಬ ವಚನಕ್ಕೆ ಅರ್ಥವನ್ನು ನಾನು ಬರೆದು ಬಾಲ್ಯದಲ್ಲಿಗುರು ಬಸವಣ್ಣನವರು ಎತ್ತಿರುವ ಸಂದೇಹವಿದು; ವೈದಿಕ ಧರ್ಮದ ಪ್ರಕಾರ ತಾಯಿ, ಹೆಂಡತಿ, ಮಗಳು ಆಗುವ ಪುರುಷ ಜೀವನದ ಅವಿಭಾಜ್ಯ ಅಂಗವಾದ ಸ್ತ್ರೀ ಮಾಯೆ. ಇದಕ್ಕೆ ಪರಿಹಾರವೇನು? ಎಂದು ಬಸವರಸರು ಇಲ್ಲಿ ಚಿಂತಿಸಿದ್ದಾರೆ ಎಂದು ಬರೆದಿದ್ದೆ.

ಇದಕ್ಕೆ ಹೀಗೂ ವ್ಯಾಖ್ಯಾನ ಮಾಡಬಹುದು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಮಾಯೆಯ ಪ್ರಭಾವದಿಂದ ತಾಯಿಯಾಗಿ ಜನ್ಮಕೊಡುತ್ತಾಳೆ, ಪತ್ನಿಯಾಗಿ ಕೂಡುತ್ತಾಳೆ, ಇದೇ ಮಾಯೆಯಿಂದಲೇ ಮಗಳಾಗಿ ಹುಟ್ಟುತ್ತಾಳೆ.

ಈ ವ್ಯಾಖ್ಯಾನವನ್ನು ಒಪ್ಪಿಕೊಂಡರೆ ಮಾನವ ಜನ್ಮವು ಮಾಯೆಯ ಪ್ರತಿಫಲ, ಪಾಪಾತ್ಮಕ ಎಂದಾಗುತ್ತದೆ. ಕೂಟದಿಂದ ಜನ್ಮ ತಳೆದ ಮಗಳು ಮಾಯೆಯಾದರೆ ಮಗನೂ ಮಾಯೆಯೇ ಅಲ್ಲವೆ? ಸ್ತ್ರೀ ಕುಲವನ್ನು ಮಾತ್ರ ಮಾಯೆಯ ಸಾಲಿಗೆ ಸೇರಿಸಬೇಕೆ ಎಂಬ ಪ್ರಶ್ನೆ ಉಳಿಯುತ್ತದೆ.

16. ಅಸಮರ್ಪಕ ವಚನ

ಬೇರೆ ಎಲ್ಲರ ಪ್ರಕಾಶನಗಳಲ್ಲಿದ್ದು ಬಸವ ವಚನ ದೀಪ್ತಿಯಲ್ಲಿ ತೆಗೆದು ಹಾಕಿರುವ ವಚನಗಳಲ್ಲಿ ಈ ಕೆಳಗಿನದು ಒಂದು.

ಕೊಡೆವಿಡಿಯೆ, ಕುದುರೆಯ ದೃಢವುಳ್ಳ ರಾವುತನೇರೆ
ಕೊಡೆ ಕೋಟಿ, ಶೂರರು ಹನ್ನಿಬ್ಬರಯ್ಯಾ !
ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ
ಅರಿದು ಕೊಲುವಡೆ ರಿಪುಗಳ ಕಲಿತನವ ನೋಡಾ
ಆವಿಗೆಯಲೊದಗಿದ ಪುತ್ಥಳಿಯ ರೂಹಿನಂತಾಯಿತ್ತು
ಲಿಂಗದೇವಾ, ನಿಮ್ಮ ಹೆಸರಿಲ್ಲದ ಹೆಸರು !

ಯುದ್ಧ ರಂಗದಲ್ಲಿ ಬೇರೆ ಬೇರೆ ಮಟ್ಟದ ಸೈನಿಕರಿರುತ್ತಾರೆ. ಸಾಮಾನ್ಯ ಪದಾತಿಗಳಿಗಿಂತಲೂ ಕುದುರೆಯ ಮೇಲೆ ಕುಳಿತು ಯುದ್ಧ ಮಾಡುವವರು ಹೆಚ್ಚಿನ ಶೂರರು. ಅವರ ಹಿಂದೆ ಕುಳಿತ ಸೇವಕರು ತಲೆಯ ಮೇಲೆ ಕೊಡೆಯನ್ನು ಹಿಡಿದಿರುತ್ತಾರೆ. ಯುದ್ಧ ರಂಗದಲ್ಲಿ ನೋಡಿದಾಗ ಅಸಂಖ್ಯಾತ ಕೊಡೆಗಳು ಕಾಣಬರುತ್ತವೆ. ಕೋಟಿ ಜನರ ಮಧ್ಯೆ ನಿಜವಾದ ಶೂರರು ಹನ್ನೆರಡು ಜನ ಸಿಕ್ಕುವುದೂ ದುರ್ಲಭ.

(ಅದೇ ರೀತಿ ಜೀವನ ಎಂಬ ಹೋರಾಟದ ಕಣದಲ್ಲಿ ಎಲ್ಲರೂ ಧೈರ್ಯವಾನರಂತೆ ಜಿತೇಂದ್ರಿಯರಂತೆ ಕಾಣುತ್ತಾರೆ. ಆದರೆ ಅಸಂಖ್ಯಾತ ಜನರ ಮಧ್ಯೆ ನಿಜವಾಗಿಯೂ ಜೀವನವನ್ನು ಎದುರಿಸುವವರು, ಜಿತೇಂದ್ರಿಯರು ಬಹಳ ಸ್ವಲ್ಪ ಜನರು.)

ಚಂದ್ರಕಾಂತದ ಗಿರಿಯು ಕನ್ನಡಿಯಂತೆ ಹೊಳೆಯುವಾಗ ಅದರ ಮುಂದೆ ಬಂದು ನಿಂತ ಆನೆಯು ತನ್ನೆದುರಿನಲ್ಲಿ ಮತ್ತೊಂದು ಆನೆ ಇದೆ ಎಂದು ಸೆಣಸಲು ಆರಂಭಿಸಿ ವಿನಾ ಕಾರಣ ದಣಿಯುತ್ತದೆ. ನಿಜವಾದ ಶತ್ರು ಇದಿರಾದಾಗ ಅದನ್ನು (ಅಥವಾ ಅವನನ್ನು) ಗುರುತಿಸಿ ಕೊಲ್ಲುವುದು ನಿಜವಾದ ಕಲಿತನ.

(ಅದೇ ರೀತಿ ವ್ಯಕ್ತಿಯು ತನ್ನೊಳಗಣ ಮದ ಮತ್ಸರ ಇತ್ಯಾದಿ ಗುಣಗಳನ್ನೇ ಎದುರಲ್ಲಿ ಆರೋಪಿಸಿ ಕೊಂಡು ಕಾದಾಡುತ್ತಾನೆ. ನಿಜವಾದ ಶತ್ರುಗಳು ಎಂದರೆ ಕಾಮಕ್ರೋಧ ಲೋಭ ಮೋಹ ಮದ ಮತ್ಸರಗಳು. ಇಂಥ ಶತ್ರುಗಳನ್ನು ಗುರುತಿಸಿ ಕೊಲ್ಲುವುದರಲ್ಲಿ ನಿಜವಾದ ಕಲಿತನವಿದೆ.)

ಆವಿಗೆಯೊಳಗೆ ಸುಳಿವ ಕಿಚ್ಚು ಹೊಗೆಯಾಗಿ ಮೇಲೇರುವಾಗ ವಿವಿಧ ರೂಪಗಳು ಕಾಣಬರುತ್ತವೆ. ನಮ್ಮ ಊಹೆಗೆ ಅನುಗುಣವಾಗಿ (ಮೋಡಗಳಲ್ಲಿ ವಿವಿಧ ಪ್ರಾಣಿಗಳ ಮುಖ ಇತ್ಯಾದಿ ಊಹಿಸುವಂತೆ) ಏರುವ ಹೊಗೆಯಲ್ಲಿ ಬಗೆ ಬಗೆಯ ರೂಹಿನ ಪುತ್ಥಳಿ ತೋರುವಂತೆ , ದೇವರಿಗೆ ನಾನಾ ಹೆಸರುಗಳನ್ನು (ರೂಪಗಳನ್ನು) ಕಲ್ಪಿಸಲಾಗುವುದು. ರೂಪವಿಲ್ಲದ ದೇವನಿಗೆ ರೂಪವನ್ನು, ಹೆಸರಿಲ್ಲದ ದೇವನಿಗೆ ನಾನಾ ಹೆಸರುಗಳನ್ನು ಕಲ್ಪಿಸಿಕೊಂಡು ಜನರು ಪರಸ್ಪರ ವೈಷಮ್ಯದಿಂದ ಕಾದಾಡುವುದು ಕಾಣಬರುತ್ತದೆ.

ಈ ಜಗತ್ತಿನಲ್ಲಿ ಭಕ್ತರಂತೆ ಬಹಳ ಜನರು ತೋರಿ ಬರುವವರಾದರೂ ನಿಜವಾಗಿಯೂ ದೇವನನ್ನು ಅರಿತವರು, ಅಂತರಂಗದ ಮದಮತ್ಸರ ಗೆದ್ದವರು, ಆಂತರಿಕ ರಿಪುಗಳನ್ನು ಮರ್ದಿಸುವವರು ಬಹು ಕಡಿಮೆ.

ಈ ವಚನದಲ್ಲಿ ಪ್ರತಿ ವಾಕ್ಯದ ಆಂತರ್ಯವೂ ಬದಲಾಗುತ್ತ ಹೋಗುವುದರಿಂದ ಉಳಿದ

ವಚನಗಳಲ್ಲಿ ಕಾಣುವ ತಾತ್ವಿಕ ಏಕರೂಪತೆ, ಸುಸಂಬದ್ಧತೆ ಕಾಣ ಬರುವುದಿಲ್ಲ. ಅದಕ್ಕಾಗಿ ಬಸವ ವಚನ ದೀಪ್ತಿಯಲ್ಲಿ ಕಡಿತ ಮಾಡಲಾಗಿದೆ.

17. ಧ್ಲಲ್ಲರ ಚಿಂತೆ

ಇಂದಿಂಗೆಂತು ನಾಳಿಂಗೆಂತು ಎಂದು
ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ !
ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ !
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ !
ಎಂದೆಂದೂ ಸದಾ ಶಿವನ ಕುಂದದೆ ನೆನೆಯಲೀಯದೆ
ಕೊಂದುದಯ್ಯ ಈ ಮಾಯೆ, ಲಿಂಗದೇವ ಬ.ವ.ದೀ.15

ಮನುಷ್ಯನ ಮನಸ್ಸಿಗೆ ಸಮಾಧಾನ ಎಂಬುದೇ ಇರುವುದಿಲ್ಲ. ಇಂದಿನ ಬದುಕಿಗೆ ಹೇಗೆ? ನಾಳೆಗೆ ಹೇಗೆ? ಎಂದು ಸದಾ ಚಿಂತಿಸುತಲೇ ಇರುವನು. ಈ ಶರೀರವು ಸದಾ ಬೇಯುವ ಭಾಂಡ, ಶಾರೀರಿಕ ಬಯಕೆಗಳಾದ ಹಸಿವು, ತೃಷೆ, ನಿದ್ರೆ, ಮಾನಸಿಕ ಬಯಕೆಗಳಾದ ವಿಷಯ, ಮೈಥುನ, ಬಯಕೆ ಇವೆಲ್ಲ ಸುಡುವ ಅಗ್ನಿಯಂತೆ. ಇವುಗಳನ್ನು ತಣಿಸುವುದರಲ್ಲೇ ಜೀವನವಿಡೀ ಸವೆದು ಹೋಗುತ್ತದೆ.

ಈ ಜನ್ಮಕ್ಕೆ ಬರುವ ಮೊದಲು ಎಷ್ಟು ಜನ್ಮಗಳಲ್ಲಿ ನಾನು ಬಂದಿದ್ದೇನೆ ಎಂಬ ಬಗ್ಗೆ ಜಿಗುಪ್ಸೆ, ತಿರಸ್ಕಾರ ಇರಬೇಕು. ಈಗಿನದನ್ನಾದರೂ ಬೆಲೆಯುಳ್ಳ ಜನ್ಮವನ್ನಾಗಿ ಮಾಡಿಕೊಂಡು ಮುಕ್ತಿಯನ್ನು ಸಾಧಿಸಬೇಕು ಎಂಬ ಬುದ್ಧಿವಂತಿಕೆ, ವಿವೇಕ ಪ್ರಜ್ಞೆ (ಯುಕ್ತಿ) ಇರಬೇಕು.

ಸದಾಕಾಲದಲ್ಲೂ ಪರಮಾತ್ಮನನ್ನು ತಪ್ಪದೆ ನೆನೆಯಲು ಬಿಡದೆ ಮನಸ್ಸಿನ ಚಂಚಲತೆ ಎಂಬ ಮಾಯೆ ಅಡ್ಡಿಯುಂಟು ಮಾಡುತ್ತದೆ.

18. ಚಂಚಲತೆಯ ಮಾಯೆ

ದಿಟ -ಪುಟ ಭಕ್ತಿ ಸಂಪುಟ ನೆಲೆಗೊಳ್ಳದಾಗಿ
ಟಿಂಬಕನನಾಡಿಸುತಿದ್ದಿತ್ತಯ್ಯಾ ನಿನ್ನ ಮಾಯೆ;
ಟೀವಕ ಟಿಂಬಕನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ
ಲಿಂಗದೇವಯ್ಯಾ, ಹೊನ್ನು ಹೆಣ್ಣು ಮಣ್ಣು ತೋರಿ ! ಬ.ವ.ದೀ.16

ಮನಸ್ಸು ಚಂಚಲತೆ ಎಂಬ ಮಾಯೆಗೆ ಒಳಗಾಗುವುದು ಏಕೆ ? ಭಕ್ತಿ ಸಂಪುಟವು ದಿಟವಾಗಿ ಅಂದರೆ ಸತ್ಯವಾಗಿ ಇಲ್ಲದಿರುವುದು ಮತ್ತು ಪುಟಗೊಳ್ಳದಿರುವುದು ಅರ್ಥಾತ್ ಪಕ್ವವಾಗದಿರುವುದು. ಟೀವಕ ಎಂದರೆ ಕುಣಿಸುವವ, ಟಿಂಬಕ ಎಂದರೆ ಕುಣಿಯುವವ, ಕೋತಿಯನ್ನು ಆಡಿಸುವವನು ಟೀವಕ, ಕೋತಿ ಟಿಂಬಕ. ವಿವಿಧ ವಾದ್ಯಗಳನ್ನು ಬಾರಿಸುವವ ಟೀವಕ, ಅದರ ತಾಳಕ್ಕೆ ತಕ್ಕಂತೆ ಕುಣಿಯುವವ ಟಿಂಬಕ. ಮನಸ್ಸಿನ ಮಾಯೆ ಟೀವಕನಾಗಿ ವ್ಯಕ್ತಿಯನ್ನು ಟಿಂಬಕನನ್ನಾಗಿ ಮಾಡಿ ಕುಣಿಸುತ್ತದೆ. ಹೀಗೆ ಕುಣಿಸುವಾಗ ಬೇರೆ ಬೇರೆ ಆಮಿಷವನ್ನೂ ತೋರಬಹುದು. ಇಲ್ಲಿ ಮಾಯೆಯು ತೋರಿಸುವ ಆಮಿಷಗಳೆಂದರೆ ಹೆಣ್ಣು-ಹೊನ್ನು-ಮಣ್ಣು. ಇಡೀ ಜಗತ್ತೆಲ್ಲವೂ ಕುಣಿಯುತ್ತಿರುವುದು ಈ ಆಮಿಷಗಳ ತಾಡನಕ್ಕೆ ಮರುಳಾಗಿಯೆ!

19. ಶರಣರ ಅಭಯ

ಆಸತ್ತೆ ಅಲಸಿದೆನೆಂದರೆ ಮಾಣದು;
ಬೇಸತ್ತೆ ಬೆಂಬಿದ್ದೆನೆಂದರೆ ಮಾಣದು;
ಏವೆನೇವೆನೆಂದರೆ ಮಾಣದು
ಕಾಯದ ಕರ್ಮದ ಫಲಭೋಗವು!
ಲಿಂಗದೇವನ ಶರಣರು ಬಂದು
ಹೋ, ಹೋ, ಅಂಜದಿರೆಂದರಾನು ಬದುಕುವೆನು ! ಬ.ವ.ದೀ-17

ಬಹಳಷ್ಟು ದಣಿವಾಗಿದೆ, ಆಲಸ್ಯ ಉಂಟಾಗಿದೆ ಓಡಲು ಆಗುತ್ತಲಿಲ್ಲ ಎಂದರೂ ಕರ್ಮದ ಫಲ ಭೋಗವು ಬಿಡದು. ಬೇಸರವಾಗಿದೆ ಎಂದು, ಬೆನ್ನು ಮೇಲಾಗಿ ಬಿದ್ದು ನಿಸ್ಸಹಾಯಕತೆ ವ್ಯಕ್ತಪಡಿಸಿದರೂ ಬಿಡದು. ಏನು ಮಾಡಲಿ ಎಂತು ಮಾಡಲಿ ಎಂದು ಪರದಾಡಿದರೂ ಬಿಡದು ಈವರೆಗೆ ಮಾಡಿದ ಕರ್ಮದ ಫಲಭೋಗವು.

ಅಮೆರಿಕಾದಲ್ಲಿ ಈ ಜೀವನವನ್ನು ರ್‍ಯಾಟ್ ರೇಸ್ -ಇಲಿಯ ಓಟಕ್ಕೆ ಹೋಲಿಸುವುದುಂಟು. ಓಡಿ ಓಡಿ ಇಲಿ ದಣಿದು ಇನ್ನು ಓಡಲಾರೆ ಎಂಬ ದೈಹಿಕ ಸ್ಥಿತಿಯನ್ನು ತಲ್ಪಿರುತ್ತದೆ. ಆದರೆ ಓಡುವುದು ಅನಿವಾರ್ಯವಾಗಿರುತ್ತದೆ. ಏಕೆಂದರೆ ಬೆಕ್ಕು ಅದನ್ನು ಬೆನ್ನು ಹತ್ತಿರುತ್ತದೆ. ಇಂದಿನ ಆಧುನಿಕ ಜೀವನದ ಪರಿಸ್ಥಿತಿಯೂ ಹೀಗೆ ಆಗಿದೆ. ಹಿಂದಿನ ಜನ್ಮದಲ್ಲಿ, ಈ ಜನ್ಮದಲ್ಲಿ ಇಂದಿನವರೆಗೂ, ಈ ಕ್ಷಣದವರೆಗೂ ಮಾಡಿರುವ ಕರ್ಮಗಳ ಒತ್ತಡವು ವಿಧಿ (Fate) ಯಾಗಿ ಜೀವಿಯಾಗಿ ಬೆನ್ನು ಹತ್ತಿರುತ್ತದೆ. ಇದಕ್ಕೆ ಸಂಚಿತ ಕರ್ಮ ಎನ್ನುವರು. ತಾನು ಮಾಡಿದ್ದನ್ನು ತಾನು ಉಣ್ಣಲೇಬೇಕು. ಈ ಪರಿಸ್ಥಿತಿಯಿಂದ ಪಾರಾಗಲು ದಾರಿ ಇಲ್ಲವೆ?

1. ಮಾನವನು ಮಾಡುವ ಕರ್ಮಗಳ ಫಲ ಭೋಗವನ್ನು ಅವನು ಅನುಭವಿಸಲೇ ಬೇಕು ತಪ್ಪಿಸಿಕೊಳ್ಳಲು ಬರದು.

2. ಕರ್ಮಫಲದ ಯಾತನೆಯಿಂದ ಮುಕ್ತಗೊಳ್ಳಲು ಗುರುವಿನ, ಶರಣರ ಅನುಗ್ರಹದಿಂದ ಸಾಧ್ಯ.

20. ಮಂತ್ರ ಜಪದ ಮಹತ್ವ

ಸಂಸಾರವೆಂಬ ಸರ್ಪ ಮುಟ್ಟಲು
ಪಂಚೇಂದ್ರಿಯ ವಿಷಯವೆಂಬ ವಿಷದಿಂದ
ಆನು ಮುಂದುಗೆಟ್ಟೆನಯ್ಯಾ
ಆನು ಹೊರಳಿ ಬೀಳುತ್ತಿದ್ದೇನಯ್ಯಾ!
'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತ್ತಿದ್ದೇನಯ್ಯಾ
ಲಿಂಗದೇವಾ ಬ.ವ.ದೀ.18

ಅರಿಷಡ್ವರ್ಗಗಳು, ಅಷ್ಟಮದಗಳು, ಸಪ್ತವ್ಯಸನ ಇತ್ಯಾದಿಗಳ ಜಾಲವೇ ಸಂಸಾರ. ಈ ಸರ್ಪವು ಕಚ್ಚುತ್ತದೆ. ಅವು ತಂದು ಹಾಕುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ವಿಷಯಗಳ ವಿಷವು ವ್ಯಕ್ತಿಯಲ್ಲಿ ಏರುತ್ತದೆ. ಆಗ ಅವನು ವಿವೇಕ ಪ್ರಜ್ಞೆಯನ್ನು ಕಳೆದುಕೊಂಡಂತೆ ವರ್ತಿಸುವನು. ನಿರ್ಧಾರ ತೆಗೆದುಕೊಳ್ಳಲಾರದೆ ಚಟಪಟಿಸುವನು. ಇಂತಹ ಸ್ಥಿತಿಯಲ್ಲಿರುವಾಗ ಇರುವ ಪರಿಹಾರವೆಂದರೆ ಷಡಕ್ಷರಿ ಮಂತ್ರದ ಜಪ. ಜಪಿಸುತ್ತ ಹೋದಂತೆ ವಿವೇಕ ಶೂನ್ಯತೆಯ ನಶೆ ಇಳಿದು ವಿವೇಕ ಯುಕ್ತವಾಗಿ ವ್ಯಕ್ತಿ ವಿಚಾರ ಮಾಡತೊಡಗುವನು.

ಈ ವಚನದಲ್ಲಿ ಎರಡು ಸಂದೇಶಗಳಿವೆ. ಕಾಮ ಅಥವಾ ಪ್ರೇಮದ ಸೆಳವಿನಲ್ಲಿ ಸಿಕ್ಕಿದ ವ್ಯಕ್ತಿ ಬಹಿರಂಗದ ಪರಿಜ್ಞಾನವಿಲ್ಲದಂತೆ ವರ್ತಿಸುವನು. ಗುರುಗಳು, ಹಿರಿಯರು, ಯಾವ ಹಿತೋಪದೇಶ ಹೇಳಿದರೂ ನಾಟದ ಮನಃಸ್ಥಿತಿ ಉಂಟಾಗಿರುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ; ಈ ಆರೂ ಒಂದು ಬಗೆಯ ಹಾವುಗಳೆ! ಇವು ಕಚ್ಚಿದ ಮನುಷ್ಯನಿಗೆ ವಿವೇಕ ಪ್ರಜ್ಞೆ ಅಳಿಯುತ್ತದೆ.

ವ್ಯಕ್ತಿಯು ಇವುಗಳಿಂದ ಉದ್ರಿಕ್ತನಾಗುವನು. ಅಂಥ ಸನ್ನಿವೇಶದಲ್ಲಿ ಮನಸ್ಸನ್ನು ನಿಯಂತ್ರಣಕ್ಕೆ ತರಬೇಕಾದರೆ ಮಂತ್ರ ಜಪವನ್ನು ಮಾಡಬೇಕು. ಆಗ ಒಳಗಣ್ಣು ತೆರೆಯುತ್ತದೆ.

21. ಅಜ್ಞಾನ ಭವಕ್ಕೆ ಕಾರಣ

ಅರಿಯದೆ, ಜನನಿಯ ಜಠರದಲ್ಲಿ
ಬಾರದ ಭವಂಗಳಲ್ಲಿ ಬಂದೆ ತಂದೆ!
ಹುಟ್ಟಿತ್ತೆ ತಪ್ಪಾಯಿತ್ತೆ, ಎಲೆ ಲಿಂಗವೆ?
ಮುನ್ನ ಹುಟ್ಟಿದುದಕ್ಕೆ ಕೃಪೆ ಮಾಡು ಲಿಂಗವೆ!
ಇನ್ನು ಹುಟ್ಟಿದೆನಾದಡೆ
ಲಿಂಗದೇವಾ, ನಿಮ್ಮಾಣೆ! ಬ.ವ.ದೀ 19

ಅರಿವು ಅರ್ಥಾತ್ ಜ್ಞಾನ ಇರದ ಕಾರಣ ಹಿಂದಿನ ಜನ್ಮವು ಈ ಜನ್ಮಕ್ಕೆ ಕಾರಣವಾಯಿತು. ಹೀಗಾಗಿ ತಾಯಿಯ ಗರ್ಭದಲ್ಲಿ ಜನಿಸಿದೆ. ಹುಟ್ಟಿದ್ದು ಮಹಾಪರಾಧವಾಯಿತೆ? ಎಷ್ಟು ರೀತಿಯ ಕೋಟಲೆಗಳನ್ನು ಕೊಡುತ್ತಿರುವೆ. ಈಗ ಹುಟ್ಟಿರುವುದನ್ನು ಮನ್ನಿಸಿ, ಅನುಗ್ರಹ ನೀಡು. ನಿನಗೆ ಮಾತು ಕೊಡುತ್ತೇನೆ. ಈಗ ಮರೆವು ಹರಿದು ಅರಿವು ಮೂಡಿದೆ. ಇನ್ನು ಹುಟ್ಟಿದೆನಾದರೆ ನೋಡು. ನಿನ್ನ ಅನುಗ್ರಹದಿಂದ ದೇವಾ ಇದೇ ಜನ್ಮದಲ್ಲಿ ಮುಕ್ತಿಯನ್ನು ಹೊಂದುತ್ತೇನೆ.

22. ಪರಮಾನಂದಕ್ಕಾಗಿ ಹಂಬಲ

ಎಂದೋ, ಸಂಸಾರದ ದಂದುಗ ಹಿಂಗುವುದು?
ಎಂದೋ, ಮನದಲ್ಲಿ ಪರಿಣಾಮವಹುದೆನಗೆಂದೆ ? ಲಿಂಗದೇವಾ,
ಇನ್ನೆಂದೋ ಪರಮ ಸಂತೋಷದಲ್ಲಿಹುದೆನಗೆಂದೊ ? ಬ.ವ.ದೀ.20

ಪ್ರತಿಯೊಬ್ಬರನ್ನೂ ಒಂದು ಬಗೆಯ ಜಂಜಡ, ಗೋಜಲು ಸುತ್ತಿಕೊಳ್ಳುತ್ತದೆ. ಸಂಸಾರಿಗಳಿರಲಿ, ಸನ್ಯಾಸಿಗಳೇ ಇರಲಿ. ಎಲ್ಲವನ್ನೂ ಬಿಡಿಸಿಕೊಂಡು ಪೂರ್ಣವಾಗಿ ನೆಮ್ಮದಿಯಿಂದ ಇರಬೇಕು ಅಥವಾ ಧ್ಯಾನಾಸಕ್ತನಾಗಬೇಕು ಎಂದು ಮನಸ್ಸು ಹಾತೊರೆಯುತ್ತಿರುತ್ತದೆ. ಎಂದೋ ಸಂಸಾರದ ಜಂಜಾಟ ನಿಲ್ಲುವುದು ಎಂದಿಗೆ ಮನಸ್ಸು ನಿಶ್ಚಿಂತವಾಗಿ ಆನಂದದಲ್ಲಿ ತನ್ಮಯವಾಗುವುದೋ ? ಎಂದಿಗೆ ಪರಮ ಸಂತೋಷದಲ್ಲಿ ದಿವ್ಯಾನಂದದಲ್ಲಿ ಇರಲು ಸಾಧ್ಯವಾಗುವುದೋ ಎಂದು ಸಾಧಕ ಜೀವಿಯ ಮನಸ್ಸು ಉತ್ಕಟವಾಗಿ ಹಂಬಲಿಸಿದ ಭಾವವಿಲ್ಲದೆ. ನಿಸ್ತರಂಗವಾದ ಸುಂದರ ತಿಳಿಗೊಳದಲ್ಲಿ ಹಂಸ ಪಕ್ಷಿಯೊಂದು ತನ್ಮಯವಾಗಿ ತೇಲಾಡುವ ಕಲ್ಪನೆ ಸಾಧಕನ ಚಿತ್ತಭಿತ್ತಿಯ ಮೇಲೆ ಮೂಡಿರುತ್ತದೆ.

23. ದೇವ ಕೃಪೆಯಿಂದ ಎಲ್ಲವೂ ಸಾಧ್ಯ

ಲೇಸ ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದರಿಲ್ಲ ಕಂಡಯ್ಯಾ.
ತಾಳಮರಕ್ಕೆ ಕೈಯ ನೀಡಿ
ಮೇಲೆ ನೋಡಿ ಗೋಣು ನೊಂದುದಯ್ಯಾ
ಲಿಂಗದೇವ ಕೇಳಯ್ಯಾ,
ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ! ಬ.ವ.ದೀ. 21

ಈಗ ತಾನಿರುವ ಸ್ಥಿತಿಗಿಂತಲೂ ಹೆಚ್ಚಿನ ಸ್ಥಿತಿಯನ್ನು, ಸ್ಥಾನವನ್ನು ಪಡೆಯಲು ಮನಸ್ಸು ಆಸೆಪಡುವುದುಂಟು. ವಿದ್ಯೆಯಲ್ಲಿರಬಹುದು, ಸಂಪತ್ತಿನಲ್ಲಿರಬಹುದು, ಕೀರ್ತಿಯಲ್ಲಿರಬಹುದು. ಸಾಧಕಾವಸ್ಥೆಯಲ್ಲಿರುವ ಮುಮುಕ್ಷುಗಳು ತಮಗಿಂತ ಉನ್ನತ ಸಿದ್ಧಿಯನ್ನು, ಸ್ಥಿತಿಯನ್ನು ಗಳಿಸಿರುವ ಜ್ಞಾನಿಗಳನ್ನು ಕಂಡು ತಾವೂ ಹಾಗಾಗಬೇಕು ಎಂದು ಹಂಬಲಿಸುವುದುಂಟು. ಇದೆಲ್ಲವೂ ತಪ್ಪೇನಿಲ್ಲ. It is not failure, but low aim is crime ಎನ್ನುತ್ತಾನೆ ಕಾರ್ಲೈಲ್. ಮನುಷ್ಯ ತಪ್ಪುವುದು ಎಲ್ಲಿ ಎಂದರೆ ತನಗಿಂತ ಹೆಚ್ಚಿನ ಸ್ಥಿತಿಯಲ್ಲಿ ಇರುವವರನ್ನು ಕಂಡು ಮತ್ಸರಿಸುವುದರಲ್ಲಿ, ಅಥವಾ ತನಗೆ ಅದು ಲಭ್ಯವಾಗಿಲ್ಲ ಎಂಬ ಹತಾಶಭಾವ ತಳೆದು ಮಾನಸಿಕವಾಗಿ ಖಿನ್ನ(depression) ನಾಗುವುದರಲ್ಲಿ. ಒಳ್ಳಿತನ್ನು, ಹೆಚ್ಚಿನದನ್ನು ಕಂಡು ಸುಮ್ಮನೆ ಆಸೆ ಪಡುವುದರಲ್ಲಿ ಅರ್ಥವಿಲ್ಲ; ತಾಳೆ ಮರಕ್ಕೆ ಅದರ ಹಣ್ಣಿಗಾಗಿ ಕೈಚಾಚಿ, ಮೇಲೆ ನೋಡುತ್ತಲೇ ಇದ್ದರೆ ಗೋಣು ನೋಯುವುದೇ ವಿನಾ ತಾಳೆ ಹಣ್ಣು ಸಿಕ್ಕವು. ಆ ಗಿಡ ತಾನಾಗಿ ಉದುರಿಸಿದಾಗ ಆ ತಾಳೆ ಹಣ್ಣು ಲಭ್ಯ. ಹಾಗೆ ಲಿಂಗದೇವನು ಅನುಗ್ರಹಿಸಿ ನೀಡಿದಾಗ ಎಲ್ಲ ಸಾಧನ ಸಂಪತ್ತು ಪ್ರಾಪ್ತಿಯಾಗುವುದು. ಆದ್ದರಿಂದ ಹಂಬಲದ ಜೊತೆಗೆ ಶರಣಾಗತ ಭಾವ ಹೊಂದಿ ದೇವಾನುಗ್ರಹಕ್ಕಾಗಿ ಮೊರೆಯಿಡಬೇಕು.

24. ದೇವಾನುಗ್ರಹಕ್ಕಾಗಿ ಮೊರೆ

ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ
ಇನ್ನು ಬಯಸಿದರುಂಟೆ ?
ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದರುಂಟೆ,
ಲಿಂಗದೇವರಲ್ಲಿ, ಮುನ್ನ ವರವ ಪಡೆಯದನ್ನಕ್ಕ ? ಬ.ವ.ದೀ.22

ಸಂಸಾರ ಹೇಯ ಸಲದಲ್ಲಿ ಬಗೆಬಗೆಯ ಭಾವನೆಗಳು ಹರಿದಾಡುತ್ತವೆ. ತನ್ನನ್ನು ತಾನೇ ದೂಷಿಸಿಕೊಳ್ಳುವುದು (Self negation), ಇಲ್ಲದ ತಪ್ಪನ್ನು ಆರೋಪಿಸಿಕೊಳ್ಳುವುದು ಮುಂತಾಗಿ ಸಾಧಕ ಮಾಡುತ್ತಾನೆ. ಭಕ್ತಿವಂತರನ್ನು, ಅಧ್ಯಾತ್ಮಿಕವಾಗಿ ಪ್ರಗತಿ ಸಾಧಿಸಿದವರನ್ನು ಕಂಡು ತನಗೆ ಅದು ಸಾಧ್ಯವಾಗುತ್ತಿಲ್ಲ ಎಂಬ ನೈರಾಶ್ಯ ಭಾವ ಕಾಡುತ್ತದೆ. ಆಗ ಅಂದುಕೊಳ್ಳುತ್ತಾನೆ, "ಏನು ಮಾಡುವುದು? ಹಿಂದೆ ಮಾಡಿರುವ ಪಾಪ ಬೆನ್ನುಹತ್ತಿ ಕಾಡುತ್ತಿರುವಾಗ ಇನ್ನು ಹೆಚ್ಚಿನದನ್ನು ಬಯಸಿದರೆ ಆದೀತೆ ? "ಪಾಪಾತ್ಮನಿಗೆ ಇಂತಹ ಹಂಬಲ ಹುಟ್ಟಲು ಸಾಧ್ಯವಿಲ್ಲ, ಪಾಪ ಹರಿದು ಪುಣ್ಯವು ಒದಗಿದ ಕಾಲಕ್ಕೆ ಮನಸ್ಸು ದೇವರ ಕಡೆಗೆ ಹರಿಯುವ ಸಾಧ್ಯತೆಯುಂಟು." ಎಂದು ಚಿಂತನೆ ಮಾಡುವುದಿಲ್ಲ.

ಭಕ್ತಿಯುಳ್ಳವರು ಸಾಕಷ್ಟು ಸಾಧನೆ ಮಾಡಿ ಲಿಂಗದೇವರಲ್ಲಿ ವರವನ್ನು ಪಡೆದುಕೊಂಡಿದ್ದಾರೆ. ಅವರನ್ನು ನೋಡಿ ಆಸೆ ಪಡುವುದು ವ್ಯರ್ಥ; ಅವರು ಪುಣ್ಯ ಜೀವಿಗಳು, ನನ್ನ ಪಾಪ ಕರ್ಮ ಇನ್ನೂ ಸವೆಯಬೇಕಾಗಿದೆ. ಹೀಗೆಲ್ಲ ಸಾಧಕ ಜೀವಿಯು ಪರಿತಪಿಸುವನು.

25. ಜಗದ ನಂಟ ದೇವರು

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ
ಚಂದ್ರ ಕುಂದೆ, ಕುಂದುವುದಯ್ಯಾ
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ, ಅಯ್ಯಾ?
ಅಂಬುಧಿಯ ಮುನಿ ಅಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ, ಅಯ್ಯಾ?
ಆರಿಗಾರೂ ಇಲ್ಲ; ಕೆಟ್ಟವಂಗೆ ಕೆಳೆಯಿಲ್ಲ!
ಜಗದ ನಂಟ ನೀನೇ ಅಯ್ಯಾ, ಲಿಂಗದೇವಾ! ಬ.ವ.ದೀ.23

ಚಂದ್ರನು ಅಮವಾಸ್ಯೆಯ ಮರುದಿನದಿಂದ ವೃದ್ಧಿಯಾಗ ತೊಡಗುವನು. ಚಂದ್ರನ ಉತ್ಕರ್ಷವನ್ನು ನೋಡಿ ಸಮುದ್ರವು ಹರ್ಷದಿಂದ ನರ್ತಿಸುವುದೋ ಎಂಬಂತೆ ಅಲೆಗಳು ಏರುತ್ತ ಹುಣ್ಣಿಮೆಯಂದು ಅತಿ ಎತ್ತರದಲ್ಲಿ ವಿಜೃಂಭಿಸುವವು. ಚಂದ್ರನು ಕುಂದುತ್ತ ಹೋದಂತೆ ಸಮುದ್ರವೂ ಅಬ್ಬರ ಕಳೆದು ಕೊಳ್ಳುವುದು. ಇಬ್ಬರ ಮಧ್ಯೆ ಹೀಗೆ ಬಹಳ ಗೆಳತನವಿದೆಯೇನೋ ಎಂಬ ಭಾವ ನಮಗೆ ಉಂಟಾಗುವುದು. ಹುಣ್ಣಿಮೆಯ ಮರುದಿವಸ ಚಂದ್ರನು ಕ್ಷೀಣಿಸ ತೊಡಗುವನು. ಚಂದ್ರನಿಗೆ ಗ್ರಹಣದ ದಿನ ರಾಹು ಅಂದರೆ ಮಂಕು (ನೆರಳು) ಕವಿಯುತ್ತದೆ. ಆಗ ಸಮುದ್ರವೇನಾದರೂ ಬೊಬ್ಬಿಟ್ಟು ಸಂತಾಪ ಸೂಚಿಸುವುದೆ? ಅಂಬುಧಿಯನ್ನು ಒಮ್ಮೆ ಅಗಸ್ತ್ಯ ಮಹರ್ಷಿಯು ಕುಡಿದು ಬಿಟ್ಟ. ಆಗ ಚಂದ್ರನೇನೂ ಅದನ್ನು ತಡೆಗಟ್ಟಲಿಲ್ಲ.

ಇದನ್ನು ನೋಡಿದಾಗ ಅನ್ನಿಸುತ್ತೆ, ಸಂಪತ್ತು, ವೈಭವ ಇದ್ದಾಗ ಎಲ್ಲರೂ ಪ್ರೀತಿಸುವಂತೆ ತೋರುತ್ತದೆ. ಕಷ್ಟ ಬಂದಾಗ ಮಾತ್ರ ಸಂಬಂಧ ಕಳಚಿಕೊಂಡು ಮನುಷ್ಯರು ದೂರವಾಗುವರು. ಯಾರಿಗೆ ಯಾರೂ ಇಲ್ಲ; ಅದರಲ್ಲೂ ಸಂಕಷ್ಟಕ್ಕೆ ಒಳಗಾದವನಿಗೆ ಬಂಧುಗಳೂ ಇಲ್ಲ, ಮಿತ್ರರೂ ಇಲ್ಲ. ಜಗದ ನಂಟ ಎಂದರೆ ದೇವರು; ಸುಖ ದುಃಖಗಳೆರಡರಲ್ಲೂ ಭಕ್ತನೊಡನೆ ಇರುವ ಏಕೈಕ ಶಕ್ತಿ.

ಈ ವಚನದಲ್ಲಿ ಆಂತರಿಕ ವಿಪ್ಲವ ಎರಡನೆಯದಾಗಿ ದಿವ್ಯ ಸಂದೇಶ ಎರಡೂ ಇವೆ. ಸಾಧಕರ ಜೀವನದಲ್ಲಿ ಇರಬಹುದು, ಸಮಾಜ ಸುಧಾರಕರ ಜೀವನದಲ್ಲಿ ಇರಬಹುದು. ಅವರು ತುಳಿವ ಹಾದಿಯಿಂದ ಇತರರು, ಎಲ್ಲರೂ ದೂರ ಸರಿದಾಗ ವ್ಯಕ್ತಿಗೆ ಏಕಾಂಗಿತನ ಕಾಡುತ್ತದೆ. ತನು ಮನ ಧನ ಎಲ್ಲ ದೃಷ್ಟಿಯಿಂದಲೂ ಸಂಕಷ್ಟಗಳು ಎರಗುತ್ತವೆ. ಆಗ ಭಕ್ತನು ಈ ಜಗತ್ತಿನ ಜನ ಕೈಬಿಟ್ಟರೇನು? ದೇವರು ಜಗತ್ತಿನ ಬಂಧು. ಅವನ ತನ್ನ ಜೊತೆಗೆ ಇದ್ದಾನೆ ಎಂದು ತನಗೆ ತಾನೆ ಧೈರ್ಯ ಹೇಳಿ ಕೊಳ್ಳುವನು. ಜಗತ್ತು ಮೆಚ್ಚುವಂತೆ ನಡೆಯಬೇಕಾಗಿಲ್ಲ ಲಿಂಗದೇವರು ಮೆಚ್ಚುವಂತೆ ನಡೆದರೆ ಸಾಕು ಎಂದು ಸಮಾಧಾನ ಪಟ್ಟುಕೊಳ್ಳುವನು.

ಎಂಥದ್ದೇ ಸಂಕಷ್ಟ ಬರಲಿ, ದೇವರು ನನ್ನೊಡನೆ ಇದ್ದಾನೆ. ಅವನು ಮೆಚ್ಚುವಂತೆ ಬಾಳಿದರೆ ಸಾಕು ಎಂಬ ಮನೋಭಾವ ಹೊಂದಿದವರು ಆತ್ಮಹತ್ಯೆಯಂತಹ ಹೇಯ ಕೆಲಸಕ್ಕೆ ಕೈ ಹಾಕರು. ಅಧ್ಯಾತ್ಮವಾದವೆಂದರೆ ಬದುಕನ್ನು ಎದುರಿಸಲಾರದ ಪಲಾಯನವಾದವಲ್ಲ ಸಂಕಷ್ಟಗಳ ಮಧ್ಯೆಯೇ ಈಜುವ ಛಲವಂತಿಕೆ ಎಂಬ ಭಾವ ಬೆಳೆಸಿಕೊಳ್ಳಲು ದೇವರು ನನ್ನ ಏಕೈಕ ಬಂಧು ಎಂಬ ನಂಬಿಕೆ ಅತ್ಯಂತ ಮಹತ್ವಪೂರ್ಣ.

26. ಯಾರಿಗೆ ದೂರುವುದು?

ಒಲೆ ಹೊತ್ತಿ ಉರಿದರೆ ನಿಲ್ಲಬಹುದಲ್ಲದೆ
ಧರೆ ಹೊತ್ತಿ ಉರಿದರೆ ನಿಲಲು ಬಹುದೆ?
ಏರಿ ನೀರುಂಬಡೆ, ಬೇಲಿ ಹೊಲವ ಮೇವೊಡೆ,
ನಾರಿ ತನ್ನ ಮನೆಯಲ್ಲಿ ಕಳುವೊಡೆ
ತಾಯಿಯ ಮೊಲೆವಾಲು ನಂಜಾಗಿ ಕೊಲುವೊಡೆ
ಇನ್ನಾರಿಗೆ ದೂರುವೆನಯ್ಯಾ ಲಿಂಗದೇವಾ? ಬ.ವ.ದೀ. 24

ಈ ವಚನವಂತೂ ಸಾಮಾಜಿಕ ನೀತಿಯ ಅಮೂಲ್ಯ ಸೂತ್ರ. ಒಲೆಯು ಕಟ್ಟಿಗೆಯ ನೆರವಿನಿಂದ

ಹೊತ್ತಿ ಉರಿಯುತ್ತದೆ. ಇದರಲ್ಲಿ ಅಸಹಜವಾದುದೇನೂ ಇಲ್ಲ, ಒಲೆ ಉರಿದಾಗ ಅಡಿಗೆಯು ಸಿದ್ಧವಾಗುತ್ತದೆ. ನಿಂತ ನೆಲವೇ ಹೊತ್ತಿಕೊಂಡು ಬಿಟ್ಟರೆ ನಿಂತುಕೊಳ್ಳುವುದೆಲ್ಲಿ? ಆಶ್ರಯ ಪಡೆಯುವುದೆಲ್ಲಿ? ಕೆರೆಯ ನೀರನ್ನು ತಡೆದಿಡುವ ಏರಿಯೇ ಕೆರೆಯ ನೀರನ್ನು ಗಟಗಟ ಕುಡಿದು ಬಿಟ್ಟರೆ! ಹೊಲದ ಬೆಳೆಯನ್ನು ರಕ್ಷಿಸುವ ಬೇಲಿಯೇ ಬೆಳೆಯನ್ನೆಲ್ಲ ಗಬಗಬ ತಿಂದು ಬಿಟ್ಟರೆ! ನಾರಿ ತನ್ನ ಮನೆಯಲ್ಲಿ ಕಳುವು ಮಾಡಲು ಆರಂಭಿಸಿದರೆ! ಮನೆಯೊಡತಿಯ ಮೇಲೆ ನಂಬಿಕೆ ಇಟ್ಟು ಗಂಡನು ಸಕಲ ಸಂಪತ್ತನ್ನು ಮನೆಯಲ್ಲಿ ಇಟ್ಟಿರುತ್ತಾನೆ. ಮನೆಯ ಹೆಂಡತಿಯೇ ವಸ್ತುಗಳನ್ನು ಕದ್ದು ಸಾಗಿಸಲು ಆರಂಭಿಸಿದರೆ ಯಾರನ್ನು ನಂಬುವುದು. ಮಗುವಿಗೆ ತಾಯಿಯ ಹಾಲೇ ಆಧಾರ. ತಾಯಿಯು ಬಾಯಿ ಕಟ್ಟದೆ ಮನಸ್ಸಿಗೆ ಬಂದಂತೆ ಮುಖ್ಯವಾಗಿ ನಂಜಿನ ಪದಾರ್ಥಗಳನ್ನು ತಿಂದರೆ. ಹಾಲು ನಂಜಾಗಿ ಮಗುವಿನಲ್ಲಿ ಕಫಕಟ್ಟಿ, ಮಲಬದ್ಧತೆಯುಂಟಾಗಿ ಉಸಿರಾಡಲಿಕ್ಕೇ ಬಹಳ ತೊಂದರೆಯಾಗುವುದು. ಎದೆ ಹಾಲು ಕುಡಿಯುವ ಮಗುವಿದ್ದಾಗ ಅಂಥ ತಾಯಿಯೇ ಮಗುವಿನ ಸಾವಿಗೆ ಕಾರಣಳಾಗುತ್ತಾಳೆ. ಪರಿಸ್ಥಿತಿ ಹೀಗೆ ತಿರುಗಾಮುರುಗಾ ಆಗಿ ಕಾಯುವವರೇ ಕೊಲ್ಲುವವರಾದಾಗ ಇನ್ನಾರಿಗೆ ದೂರು ಕೊಡಬೇಕು? ಯಾರಿಂದ ರಕ್ಷಣೆ ಬೇಡಬೇಕು?

ಇಲ್ಲಿ ಯಾರೊಬ್ಬರನ್ನು ಉದ್ದೇಶಿಸಿ ಹೇಳಲಿಲ್ಲವಾದರೂ ಇದರಲ್ಲಿ ಸಾಮಾಜಿಕ ನೀತಿ (Social Ethics) ಇದೆ. ಜವಾಬ್ದಾರಿ ಸ್ಥಾನದಲ್ಲಿದ್ದು ಕರ್ತವ್ಯವನ್ನು ಪಾಲಿಸಬೇಕಾದವರು ಮೈಮರೆತರೆ, ವಿರುದ್ಧವಾಗಿ ವರ್ತಿಸಿದರೆ ಸಮಾಜದಲ್ಲಿ ಬಹಳಷ್ಟು ಕೆಡುಕಿಗೆ ಕಾರಣವಾಗುವುದು.

ಸಂಸಾರ ಹೇಯ ಸ್ಥಲದ ಹಿನ್ನೆಲೆಯಲ್ಲಿ ಅರ್ಥ ಮಾಡಿದರೆ, ಬಸವಣ್ಣನವರು ದೇವರಿಗೇ ಮೊರೆ ಇಟ್ಟು "ಕಾಯಬೇಕಾದ ನೀನೇ ನಮ್ಮ ಮೊರೆಗೆ ಓಗೊಡದೆ ಇದ್ದಾಗ ಯಾರ ಮುಂದೆ ನಾವು ಹೇಳಿಕೊಳ್ಳಬಹುದು." ಎಂದು ಅಲವತ್ತುಕೊಂಡಿದ್ದಾರೆ ಎಂದು ಅರ್ಥ ಮಾಡಬಹುದು.

27. ನಿನಗಿದು ತರವೆ ದೇವಾ?

ಎನ್ನ ಗುಣಾವಗುಣವ ಸಂಪಾದಿಸುವರೆ, ಅಯ್ಯಾ!
ಪ್ರತಿಯೆ, ಅಪ್ರತಿಮ ಮಹಿಮಾ, ನಿಮಗಾನು ಪ್ರತಿಯೆ?
ಲಿಂಗದೇವಾ, ನೀವು ಮಾಡಲಾನಾದೆನು! ಬ.ವದೀ.25

ತಂದೆ, ನೀನು ನನ್ನಲ್ಲಿ ಗುಣಗಳು ಏನಿವೆ; ಅವಗುಣಗಳು ಏನಿವೆ ಎಂಬುದನ್ನು ಲೆಕ್ಕ ಹಾಕುವೆಯಲ್ಲ, ಇದು ನಿನಗೆ ಸರಿಯೆ? ನೀನು ಉಪಮಾತೀತ, ಮಹಿಮನು; ನಿನ್ನ ದೃಷ್ಟಿಯಿಂದ ನನ್ನಂತಹ ಅಲ್ಪನನ್ನು ಅಳೆಯುವುದು ನಿನಗೆ ತರವಲ್ಲ ನೀನು ಹೇಗೆ ರೂಪಿಸಿದ್ದೀಯೋ ಹಾಗೆ ನಾನು ಆಗಿದ್ದೇನೆ. ನಿನಗೆ ಸಂಪೂರ್ಣವಾಗಿ ಶರಣಾಗಿದ್ದೇನೆ. ನೀನು ಹೇಗೆ ರೂಪಿಸುತ್ತೀಯೊ ಹಾಗೆ ನಾನು ಆಗುತ್ತೇನೆ.

28. ಹುಡುಕದಿರು ಉತ್ತಮಿಕೆಯ

ಬೆದಕದಿರು ಬೆದಕದಿರು; ಬೆದಕಿದರೆ ಹುರುಳಿಲ್ಲ!
ಚಿತ್ತರಟ್ಟೆಯ ಕಾಯಲ್ಲಿ ಮತ್ತೇನನರಸುವಿರಯ್ಯಾ?
ನಿಮ್ಮ ಉತ್ತಮಿಕೆಯನೇ ಪೂರೈಸುವುದು, ಲಿಂಗದೇವಾ. ಬ.ವ.ದೀ. 26

ಲಿಂಗದೇವಾ, ನೀನು ನನ್ನಲ್ಲಿ ಬಹಳಷ್ಟು ಒಳ್ಳೆಯದನ್ನು ಹುಡುಕಲು ಹೋಗಬೇಡ. ಬೆದಕುತ್ತಾ ಹೋದರೆ ಏನೂ ಹುರುಳಿಲ್ಲ. ಒಳಗಡೆ ಎಲ್ಲ ಪೊಳ್ಳು ಇರುವಂತಹ ಚಿತ್ತರಟ್ಟೆಯ ಕಾಯಿಯಂತೆ ನನ್ನ ಅಂತರಂಗ. ನಾನು ಶರಣಾಗತನಾಗಿದ್ದೇನೆ, ನಿನ್ನಲ್ಲಿ ಅಂತರ್ಗತವಾಗಿರುವ ಒಳ್ಳೆಯ ಅಂಶಗಳನ್ನು ನೀನು ಪೂರೈಸಿ, ನನ್ನನ್ನು ಪರಿಪೂರ್ಣಗೊಳಿಸು.

29. ಹುರುಳಿಲ್ಲದ ಚಿತ್ತ

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ;
ವಿಚಾರಿಸಿದರೆ ಏನೂ ಹುರುಳಿಲ್ಲವಯ್ಯಾ!
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪುಮಾಡಿ
ನೀವಿರಿಸಿದಿರಿ, ಲಿಂಗದೇವಾ! ಬ.ವ.ದೀ. 26

ನನ್ನ ಅಂತರಂಗವು ಅತ್ತಿಯ ಹಣ್ಣಿನಂತೆ. ನೋಡಲು ಹೊರಗೆ ಕೆಂಪಾಗಿ ಚೆನ್ನಾಗಿ ಕಾಣುವುದು. ಬಿಡಿಸಿ ನೋಡಿದರೆ ಒಳಗೆಲ್ಲ ಹುಳುಗಳು. ನಾನು ಹಾಗೆಯೆ! ಹೊರಗಡೆ ವಿಭೂತಿ, ರುದ್ರಾಕ್ಷಿ ಧರಿಸಿ ಉತ್ತಮ ಸಾಧಕನಂತೆ ಕಾಣುತ್ತೇನೆ. ಚಿತ್ತವನ್ನು ಕೆದಕಿ ನೋಡಿದರೆ ಅಲ್ಲಿ ಬಹುಬಗೆಯ ವಿಕಾರಗಳು. ಏನು ಮಾಡುವುದು ಈ ಪ್ರಪಂಚದ ಆಡಂಬರದಲ್ಲಿ ನನ್ನನ್ನೂ ಒಂದು ರೂಪು ಮಾಡಿ ಆಡಲು ಬಿಟ್ಟಿದ್ದೀಯೆ!

ಸಾಧಕ ಜೀವಿಗಳು ನಿರ್ವಿಕಾರಿಗಳು ಉದಾತ್ತ ಚಿಂತಕರು ಆಗಿದ್ದರೂ ಸಹ ಸುಮ್ಮ ಸುಮ್ಮನೆ ತಮ್ಮಂತರಂಗವನ್ನು ವಿಶ್ಲೇಷಣೆಗೆ ಒಳಪಡಿಸಿ, ದೂಷಿಸಿಕೊಳ್ಳುವರು.

30. ನಡೆ –ನುಡಿಯ ದ್ವಂದ್ವ

ಎನ್ನ ನಡೆಯೊಂದು ಪರಿ; ಎನ್ನ ನುಡಿಯೊಂದು ಪರಿ;
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯ,
ನುಡಿಗೆ ತಕ್ಕ ನಡೆಯ ಕಂಡಡೆ
ಲಿಂಗದೇವನೊಳಗಿಟ್ಟುಕೊಂಬನಯ್ಯಾ - ಬ.ವ.ದೀ.28

ನನಗೆ ಅರ್ಥವಾಗುತ್ತಿದೆ, ಏಕೆ ದೇವನು ನನಗೊಲಿಯುತ್ತಿಲ್ಲ ಎಂಬುದು. ನನ್ನ ನಡೆಯುವಿಕೆ ಒಂದು ಬಗೆಯದಾದರೆ ನುಡಿಯುವಿಕೆ ಮತ್ತೊಂದು ಬಗೆಯದು. ನಾನು ತುಂಬಾ ಚೆನ್ನಾಗಿ, ಭಕ್ತಿಭರದ ಮಾತನ್ನಾಡುತ್ತೇನೆ. ಅದಕ್ಕೆ ತಕ್ಕಂತೆ ಭಕ್ತಿ ನನ್ನಲ್ಲಿಲ್ಲ!

ಮನುಷ್ಯರೇನೋ ನನ್ನ ಹೊರವೇಷ ನೋಡಿ ಎಂಥಾ ಸಾಧಕ! ಎಂದು ಉದ್ಗರಿಸುತ್ತಾರೆ. ದೇವನಿಗೆ ಗೊತ್ತಿಲ್ಲವೇ ನಾನು ಹೇಗಿದ್ದೇನೆಂದು. ನನ್ನ ಅಂತರಂಗ ಶುದ್ಧವಿಲ್ಲ.. ಅದಕ್ಕಾಗಿಯೇ ದೇವನು ಅನುಗ್ರಹಿಸುತ್ತಿಲ್ಲ. ನುಡಿಗೆ ತಕ್ಕಂತೆ ನಡೆ ಸಮನ್ವಯವಾದಾಗಲೇ ಲಿಂಗದೇವನು ಅಕ್ಕರತೆಯಿಂದ ತನ್ನೊಳಗೆ ಇಂಬಿಟ್ಟುಕೊಳ್ಳುವನು.

31. ಮನದ ಕ್ಷುಲ್ಲಕತನ

ಮುಂಗೈಯ ಕಂಕಣಕ್ಕೆ ಕನ್ನಡಿಯ ತೋರುವಂತೆ
ಎನ್ನ ಮನವು ನಿಧಾನವನೊಲ್ಲದೇ ಜಲಗ ಮೆಚ್ಚಿತು ನೋಡಾ !
ನಾಯಿಗೆ ನಾರಿವಾಣವಕ್ಕುವದೆ ಕೂಡಲಸಂಗಮದೇವಾ - ಬ.ವ.ದೀ.29

ಮುಂಗೈಯಲ್ಲಿ ಕಟ್ಟಿರುವ ಕಂಕಣ ನೋಡಿಕೊಳ್ಳಲು ಕನ್ನಡಿ ಏಕೆ ಬೇಕು? ಅಪಾರ ಧನ ಸಂಪತ್ತು ನೇರವಾಗಿಯೇ ಕೈಗೆ ಸಿಕ್ಕಾಗ ಅದನ್ನು ಸ್ವೀಕರಿಸಿ ಸಂತೋಷ ಪಡುವುದು ಬಿಟ್ಟು ಮರಳಿನಲ್ಲಿ ಬೆರೆತು ಹೊಳೆಯುವ ಚಿನ್ನದ ಕಣಗಳನ್ನು ಹುಡುಕಲು ವ್ಯರ್ಥ ಪ್ರಯತ್ನ ಮಾಡುವುದು ಎಷ್ಟು ಸರಿ? ನಾಯಿಯಂತಹ ಕ್ಷುದ್ರ ಪ್ರಾಣಿಗೆ ತೆಂಗಿನ ಕಾಯಿಯಂತಹ ಸಾತ್ವಿಕ ತಿನಿಸು ಹಿಡಿಸುವುದೆ? ಹಾಗೆ ಅಪಾರ ಆನಂದ ಕೊಡುವ ದೈವಿಕ ನೆನಹು ಸುಲಭ ಲಭ್ಯವಿದ್ದರೂ ಇದನ್ನೊಲ್ಲದೆ ಲೌಕಿಕ ಜಂಜಾಟಕ್ಕೆ ಪುನಃ ಪುನಃ ಮನಸ್ಸು ತೊಡಗಿಸಿಕೊಳ್ಳುವುದಲ್ಲ; ಇದು ಎಂಥಾ ಕ್ಷುಲ್ಲಕತನ!

ಈ ವಚನಗಳನ್ನು ಓದುವಾಗ ಇವು ಬಸವಣ್ಣನವರ ಅಂತರಂಗದ ಕನ್ನಡಿಯಾಗಿವೆ ಎಂದು ಭಾವಿಸಬಾರದು. ಸಾಧಕರು ಈ ರೀತಿ ಪ್ರಲಾಪಿಸುವುದು ಒಂದು ಸಹಜ ಪ್ರಕ್ರಿಯೆ. ಅವರು ಪರಿಪರಿಯಾಗಿ ಹೇಳಿಕೊಂಡಷ್ಟು ದುರ್ಬಲರಿರುವುದಿಲ್ಲ. ದುರ್ಬಲರಿಂದ ಹೆಚ್ಚಿನ ಸಾಧನೆ ಸಾಧ್ಯವೂ ಆಗುವುದಿಲ್ಲ. ಇದಕ್ಕೆ Self -purgation ಆತ್ಮಶುದ್ಧೀಕರಣ ಪ್ರಕ್ರಿಯೆ ಎಂದು ಕರೆಯಬಹುದು.

---

108 ಅಡಿಯ ಬೃಹತ್ ಬಸವ ಪುತ್ಥಳಿ ಕೆಲಸ ತ್ವರಿತಗತಿಯಲ್ಲಿ

ಶರಣ ಭೂಮಿ ಬಸವ ಕಲ್ಯಾಣದ ಶರಣ ಶೈಲದಲ್ಲಿ 108 ಅಡಿಯ ಬಸವ ಪುತ್ಥಳಿ ನಿರ್ಮಾಣದ ಕಾರ್ಯ ಭರದಿಂದ ಸಾಗಿದೆ 60' X 80' ಅಡಿಯ ಪೀಠವು 2 ಅಂತಸ್ತಿನ ಕಟ್ಟಡವಾಗಿದ್ದು 24' ಅಡಿ ಎತ್ತರ ರೂಪುಗೊಂಡಿದೆ. ಅದರ ಮೇಲೆ 108 ಅಡಿಯ ಬೆನ್ನು ಹುರಿ (ಶಾಫ್ಟ್) 14' X 20' ಗಾತ್ರದಲ್ಲಿ ಮೇಲೇರಿದೆ. ಈವರೆಗೂ ಒಂದೂವರೆ ಕೋಟಿಗೆ ಮಿಗಿಲಾಗಿ ಹಣವು ಖರ್ಚಾಗಿದೆ. ಈಗ ಮುಖದ ಮಾದರಿ (ಮೌಲ್ಡ್) ಸಿದ್ಧವಾಗುತ್ತಿದೆ. ಇನ್ನೂ ಒಂದು ಕೋಟಿ ರೂಗಳು ಮೂರ್ತಿ ಪೂರ್ತಿಯಾಗಲು ಅಗತ್ಯವಿದೆ. ಅದಕ್ಕೆ ಪೋಷಕವಾಗಿರುವ ಮತ್ತೆ ಕೆಲವು ಯೋಜನೆಗಳಿಗೆ 50 ಲಕ್ಷ ರೂ ಬೇಕು. ಕೆಲಸವು ಬಹಳ ತ್ವರಿತಗತಿಯಲ್ಲಿ ನಡೆದಿದೆ.

ಅನೇಕ ಸದ್ಭಕ್ತರು ತಮ್ಮ ತಮ್ಮ ಶಕ್ತಿ, ಭಕ್ತಿಗೆ ಅನುಸಾರವಾಗಿ ವಾಗ್ದಾನ ಮಾಡಿ, ಕಂತಿನಲ್ಲಿ ಕೊಡುತ್ತಿದ್ದಾರೆ. ಈಗ ಹಣವು ತ್ವರಿತವಾಗಿ ಬೇಕಾಗಿದೆ. ಆದ್ದರಿಂದ ತಮ್ಮ ಕಾಣಿಕೆ ನೀಡಲು ಇದು ಸೂಕ್ತ ಸಮಯವಾಗಿದೆ. ಈಗಾಗಲೇ ಕೆಲವರು 11,000 (ಹನ್ನೊಂದು ಸಾವಿರ), 25,000 (ಇಪ್ಪತ್ತೈದು), 50,000(ಐವತ್ತು), 1,00,000 (ಒಂದು ಲಕ್ಷ) ಹೀಗೆಲ್ಲ ಕೊಟ್ಟಿದ್ದಾರೆ. ಕೆಲಸದ ಬೃಹತತೆಯನ್ನು ಅರ್ಥ ಮಾಡಿಕೊಂಡು ಇನ್ನೂ ಹೆಚ್ಚು ಕೊಡಲು ಶಕ್ತಿ ಮತ್ತು ಮನಸ್ಸು ಇದ್ದರೆ ಈ ಸಾರ್ಥಕ ಕೆಲಸಕ್ಕೆ ಸ್ವಯಂ ಪ್ರೇರಣೆಯಿಂದ ಹೆಚ್ಚು ಕೊಡಲು ಮುಂದಾಗಬೇಕೆಂದು ಕೋರುತ್ತೇವೆ.

- ಜಗದ್ಗುರು ಮಾತೆ ಮಹಾದೇವಿ


|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಬೆಂಗಳೂರು ನಗರದಲ್ಲಿ

ವಿಶ್ವಗುರು ಬಸವಣ್ಣನವರ
813ನೆಯ ಲಿಂಗೈಕ್ಯ ದಿನಾಚರಣೆ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ



ಬುಧ (ಚನ್ನ) ವಾರ ದಿ. 6–8–2008 ರಂದು

ಬೆಳಿಗ್ಗೆ 10–30

ಬೆಂಗಳೂರು ನಗರದ
ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣ ಜೀವಾಳ
ಸರ್ವರಿಗೂ ಆದರದ ಸುಸ್ವಾಗತ

ಪ್ರಾಯೋಜಕರು:

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ,
2035, 20ನೇ ಮುಖ್ಯರಸ್ತೆ, 2ನೇ ವಿಭಾಗ
ರಾಜಾಜಿ ನಗರ, ಬೆಂಗಳೂರು -560010
ದೂರವಾಣಿ-080-22923736/23131476/23325335

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ

ನೀಲಾಂಬಿಕಾ ತಾಯಿಯವರ 813ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ:ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ,ಬೆಂಗಳೂರು,

ದಿ.6-8-2008, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 813ನೆಯ ಲಿಂಗೈಕ್ಯ ದಿನವು ಬುಧ (ಚನ್ನ) ವಾರ ದಿ.6-8-2008ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 813ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ದಿ.7 ರಂದು ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ಶರಣ ದರ್ಶನ

ಗುರು ಬಸವಣ್ಣನವರ ಸಮಕಾಲೀನರು ಮತ್ತು ಇವರ ಪರಂಪರೆಯ ಶರಣರ ತೈಲ ಚಿತ್ರ ಪ್ರದರ್ಶನವನ್ನು ಪುರಭವನದ ಒಳಭಾಗದಲ್ಲಿ ಏರ್ಪಡಿಸಲಾಗುತ್ತಿದ್ದು ತಪ್ಪದೆ ಎಲ್ಲರೂ ವೀಕ್ಷಣೆ ಮಾಡಬೇಕೆಂದು ವಿನಂತಿಸುತ್ತೇವೆ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ , ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ವಿಕ್ಟೋರಿಯಾ ಮತ್ತು ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕವನ್ನು ಏರ್ಪಡಿಸಲಾಗುವುದು.ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕವು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿದೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ) ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ.6ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 813 ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ

2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)

3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4

4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ . ಕಿತ್ತೂರು ಚನ್ನಮ್ಮಾಜಿಯ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ಮಾರ್ಗ ಮಧ್ಯೆ ಕಂಪೇಗೌಡರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು. ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನಮೇಲೆ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಬಸವ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ನೇರ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು,ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ನೀಲಾಂಬಿಕಾ ಷಷ್ಠಿ - ಸಾಮೂಹಿಕ ಇಷ್ಟಲಿಂಗಾರ್ಚನೆ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ.7-8-2008ರಂದು 813ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆಯೊಡನೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ. ಶರಣ ಬಂಧುಗಳು ಪೂಜಾ ನಂತರ ಕರುಣ ಪ್ರಸಾದವನ್ನು ಪಡೆಯಬೇಕು.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು-560010
ದೂರವಾಣಿ : 080-23325335 / 23131476

☹ ಸಮಸ್ಯೆ ? - ಸಮಾಧಾನ ! ☺

ಡಿ. ಗುರು ಮಲ್ಲಪ್ಪ, ದೊಡ್ಡಪುರ, ತಾಳವಾಡಿ

? ನಮ್ಮಲ್ಲಿ ಅಂದರೆ ಚಾಮರಾಜ ನಗರ, ಮೈಸೂರು ಜಿಲ್ಲೆಗಳಲ್ಲಿ ಲಿಂಗಾಯತರ ಮನೆಗಳಲ್ಲಿ ಯಾರಾದರೂ ನಿಧನರಾದರೆ, ಅವರ ಅಂತ್ಯಕ್ರಿಯೆಗೆ ಮೊದಲೇ ಅವರ ಅಂತಿಮ ದರ್ಶನಕ್ಕಾಗಿ ಬಂದಿದ್ದವರಿಗೆಲ್ಲ ಊಟ ಹಾಕುತ್ತಾರೆ. ಊಟದ ಬಳಿಕ ಶವ ಸಂಸ್ಕಾರಕ್ಕೆ ತೆರಳುತ್ತಾರೆ. ಧಾರವಾಡ, ಉತ್ತರ ಕರ್ನಾಟಕದ ಪರಿಸ್ಥಿತಿ ಹೇಗೋ ಗೊತ್ತಿಲ್ಲ. ಕೆಲವು ಜನಾಂಗದಲ್ಲಿ ಶವ ಸಂಸ್ಕಾರ ಮಾಡುವವರೆಗೆ ನೀರನ್ನು ಕುಡಿಯುವುದಿಲ್ಲ. ಹೀಗೇಕೆ?

★ ಹಿಂದಿನ ಕಾಲದಲ್ಲಿ ಯಾರಾದರೂ ಸತ್ತರೆ ಆ ಸುದ್ದಿ ಮುಟ್ಟಿ ಅವರು ಬಂದು ಮಣ್ಣು ಕೊಡುವ ತನಕ ತುಂಬಾ ಸಮಯ ಹಿಡಿಯುತ್ತಿತ್ತು. ಅದರಲ್ಲೂ ಮಲೆನಾಡಿನ ಪ್ರದೇಶದಲ್ಲಂತೂ ಬಹಳ ಕಷ್ಟ. ಆವರೆಗೆ ಉಪವಾಸವಿರುವುದು ಕಷ್ಟಸಾಧ್ಯ. ಲಿಂಗಾಯತರು ಸ್ನಾನ ಪೂಜೆ ಮಾಡಿ ಪ್ರಸಾದ ಸ್ವೀಕರಿಸುವುದು ತಪ್ಪೇನಲ್ಲವಾದ್ದರಿಂದ ಈ ಆಚರಣೆ ಜಾರಿಗೆ ಬಂದಿರಬಹುದು. ಲಿಂಗಾಯತವು ಪ್ರಯೋಗಶೀಲ ಧರ್ಮ. ಇಲ್ಲಿ ಮರಣ ಸೂತಕದ ಭ್ರಾಂತಿ ಇರುವುದಿಲ್ಲ. ಕೆಲವರು ಶವ ಸಂಸ್ಕಾರ ಆಗುವ ತನಕ ನೀರೂ ಕುಡಿಯದೆ ಮಣ್ಣು ಕೊಡಲು ಹೋದಾಗ ಎಚ್ಚರ ತಪ್ಪಿ ಬೀಳುವರು. ಮಧುಮೇಹಿಗಳು ಹೈಪೋಗ್ಲೇಸಿಮಿಯಾ (ರಕ್ತ ಸಕ್ಕರೆಯಲ್ಲಿ ಇಳಿತ) ಆಗಿ ಕೋಮಾ ಹಂತ ತಲುಪಿ ಸಾಯುವ ಸಂಭವವೂ ಇದೆ. ಲಿಂಗಾಯತ ಧರ್ಮದ ಪ್ರಕಾರ ಮರಣವು ದುಃಖಾತ್ಮಕವಲ್ಲ, ದೇವರೆಡೆಗೆ ಸಾಗುವುದು, ಲಿಂಗದೇವನಲ್ಲಿ ಬೆರೆಯುವುದು.

ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ.
ಲಿಂಗದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ,
ಉಪಮಿಸಬಲ್ಲವರ ಕಾಣೆನು.

ಈ ಹಿನ್ನೆಲೆಯಲ್ಲಿ ಶವವನ್ನು ಶುದ್ಧೀಕರಿಸಿ, ಅದಕ್ಕೆ ಲಿಂಗಪೂಜೆ ಮಾಡಿಸಿ, ಲಿಂಗಪೂಜಾ ಭಂಗಿಯಲ್ಲಿ ಕೂರಿಸಿ, ನಂತರ ಜಂಗಮನು ತಾನೂ ಲಿಂಗಪೂಜೆ ಮಾಡಿ, ಪ್ರಸಾದ ಸ್ವೀಕರಿಸುವನು. ಅದೇ ಸಮಯದಲ್ಲಿ ಸಮಾವೇಶವಾದ ಶರಣ ಬಂಧುಗಳಿಗೂ ಪ್ರಸಾದ ಮಾಡಿಸುವ ಪರಿಪಾಠ ಬಂದಿರಬೇಕು.

2. ? ಇಷ್ಟಲಿಂಗವನ್ನು ಪೂಜಿಸುವ ಸಮಯದಲ್ಲಿ ನಮ್ಮಲ್ಲಿ ಕೆಲವರು ★ (ಪಂಚಕೋನ) ಚಿಹ್ನೆಯನ್ನು ಉಪಯೋಗಿಸುತ್ತಾರೆ. ಇದು ಸರಿಯೋ ತಪ್ಪೋ ?

★ ಸರಿ. ನಮ್ಮಲ್ಲಿ 2 ಚಿಹ್ನೆಗಳಿವೆ. ಒಂದು, ಪಂಚಕೋನ ಪ್ರಣವ, ಲಿಂಗಮುದ್ರೆ, ಇನ್ನೊಂದು ಷಟ್ಕೋನ (ಬಸವ ಲಿಂಗ) ಮುದ್ರೆ. ಪಂಚಕೋನ ಪ್ರಣವವನ್ನು ಲಿಂಗಪೂಜಾ ಸಮಯದಲ್ಲಿ ಬಳಸಬೇಕು. ಷಟ್ಕೋನ ಮುದ್ರೆಯನ್ನು ಧ್ವಜದಲ್ಲಿ ಬಳಸಬೇಕು. ಪಂಚಕೋನ ಪ್ರಣವ ಚಿತ್ರದಲ್ಲಿ ಓಂ ಲಿಂಗಾಯ ನಮಃ ಮಂತ್ರವು ಅಡಕವಾಗಿ ಇರುತ್ತದೆ. ಷಟ್‌ಕೋನದಲ್ಲಿ ಓಂ ಶ್ರೀ ಗುರು ಬಸವ ಅಡಕವಾಗಿರುತ್ತದೆ.

ಎಂ.ಆರ್.ದುಬಲಗುಂಡಿ, ಚಿಮ್ಮನಚೋಡ

? ಮನೆಯ ಯಜಮಾನ ಅಥವಾ ಸಮಾಜ ನಾಯಕ; ಇವುಗಳಲ್ಲಿ ಯಾವುದು ಸುಲಭ ಕೆಲಸ?

★ ಸಮಾಜ ನಾಯಕನಾಗುವುದು ಸುಲಭ. ಏಕೆಂದರೆ ಇದರಲ್ಲಿ ಲಾಭ-ಹಾನಿಯ ಪ್ರಶ್ನೆ ಇರದು. ಮನೆಯಲ್ಲಿ ಯಜಮಾನನ ಮೇಲೆ ಒಬ್ಬ ಯಜಮಾನಿ ಯಜಮಾನನಾಗಿ ಇರುವುದರಿಂದ ಆಕೆ ಮೆಚ್ಚುವಂತೆ ಕೆಲಸ ಮಾಡುವುದು ಹುಡುಗಾಟವಲ್ಲ.

2. ? ನಾಲ್ಕು ಪ್ರಶ್ನೆ ನಾವು ಕೇಳಿದರೆ ಒಂದು, ಎರಡಕ್ಕೆ ಮಾತ್ರ ಉತ್ತರಿಸುವಿರಿ. ಏಕೆ ?

★ ಸ್ಥಳಾಭಾವಕಾಶ ಮತ್ತು ಇನ್ನಿತರರಿಗೂ ಅವಕಾಶ ಕೊಡಲು ! ಪಶ್ನೆಗಳು ಅರ್ಥವಾಗುವಂತೆ ಕೇಳಬೇಕು. ಪ್ರಶ್ನೆಗಳು ಅಸ್ಪಷ್ಟವಾಗಿದ್ದರೆ ಉತ್ತರಿಸುವುದು ಹೇಗೆ ?

ಒಂದೂರು, ಹೆಸರು ಬೇಡ.

? ನಾವು ಲಿಂಗಾಂಗಯೋಗಿ ಸಿದ್ಧರಾಮೇಶ್ವರರ ಸಂಪ್ರದಾಯದವರು. ಒಂದು ದಿನ ನಮ್ಮ ಮನೆಗೆ

ಇದೇ ಸಂಪ್ರದಾಯದ ಸ್ವಾಮಿಗಳೊಬ್ಬರು ಬಂದರು. ಹಣೆಯ ಮೇಲೆ ಢಾಳಾಗಿ ಕುಂಕುಮ ಇಟ್ಟುಕೊಂಡಿದ್ದರು. ನೋಡಿ ನನ್ನ ಸಿಟ್ಟು ನೆತ್ತಿಗೇರಿತು. ನಾವು ಶರಣ ಪರಂಪರೆಯವರು ಶಕ್ತಿ ದೇವತೆಯ ಕುರುಹಾದ ಈ ಕುಂಕುಮ ನೀವು ಇಟ್ಟುಕೊಳ್ಳುವ ಅಗತ್ಯವೇನಿತ್ತು? ಭಕ್ತರನ್ನು ದಾರಿ ತಪ್ಪಿಸುತ್ತಿದ್ದೀರಿ. ಎಂದು ರೇಗಾಡಿದೆ. ಅದಕ್ಕೆ ಅವರು ನಮ್ಮ ಹಿಂದಿನ ತಲೆ ಮಾರಿನ ಮಠಾಧೀಶರು ಶಕ್ತಿಯ ಆರಾಧಕರಾಗಿದ್ದರು. ನಾನು ಅದನ್ನು ಮುಂದುವರಿಸಿದ್ದೇನೆ ಅಷ್ಟೆ ಎಂದರು. ಇಂಥಾ ಸ್ವಾಮಿಗಳನ್ನು ತಿದ್ದುವ ಬಗೆ ಹೇಗೆ ?

★ ಲಿಂಗಾಯತ ಮಠಾಧಿಪತಿಗಳಿಗೆ ಯಾರನ್ನು ಅನುಸರಿಸಬೇಕೆಂಬುದೇ ತಿಳಿದಿಲ್ಲ. ಅವರು ಆದರ್ಶವಾಗಿ ಮಾರ್ಗದರ್ಶನಕ್ಕೆ ಇಟ್ಟುಕೊಳ್ಳಬೇಕಾದುದು ಧರ್ಮಗುರು ಬಸವಣ್ಣನವರು, ಸಿದ್ಧರಾಮೇಶ್ವರರನ್ನು, ಅವರು ಕೊಟ್ಟ ವಚನ ಸಾಹಿತ್ಯವನ್ನು. ಇದನ್ನು ಮರೆತು ತಪ್ಪುದಾರಿ ಹಿಡಿದ ಹಿಂದಿನ ಗುರುಗಳನ್ನು ಅನುಸರಿಸಲು ತೊಡಗಿರುವುದು ಸಮಾಜದ ದುರ್ದೈವ. ಸಾತ್ವಿಕತೆಯ, ಶಿವನ ಚಿದ್ಬೆಳಗಾದ ವಿಭೂತಿಯ ಮೇಲೆ ರಕ್ತ ಲಾಂಛನವಾದ ಕುಂಕುಮ ಇಡವಬಾರದೆಂದು ನಮ್ಮ ಶಾಸ್ತ್ರ ಹೇಳುವಾಗ ಲಿಂಗಾಯತ ಸ್ವಾಮಿಗಳೇ ತಪ್ಪು ಮಾಡಿದರೆ ಹೇಗೆ ?

ಇಂಥವರನ್ನು ತಿದ್ದುವುದು ಹೇಗೆ ಎಂದು ಕೇಳಿದ್ದೀರಿ. ಇವರನ್ನು ತಿದ್ದುವ ಪ್ರಯತ್ನ ಕರಿ ನಾಯಿಯನ್ನು ಬಿಳಿಯನಾಯಿಯನ್ನಾಗಿ ಮಾಡುತ್ತೇನೆ ಎಂಬ ಪ್ರಯತ್ನದಂತೆ. ಇವರು ತಿಳಿಯದೆ ತಪ್ಪು ಮಾಡುವವರಲ್ಲ, ತಿಳಿದೂ ಮಾಡುವವರು. ಹಿಂದಿನ ಕೆಲವು ಮಠಾಧೀಶರು ಅವಿದ್ಯಾವಂತರಿದ್ದರು. ಆದರೆ ತತ್ವ ಭ್ರಷ್ಟರಾಗಿರಲಿಲ್ಲ. ಈಗಿನವರು ವಿದ್ಯಾವಂತರು ಎಂಬುದಷ್ಟೆ. ಲಿಂಗಾಯತ ಮಠಗಳಲ್ಲೂ ಹೋಮ-ಯಜ್ಞ ಮಾಡುವ ಸ್ವಧರ್ಮ ವಿರೋಧಿ ಆಚರಣೆ ಮಾಡುತ್ತಿದ್ದಾರೆಂಬುದು ವಿಷಾದನೀಯ ಸಂಗತಿ. ಮಠಾಧೀಶರನ್ನು ತಿದ್ದುವ ಪ್ರಯತ್ನ ಬಿಡಿರಿ. ಜನರನ್ನು ಜಾಗೃತಿಸುವ ದಿಶೆಯತ್ತ ಕ್ರಿಯಾಶೀಲ ಪ್ರಯತ್ನ ಮಾಡಿರಿ.

? ಅನೇಕ ಮಠಗಳವರು ಜಾತ್ರೆ ಮುಂತಾಗಿ ಮಾಡಿ ದನಗಳ ಪರಿಷೆ, ಸಾಮೂಹಿಕ ವಿವಾಹ ಇತ್ಯಾದಿ ಮಾಡುತ್ತಾರೆ. ಶರಣ ಮೇಳ, ಕಲ್ಯಾಣ ಪರ್ವಗಳಲ್ಲೂ ನೀವು ಮಾಡಿದರೆ ಹೇಗೆ?

★ ಜನರು ವರ್ಷಪೂರ್ತಿ ಲೌಕಿಕ ವ್ಯವಹಾರಗಳಲ್ಲೇ ತನ್ಮಯರಾಗಿರುತ್ತಾರೆ. ಅದನ್ನೇ ಮಾಡಲು ಧರ್ಮಕ್ಷೇತ್ರಗಳಿಗೇ ಬರಬೇಕೆ? ನಾವು ಒಮ್ಮೆ, ಧರ್ಮಾಸಕ್ತಿಯಿಂದ ಬರದೆ ವಿವಾಹಾಸಕ್ತರಾಗಿ ಬರುವವರಿಗೂ ಅಧ್ಯಾತ್ಮಿಕ ಸಂಸ್ಕಾರ ಕೊಡಬೇಕೆಂದು ವಿವಾಹ ಕಾರ್ಯಕ್ರಮ ಇಟ್ಟೆವು. ಆ ಜನರು ಕೇವಲ ವಿವಾಹಾಸಕ್ತರಾಗಿ ಭಾಗವಹಿಸಿದರೇ ವಿನಾ ಒಂದು ಪ್ರಾರ್ಥನಾ ಕಾರ್ಯಕ್ರಮ, ಸಭೆಯಲ್ಲಿ ಭಾಗವಹಿಸಲಿಲ್ಲ. ಆದ್ದರಿಂದ ಶರಣ ಮೇಳ, ಕಲ್ಯಾಣ ಪರ್ವಗಳು ಜ್ಞಾನಸ್ನಾನ ಮಾಡಿಸುವುದಕ್ಕೆ ರೂಪುಗೊಂಡವಾಗಿವೆ.

ರಾಜಶೇಖರ್ ಎಂ.ಎನ್. ತುಮಕೂರು

? ಅನೇಕ ಧಾರ್ಮಿಕ ಕ್ಷೇತ್ರಗಳಲ್ಲಿ ತೆಪ್ಪೋತ್ಸವ ಎಂದು ಮಾಡುತ್ತಾರೆ. ಕೂಡಲ ಸಂಗಮದಲ್ಲಿಯೂ ನದಿ ಇದೆ. ಶರಣ ಮೇಳದ ಸಮಯದಲ್ಲಿ ಏಕೆ ತೆಪ್ಪೋತ್ಸವ ಮಾಡಬಾರದು?

★ ಶರಣ ಮೇಳವು ಕೇವಲ ಒಂದು ಜಾತ್ರೆಯಲ್ಲ. ಇಲ್ಲಿ ಕೇವಲ ಕಣ್ಣನ್ನು ಮೆಚ್ಚಿಸುವಂಥ ದೃಶ್ಯ ವೈಭವ ಇರುವುದಿಲ್ಲ. ಒಳಗಣ್ಣನ್ನು ತೆರೆಸುವ ಜ್ಞಾನ ದಾಸೋಹವು ಶರಣ ಮೇಳದಲ್ಲಿ ಪ್ರಮುಖವಾಗಿರುತ್ತದೆ. ನದಿಯಲ್ಲಿ ತೆಪ್ಪ ತೇಲುವುದನ್ನು ನೋಡಲು ವ್ಯಯಿಸುವ ಸಮಯವನ್ನು ಜ್ಞಾನ ಗಳಿಕೆಗೆ ಉಪಯೋಗಿಸುವುದು ಒಳಿತಲ್ಲವೆ? ಅದೇ ರೀತಿ ಬೌದ್ಧಿಕ ಕುಸ್ತಿಯು ಕ್ವಿಜ್-ಧಾರ್ಮಿಕ ರಸಪ್ರಶ್ನೆಯಲ್ಲಿ ನಿರಂತರವಾಗಿ ನಡೆಯುವುದಲ್ಲವೆ ? ಇನ್ನು ಪಟಾಕಿ ಸಿಡಿತವಂತೂ ಪಾಪದ ಕೃತ್ಯ. ಹಣವನ್ನು ಸುಟ್ಟು ಅಪವ್ಯಯ ಮಾಡಿದಂತಲ್ಲದೆ ಹವೆಯನ್ನು ದೂಷಿತ ಮಾಡುವಂತಹ ಕೆಟ್ಟ ಪದ್ಧತಿ. ಶರಣ ಮೇಳವು ತನು ಮನ ಬುದ್ಧಿಗಳನ್ನು ಶುದ್ಧಗೊಳಿಸುವಂತಹುದೇ ವಿನಾ ಕೇವಲ ಮನರಂಜನೆ ಮಾಡುವಂತಹುದಲ್ಲ.

ಜ್ಞಾನೇಶ್ವರಿ ಮಾತಾಜಿ, ಬೆಂಗಳೂರು

? ಚೆನ್ನಾಯ್‌ಗೆ ಒಂದು ವಿಶೇಷ ಕಾರ್ಯಕ್ರಮದ ಮೇಲೆ ಹೋದಾಗ ಕೆಲವು ಲಿಂಗಾಯತ ಕುಟುಂಬಗಳ ಪರಿಚಯವಾಯಿತು ಇವರೆಲ್ಲ ಬಹು ಹಿಂದೆಯೇ ತಮಿಳು ನಾಡಿಗೆ ಹೋಗಿ ನೆಲೆಸಿದ್ದಾರೆ. ಒಬ್ಬ ಅಜ್ಜಿಗೆ 80 ವರ್ಷ ವಯಸ್ಸು. "ಅಜ್ಜ ನಿನಗೆ ಕನ್ನಡ ಬರುತ್ತಾ?" ಎಂದು ನಾನು ಕುತೂಹಲದಿಂದ ಕೇಳಿದೆ. "ಲಿಂಗಾಯತರಾಗಿ ಕನ್ನಡ ಬರಲ್ಲ ಅಂದರೆ ಆದೀತಾ?" ಎಂದು ವಯೋವೃದ್ಧೆ ತಟ್ಟನೆ ನುಡಿದಳು. ಈ ಬಗ್ಗೆ ನಿಮ್ಮ ಅಭಿಪ್ರಾಯ ?

★ ಲಿಂಗಾಯತ ಧರ್ಮ ಅಚ್ಚ ಕನ್ನಡದ ಧರ್ಮ. ಇದರ ಸಂವಿಧಾನವಾದ ವಚನ ಸಾಹಿತ್ಯ ಇರುವುದೇ ಕನ್ನಡದಲ್ಲಿ ಎಂಬುದಕ್ಕೆ ಅಜ್ಞೆಯ ಮಾತು ಸಾಕ್ಷಿ ನುಡಿಯುತ್ತದೆ. ಮಹಾರಾಷ್ಟ್ರದಲ್ಲಂತೂ ಕಾನಡಿ (ಕನ್ನಡ) ಭಾಷೆಯವರು ಅಂದರೆ ಲಿಂಗಾಯತರು ಎಂದೇ ಅರ್ಥ. ಲಿಂಗಾಯತರು ಕಲ್ಯಾಣ ಕ್ರಾಂತಿಯ ನಂತರ ಚದುರಿದ್ದರಿಂದ ಕನ್ನಡ ಭಾಷೆ ವಿವಿಧ ರಾಜ್ಯಗಳಲ್ಲಿ ಹಬ್ಬಲು ಸಾಧ್ಯವಾಯಿತು ಎಂಬುದು ಹೆಮ್ಮೆಯ ಸಂಗತಿ. ಮುಸಲೀಮರು ಹೇಗೆ ಅರಾಬಿಕ್ ಕಲಿಯುವರೋ, ಸಿಖ್ಖರು ಹೇಗೆ ಗುರುಮುಖಿ (ಪಂಜಾಬಿ) ಕಲಿಯುತ್ತಾರೋ ಹಾಗೆ ಲಿಂಗಾಯತರು ಯಾವುದೇ ರಾಜ್ಯ, ರಾಷ್ಟ್ರಗಳಲ್ಲಿರಲಿ. ಅವರ ಧರ್ಮಭಾಷೆ ಕನ್ನಡವನ್ನು ಆಡುಭಾಷೆಯನ್ನಾಗಿಯಾದರೂ ಉಳಿಸಿಕೊಂಡರೆ ಒಳ್ಳೆಯದು.

ಬಸವರಾಜ ಪಾಟೀಲ್, ಹುಬ್ಬಳ್ಳಿ

? ನಮ್ಮ ಗಣಾಧೀಶರನ್ನು ಕುರಿತು ಹೇಳುವಾಗ ಷಡುಗಣಾಧೀಶರು ಎನ್ನಬೇಕೋ ಸಪ್ತಗಣಾಧೀಶರು ಎನ್ನಬೇಕೋ?

★ ಶರಣ ಬಂಧುಗಳೆಲ್ಲ ಕುಳಿತು ಚಿಂತನೆ ಮಾಡುವಾಗ ಧರ್ಮಗುರು ಬಸವಣ್ಣನವರ ಸ್ಥಾನ ವಿಶೇಷವಾಗಿ ಇರಬೇಕು ಎಂದು ಸೂಚಿಸಿದರು. ಧರ್ಮಪಿತರನ್ನು ಗಣಾಧಿಪತಿ ಎಂದು ಕರೆದು ಉಳಿದಂತೆ ಅಲ್ಲಮಪ್ರಭುದೇವರು, ಚನ್ನಬಸವಣ್ಣ, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಅಕ್ಕನಾಗಮ್ಮ, ಮಡಿವಾಳ ಮಾಚಿದೇವರನ್ನು ಷಡ್‌ಗಣಾಧೀಶರು ಎಂದು ಕರೆಯಲು ನಿರ್ಧರಿಸಲಾಗಿದೆ. ಆದ್ದರಿಂದ ಷಡ್ ಗಣಾಧೀಶರು ಎಂದಾಗ ಗಣಾಧಿಪತಿ ಬಸವಣ್ಣನವರು ಮತ್ತು ಷಡುಗಣಾಧೀಶರು ಎಂದು; ಎಲ್ಲರನ್ನೂ ಸೇರಿಸಿ ಸಪ್ತಗಣಾಧೀಶರು ಎಂದು ಹೇಳಬಹುದು -ಪ್ರಣವ ಪಂಚಾಕ್ಷರಿ ಮತ್ತು ಷಡಕ್ಷರಿ ಎಂದು ಹೇಳುವುದಿಲ್ಲವೆ ಹಾಗೆ!

ಲಿಂಗಮ್ಮ, ಹುಬ್ಬಳ್ಳಿ

? ಒಬ್ಬರನ್ನು ನಾನು ಅಣ್ಣ ಎಂಬ ಭಾವನೆಯಿಂದ ನೋಡುತ್ತ ಬಂದಿರುವೆ. ತುಂಬಾ ಒಳ್ಳೆಯವರು. ನಮ್ಮ ತಾಯಿ ತಂದೆ ಅವರಿಗೆ ನನ್ನನ್ನು ಮದುವೆ ಮಾಡಿಕೊಡಬೇಕೆಂದು ಆಲೋಚಿಸಿದ್ದಾರೆ. ಈವರೆಗೆ ಅಣ್ಣ- ತಂಗಿಯಂತೆ ಇದ್ದೇವೆ; ಬೇಡ ಎಂದು ನಮ್ಮ ಅಭಿಪ್ರಾಯ. ಇಬ್ಬರೂ ಸಮಾನ ಅಭಿರುಚಿಯವರು. ಮದುವೆಯಾದರೆ ಒಳ್ಳೆಯದು ಎಂದು ನಮ್ಮ ತಾಯಿ ತಂದೆಯ ಆಗ್ರಹ. ನಿಮ್ಮ ಅಭಿಪ್ರಾಯವೇನು? ನಿಮ್ಮ ಉತ್ತರದ ನಂತರ ನಾವು ನಿರ್ಧರಿಸುತ್ತೇವೆ.

★ ಮದುವೆಗೆ ಮೊದಲು ಎಲ್ಲ ಪುರುಷರನ್ನು ತನ್ನ ತಂದೆ, ಸೋದರರ ಸಮಾನ ಎಂದು ಮಹಿಳೆಯರು, ಎಲ್ಲ ಸ್ತ್ರೀಯರು ತನ್ನ ತಾಯಿ, ಸೋದರಿಯರ ಸಮಾನ ಎಂದು ಪುರುಷರು ಭಾವಿಸಬೇಕು. ಸಂಬಂಧದಲ್ಲಿ ಅಣ್ಣ -ತಂಗಿ ಇದ್ದರೆ ಅವರ ವಿವಾಹ ನಿಷಿದ್ಧ, ನಡಾವಳಿಕೆಯಲ್ಲಿ ಭಾವದಲ್ಲಿ ಅಣ್ಣ -ತಂಗಿ ಎಂದುಕೊಂಡ ಮಾತ್ರಕ್ಕೆ ವಿವಾಹ ನಿಷಿದ್ಧವಲ್ಲ. ವಿವಾಹದ ನಂತರ ತನ್ನ ಪತಿಯನ್ನು ಹೊರತುಪಡಿಸಿ ಉಳಿದ ಪುರುಷರು ಸೋದರರೆಂದು ಮಹಿಳೆಯರು, ಪತ್ನಿಯನ್ನು ಹೊರತು ಪಡಿಸಿ ಉಳಿದ ಸ್ತ್ರೀಯರು ಸೋದರಿಯರೆಂದು ತಿಳಿದರೆ ಸಾಕು.

ವಚನ ಪುಷ್ಪ

1.ಕಂಗಳಿದ್ದು ಫಲವೇನು ? ಲಿಂಗದೇವನ ದರ್ಶನವ ಮಾಡದನ್ನಕ್ಕ
ಕಿವಿಗಳಿದ್ದು ಫಲವೇನು ? ಬಸವ ವಾಣಿಯ ಕೇಳದನ್ನಕ್ಕ
ಬಾಯಿದ್ದು ಫಲವೇನು ? ಶರಣರ ವಚವ ಹಾಡದನ್ನಕ್ಕ
ಕರಗಳಿದ್ದು ಫಲವೇನು ? ನಿಷ್ಠೆಯಿಂದ ಕಾಯಕವ ಮಾಡದನ್ನಕ್ಕ
ಕಾಲುಗಳಿದ್ದು ಫಲವೇನು ? ಶರಣರ ಸಂಗವ ಮಾಡದನ್ನಕ್ಕ
ಜೀವವಿದ್ದು ಫಲವೇನು ? ಬಸವ ಕೀರ್ತಿಯ ಬೆಳಗಿಸದನ್ನಕ್ಕ
ತನುವಿದ್ದು ಫಲವೇನು? ಗುರುವಿನಿಂದ ದೀಕ್ಷೆಯ ಪಡೆಯದನ್ನಕ್ಕ
ಮನವಿದ್ದು ಫಲವೇನು ? ಲಿಂಗಕ್ಕರ್ಪಿತವಾಗದನ್ನಕ್ಕ
ಧನವಿದ್ದು ಫಲವೇನು ? ದಾಸೋಹವ ಮಾಡದನ್ನಕ್ಕ
ನಿರಾಕಾರ ಪ್ರಭು ಲಿಂಗದೇವ, ನಾನಿದ್ದು ಫಲವೇನು ?
ಸಕಲ ಕರಣೇಂದ್ರಿಯಗಳು ಬಸವ ಸೇವೆಗಾಗಿ ಸವೆಯದನ್ನಕ್ಕ.

ಅರುಣ ಕುಮಾರ್.ಸಿ
8ನೇ ತರಗತಿ
ಬಸವ ಗಂಗೋತ್ರಿ ಅನಾಥಾಲಯ

ಹಿಂದೂ ಧರ್ಮ – ವಿಮರ್ಶೆ ಭಾಗ –3

2008ರ ಫೆಬ್ರವರಿ ಕಲ್ಯಾಣ ಕಿರಣದಲ್ಲಿ ಶ್ರೀ ಯಲ್ಲಪ್ಪನವರ ಲೇಖನ ಹಿಂದೂ ಧರ್ಮ ಮುದ್ರಣಗೊಂಡಿದ್ದು ಇದರ ವಿಮರ್ಶೆಯನ್ನು ಏಪ್ರಿಲ್ -ಮೇ (ಭಾಗ -1), ಜೂನ್ (ಭಾಗ -2) ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರ ಮುಂದುವರಿದ ಭಾಗವಿದು. - ಮಾತಾಜಿ

ಯಲ್ಲಪ್ಪ: ಬುದ್ಧನು ವೇದಗಳ ಪ್ರಾಮಾಣ್ಯವನ್ನು (ಕರ್ಮಕಾಂಡ)ವನ್ನು ನಿರಾಕರಿಸಿದರೂ ಸಹ ವೇದಗಳ ಅಂತಃಸತ್ಯವನ್ನು ವಿರೋಧಿಸಲಿಲ್ಲ. ವೇದಗಳ ಅಂತಃಸತ್ಯವನ್ನು ತಾನು ಅನುಯಾಯಿಗಳಿಗೆ ಬೋಧಿಸಿ, ಸಂಸಾರ ದುಃಖದಿಂದ ಪಾರಾಗಲು ಪರಿಶುದ್ಧ ಜೀವನವನ್ನು ನಡೆಸಲು ಜನರನ್ನು ಪ್ರಚೋದಿಸಿದನು. ತಾನೇ ಸ್ವತಃ ನಿರ್ವಾಣವನ್ನು ಹೊಂದಿ ಇತರರಿಗೆ ಮಾರ್ಗದರ್ಶನವಿತ್ತನು. ಈ ನಿರ್ವಾಣವೇ ವೇದಗಳು ಬೋಧಿಸುವ ಸಮಾಧಿ.

ಮಾತಾಜಿ : ಪ್ರತಿಯೊಂದು ಧರ್ಮದಲ್ಲಿಯೂ ಜ್ಞಾನಾತ್ಮಕ ವಿಭಾಗ, ಆಚಾರಾತ್ಮಕ ವಿಭಾಗ, ವಿಧಿ -ವಿಧಾನ ಮುಂತಾಗಿ ಬರುತ್ತವೆ. ಜ್ಞಾನಾತ್ಮಕ ವಿಭಾಗದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡರೂ ಹೆಚ್ಚಿನ ವಿರೋಧಾಭಾಸತೆ ಇರದು. ವ್ಯತ್ಯಾಸ ಬರುವುದೇ ಉಳಿದೆರಡರಲ್ಲಿ. ಬುದ್ಧನು ವೇದಗಳ ಅಂತಃಸತ್ವ ಒಪ್ಪಿದ್ದರೆ ಹೊಸ ಮಾರ್ಗವೊಂದನ್ನು ಕಂಡು ಹಿಡಿಯಲು ಅಷ್ಟೇಕೆ ಪ್ರಯತ್ನ ಮಾಡುತ್ತಿದ್ದ. ಬುದ್ಧನಾದರೋ ಕ್ಷತ್ರಿಯ ವರ್ಣದಲ್ಲಿ ಹುಟ್ಟಿದವ. ಬಸವಣ್ಣನವರಾದರೋ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರು. ಒಂದು ವೇಳೆ ವೇದಗಳಲ್ಲಿ, ವೈದಿಕ ಧರ್ಮದಲ್ಲಿ ದೋಷವಿಲ್ಲದಿದ್ದರೆ ಎಲ್ಲರನ್ನೂ ಎದುರು ಹಾಕಿಕೊಂಡು ಅವರು ಹೊರಬರುವ ಅಗತ್ಯವೇನಿತ್ತು. ಬೌದ್ಧ -ಜೈನ್-ಲಿಂಗಾಯತ - ಸಿಖ್ ಧರ್ಮ ಗಳನ್ನು ಅಧ್ಯಯನ ಮಾಡಿದಾಗ ಮಾಂಸಾಹಾರದ ವಿಷಯದಲ್ಲಿ ಅವು ಭಿನ್ನವಿಚಾರದವಾಗಿವೆ ಬಾಕಿ ವಿಷಯಗಳಲ್ಲಿ ಸಹಮತ ಹೊಂದಿರುವುದನ್ನು ಕಾಣಬಹುದು. ಇಷ್ಟೆಲ್ಲ ಧರ್ಮಗಳು ಹಿಂದು ಧರ್ಮದ ಕಕ್ಷೆಯಿಂದ ಹೊರಬರಬೇಕಾದರೆ ಕಾರಣವೇನಿರಬೇಕು ಎಂಬುದನ್ನು ಶ್ರೀ ಯಲ್ಲಪ್ಪನವರು ಪರಾಮರ್ಶಿಸಬೇಕು.

ಯ : ಸನಾತನ ಧರ್ಮದ ತತ್ವಗಳಲ್ಲಿ ವಿದ್ಯಾರ್ಜನೆ ಹಾಗೂ ಜ್ಞಾನಾರ್ಜನೆಗೆ ಜಗತ್ತಿನಲ್ಲಿ ಜನ್ಮ ತಾಳಿದ ಪ್ರತಿಯೊಬ್ಬ ವ್ಯಕ್ತಿಗಳಿಗೂ ಸಮಾನ ಅವಕಾಶವಿದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ, ಗೀತೆಯಲ್ಲಿ ಹೇಳಿರುವ ಗುಣಕರ್ಮಗಳಿಂದ ವಿಭಾಗಿಸಲ್ಪಟ್ಟ ವರ್ಣಗಳಾದ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ. ಈ ವರ್ಣಗಳ ಜನರನ್ನು ಜಗತ್ತಿನ ಎಲ್ಲಾ ಭಾಗದಲ್ಲಿಯೂ ಕಾಣಬಹುದು. ಈ ವರ್ಣಗಳು ಜಾತಿಯಿಂದ ನಿರ್ಮಿತವಾದುದಲ್ಲ.

ಮಾ : ಯಲ್ಲಪ್ಪನವರ ವಿಚಾರದ ಶೈಲಿ ನೋಡಿದರೆ ಅವರು ಕಣ್ಣುಕಟ್ಟಲ್ಪಟ್ಟ ಟಾಂಗಾ ಕುದುರೆಯಂತೆ ಹಿಂದು ಧರ್ಮದ ಅಧ್ಯಯನ ಮಾಡಿದ್ದಾರೆ ಎನ್ನಿಸದಿರದು. ವಿದ್ಯಾರ್ಜನೆ ಜ್ಞಾನಾರ್ಜನೆಗೆ ಎಲ್ಲ ವರ್ಣಗಳವರಿಗೆ ಅವಕಾಶವಿರಲಿಲ್ಲ. ಬ್ರಾಹ್ಮಣನಿಗೆ ಶಾಸ್ತ್ರಾಭ್ಯಾಸ, ಕ್ಷತ್ರಿಯನಿಗೆ ಶಸ್ತ್ರಾಭ್ಯಾಸ. ವೈಶ್ಯ, ಶೂದ್ರ, ಸ್ತ್ರೀಯರಿಗೆ ವಿದ್ಯೆ ನಿರಾಕರಿಸಲ್ಪಟ್ಟಿತ್ತು. ಪಂಡಿತಾ ರಮಾಬಾಯಿ ಎಂಬ ಓರ್ವ ವ್ಯಕ್ತಿಯ ಚರಿತ್ರೆ ಓದಿರಿ. ಮಗಳಿಗೆ ಶಾಸ್ತ್ರಾಧ್ಯಯನ ಮಾಡಿಸಲು ಅವರ ತಂದೆಗೆ ಅದಮ್ಯ ಆಸೆ ಇತ್ತು. ಆಕೆಗೂ ಇತ್ತು. ಬ್ರಾಹ್ಮಣರಾದ ಅವರಲ್ಲಿ ಪರವಾನಗಿ ಇರಲಿಲ್ಲ. ಯಾರಿಗೂ ಗೊತ್ತಾಗದಂತೆ ಮಗಳಿಗೆ ಮತ್ತು ಮಗನಿಗೆ ಆ ಬ್ರಾಹ್ಮಣ ಪಂಡಿತ ಸಂಸ್ಕೃತ ಅಭ್ಯಾಸ ಮಾಡಿಸತೊಡಗಿದನು. ಇದನ್ನು ತಿಳಿದು ಅವರಿಗೆ ಬಹಿಷ್ಕಾರ ಹಾಕಲಾಯಿತು. ತಾಯಿ -ತಂದೆಯರ ಮರಣಾನಂತರ ಮಗ -ಮಗಳು ಕ್ರೈಸ್ತರಾದರು. ಇಂಥ ಕಥೆಗಳು ನೂರಾರು. ಬ್ರಾಹ್ಮಣೇತರರಿಗೆ ಶಿಕ್ಷಣ ಬೌದ್ಧ ಗುರುಕುಲಗಳಲ್ಲಿ, ಬಸವಣ್ಣನವರ ಅನುಭವ ಮಂಟಪದಲ್ಲಿ ನಂತರ ಬ್ರಿಟಿಷರ ಕಾಲದಲ್ಲಿ ಲಭ್ಯವಾಯಿತು.

ಯಲ್ಲಪ್ಪನವರು ಮುಗ್ಧ ಬಾಲಕರಂತೆ "ಬ್ರಹ್ಮಜ್ಞಾನ ಪಡೆದವನು ಬ್ರಾಹ್ಮಣ, ಇದು ಜಾತಿ ಆಧಾರಿತವಲ್ಲ? ಎಂದು ವಿವರಿಸಿದ್ದಾರೆ. ಶಂಭೂಕ ಶೂದ್ರ. ಅವನು ತಪಸ್ಸು ಮಾಡಿದ್ದು ಪಾಪಕಾರಕ ಎಂದು ಬ್ರಾಹ್ಮಣನೋರ್ವ ದೂರು ಸಲ್ಲಿಸಿ, ಶಂಭೂಕ ತಪಸ್ಸು ಮಾಡಿದ್ದರಿಂದ ಪಾಪ ಉಂಟಾಗಿ ಅವನ ಮಗ ಸತ್ತ ಎಂದು ಹೇಳಿದಾಗ ಹಿಂದೆ ಮುಂದೆ ನೋಡದೆ ಶ್ರೀರಾಮನು ತಪೋಮಗ್ನನಾದ ಶಂಭೂಕನನ್ನು ಬಾಣ ಬಿಟ್ಟು ಸಂಹರಿಸಿದ. ವಿಶ್ವಾಮಿತ್ರ ಕ್ಷತ್ರಿಯ ಅವನು ಬ್ರಹ್ಮಜ್ಞಾನಿಯಾಗಲು ತಪಸ್ಸು ಮಾಡಿದಾಗ ಅವನು ರಾಜರ್ಷಿಯಾಗಬಹುದೆ ವಿನಾ ಬ್ರಹರ್ಷಿಯಾಗಲು ಸಾಧ್ಯವಿಲ್ಲ ಎಂದು ಎಷ್ಟು ವಿರೋಧ ಒಡ್ಡಲಾಯಿತು. ಕರ್ಣನು (ಕ್ಷತ್ರಿಯನೇ ಇದ್ದರೂ) ತಾಯಿ ಮಾಡಿದ ತಪ್ಪಿನಿಂದ ಸೂತ ಪುತ್ರನಾಗಿ ಬೆಳೆಯಬೇಕಾಯಿತು. ಅವನನ್ನು ಮೂದಲಿಸುವ ರೀತಿ ಎಷ್ಟು ದಯನೀಯ. ಏಕಲವ್ಯ

ಬೇಡ ಅರ್ಥಾತ್ ಶೂದ್ರ. ಸ್ವಂತ ಶಕ್ತಿಯಿಂದ ಬಿಲ್ಲು ವಿದ್ಯೆ ಕಲಿತರೂ ಅವನು ಅರ್ಜುನನನ್ನು ಮೀರಿಸಬಾರದೆಂದು ಹೆಬ್ಬೆರಳನ್ನು ದ್ರೋಣಾಚಾರ್ಯ ಪಡೆದುಕೊಂಡು ಮುಗ್ಧ ಶಿಷ್ಯನನ್ನು ವಂಚಿಸಿದ. ಮುಗ್ಧನಾದ ಏಕಲವ್ಯ ಗುರುಗಳಿಗೆ ಗುರುಕಾಣಿಕೆ ನೀಡಬೇಕೆಂಬ ಮುಗ್ಧ ಭಕ್ತಿಯಿಂದ ಹೆಬ್ಬೆರಳನ್ನು ಕೊಯ್ದುಕೊಂಡು ವಂಚನೆಗೆ ಒಳಗಾದ. ಯಲ್ಲಪ್ಪನವರೂ ಅಂಥ ಮುಗ್ಧ ಭಕ್ತರೆ! ಹೀಗಾಗಿ ಅವರಿಗೆ ವೈದಿಕ ಧರ್ಮಶಾಸ್ತ್ರಗಳಲ್ಲಿ ನಡೆದ (ನಡೆವ) ಶೋಷಣೆ ಅರಿವಿಗೆ ಬರುತ್ತಿಲ್ಲ. ಛತ್ರಪತಿ ಶಿವಾಜಿ ಮಹಾರಾಜರು ಬಾಹುಬಲದಿಂದ ನಿಜ ಕ್ಷತ್ರಿಯರು. ಹಿಂದು ರಾಷ್ಟ್ರಕ್ಕಾಗಿಯೇ ಬಾಳನ್ನು ಮುಡುಪಿಟ್ಟರು. ಆದರೆ ಅವರು ಶೂದ್ರ ಮೂಲದವರಾದ ಕಾರಣ ಛತ್ರಪತಿಯಾಗಲು ಬರದು ಎಂದು ವೈದಿಕರು ಹೇಳಿದ್ದರಿಂದ, ಗಾಗಾಭಟ್ಟನೆಂಬ ಓರ್ವ ಬ್ರಾಹ್ಮಣರನ್ನು ಕಾಶಿಯಿಂದ ಕರೆಸಿ, ಕೃತಕವಾಗಿ ಶಿವಾಜಿ ಮಹಾರಾಜರನ್ನು ಕ್ಷತ್ರಿಯ ಮೂಲದವರೆಂದು ಪುಸ್ತಕ ಬರೆಸಲಾಯಿತು. ಯಾರೂ ಮೇಲಲ್ಲ ಕೀಳಲ್ಲ ಎಂಬ ವಿಚಾರಧಾರೆ ಅಧ್ಯಾತ್ಮಿಕ ಸಾಹಿತ್ಯದಲ್ಲಿ ಇದೆಯಾದರೂ ಸ್ವತಃ ಭಗವದ್ಗೀತೆಯೇ ಬ್ರಾಹ್ಮಣ, ಕ್ಷತ್ರಿಯರನ್ನು ಪುಣ್ಯ ಯೋನಿಜರೆಂದು, ವೈಶ್ಯ, ಶೂದ್ರ, ಸ್ತ್ರೀಯರನ್ನು ಪಾಪಯೋನಿಜರೆಂದು ಕರೆದಿರುವುದನ್ನು ಈಗಾಗಲೇ ಹಿಂದಿನ ಸಂಚಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಯ : ಸಹಸ್ರಾರು ವರ್ಷಗಳ ಹಿಂದೆಯೇ ನಮ್ಮ ಸಂಸ್ಕೃತಿಯಲ್ಲಿ ಕಾಯಕಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ನಿಯಮಿತವಾದ ಕರ್ಮವನ್ನು ಮಾಡಲೇಬೇಕು. ಕರ್ಮಮಾಡದೆ ಇದ್ದರೆ ಜಗತ್ತಿನಲ್ಲಿ ಬದುಕಿರುವುದು ಕಷ್ಟ. ಜಗತ್ತಿನಲ್ಲಿ ಎಲ್ಲಾ ಜೀವಿಗಳು ಯಾರಿಂದ ಸೃಷ್ಟಿಯಾಗಿದೆಯೊ, ಯಾವ ಶಕ್ತಿಯಿಂದ ಜಗತ್ತೆಲ್ಲವೂ ವ್ಯಾಪಿಸಲ್ಪಟ್ಟಿದೆಯೋ ಈ ಭಗವಂತನನ್ನು ತನ್ನ ಸ್ವಕರ್ಮದಿಂದಲೇ ಪೂಜಿಸಿ ಸಿದ್ಧಿಯನ್ನು ಪಡೆಯಬಹುದು. ಕರ್ಮವನ್ನು ನಿಸ್ವಾರ್ಥ ಭಾವದಿಂದ, ಯಜ್ಞದ ದೃಷ್ಟಿಯಿಂದ ಅಂದರೆ ಭಗವದರ್ಪಣಾ ಮನೋಭಾವದಿಂದ ಮಾಡಿದರೆ, ಚಿತ್ತಶುದ್ಧಿಯಾಗಿ ತನ್ನ ನೈಜ ಸ್ವರೂಪವನ್ನು ತಿಳಿದುಕೊಳ್ಳಲು ಸಹಾಯಕವಾಗುವುದು. ಯಾವಾಗ ತನ್ನ ನೈಜ ಸ್ವರೂಪವನ್ನು ಅರಿತುಕೊಳ್ಳುವನೋ ಅವನ ಮನಸ್ಸು ಸಹಜವಾಗಿಯೇ ಪ್ರಶಾಂತವಾಗುವುದು. ಇದರಿಂದ ಪರಮಶಾಂತಿಯನ್ನು ಪಡೆಯುತ್ತಾನೆ.

ಮಾ: ದುಡಿಮೆ ಎನ್ನುವುದು ಮಾನವ ಸಮಾಜ ಹುಟ್ಟಿದಾಗಿನಿಂದಲೂ ಇದೆ. ಎಲ್ಲ ಧಾರ್ಮಿಕ ಸಾಹಿತ್ಯದಲ್ಲಿಯೂ ಉದ್ಯೋಗದ ಬಗ್ಗೆ ಹೇಳಲಾಗಿದೆ. ವೈದಿಕ ಧರ್ಮದ ಕರ್ಮ, ಉದ್ಯೋಗಕ್ಕೆ ವಚನ ವಾಙ್ಮಯದ ಕಾಯಕಕ್ಕೂ ಅಜ - ಗಜಾಂತರದ ವ್ಯತ್ಯಾಸವಿದೆ.

1. ವೈದಿಕ - ಹಿಂದು ಧರ್ಮದಲ್ಲಿ ಹುಟ್ಟು - ಉದ್ಯೋಗಕ್ಕೆ ಬಿಡಲಾರದ ಬಂಧನ. ಈಗ ಇವೆಲ್ಲ ಚಲಾವಣೆಯಲ್ಲಿ ಇರಲಿಕ್ಕಿಲ್ಲ. ಅನೇಕ ಬ್ರಾಹ್ಮಣರು ಚಪ್ಪಲಿ ಅಂಗಡಿ ಇಟ್ಟಿದ್ದಾರೆ. ಆದರೆ ಹಿಂದು ಸಾಮಾಜಿಕ ವ್ಯವಸ್ಥೆಯಲ್ಲಿ ವಂಶಪಾರಂಪರ್ಯ ಉದ್ಯೋಗ ಬಿಟ್ಟು ಬೇರೆ ಮಾಡಕೂಡದು. ಮಾಡಿದರೆ ಅವನು ಪತಿತನಾಗುತ್ತೇನೆ. ಕಮ್ಮಾರನ ಮಗ ಕಾಸಲೇಬೇಕು, ಮಡಿವಾಳನ ಮಗ ಮಡಿವಾಳನೆ ! ನೇಕಾರನ ಮಗ ನೇಕಾರ, ಬ್ರಾಹ್ಮಣ ಮಗ ಬ್ರಾಹ್ಮಣ, ಲಿಂಗಾಯತ ಧರ್ಮದ ಪ್ರಕಾರ ಕಮ್ಮಾರನ ಮಗ ಕಮ್ಮಾರಿಕೆಯನ್ನೇ ಮಾಡಬೇಕಾಗಿಲ್ಲ, ಮಡಿವಾಳನ ಮಗ ಬಟ್ಟೆ ತೊಳೆಯಬೇಕೆಂದೇನೂ ಇಲ್ಲ. ಕಾಸಿದವ ಕಮ್ಮಾರ, ಬಟ್ಟೆ ತೊಳೆಯುವವ ಮಡಿವಾಳ, ವೇದ ಓದಿದವ ಬ್ರಾಹ್ಮಣ.

2. ಕರ್ಮಗಳಲ್ಲಿ ಅಂದರೆ ಉದ್ಯೋಗಗಳಲ್ಲಿ ಮೇಲು ಕೀಳೆಂದಿದೆ. ಅರ್ಚಕನ ಉದ್ಯೋಗ ಶ್ರೇಷ್ಠ. ಶರೀರ ಶ್ರಮದಿಂದ ಕೂಡಿದ ಉದ್ಯೋಗಗಳು ಶೂದ್ರರ ಉದ್ಯೋಗ ಕೀಳು ಎಂಬ ಮನೋಭಾವವಿದೆ. ಒಕ್ಕಲುತನ, ಕುಂಬಾರಿಕೆ, ಕಮ್ಮಾರಿಕೆ, ಮಡಿವಾಳಿಕೆ, ಸಮಗಾರಿಕೆ ಇತ್ಯಾದಿ ಶೂದ್ರರ ಉದ್ಯೋಗಗಳೆನಿಸಿಕೊಂಡು ಮಾಡುವವನು ಶೂದ್ರನಾಗಿ, ಧರ್ಮ ಸಂಸ್ಕಾರ ವಿರಹಿತನಾಗಿರುವನು. ಇವನಿಗೆ ಉಪನಯನವಿಲ್ಲ, ಯಜ್ಞೋಪವೀತವಿಲ್ಲ, ಗಾಯತ್ರಿ ಮಂತ್ರೋಪದೇಶವಿಲ್ಲ, ವೈದಿಕ ಶಾಸ್ತ್ರಗಳ ಕಥೆಗಳಲ್ಲಿ ಎಷ್ಟೋ ಕಡೆ ಬರುತ್ತದೆ, ಬ್ರಾಹ್ಮಣನು ಭಿಕ್ಷಾಟನೆಗೆ ಹೋದ, ಯಾರು ನೀಡಲಿಲ್ಲ, ವಾಪಸು ಬಂದ, ಮನೆಯಲ್ಲಿ ಉಪವಾಸ, ಅತಿಥಿಗಳು ಬಂದರು ಇತ್ಯಾದಿ. ಬ್ರಾಹ್ಮಣನು ಯಾಚಕ ವೃತ್ತಿಯಿಂದ ಬದುಕಬೇಕು ಎಂಬುದು ನಿಯಮ. ಉಪನಯನದ ನಂತರ ಭಿಕ್ಷಾಟನೆಗೆ ಕಳಿಸಲಾಗುವುದು. ಲಿಂಗಾಯತ ಧರ್ಮದ ಪ್ರಕಾರ ಯಾಚಕ ವೃತ್ತಿ ನಿಷಿದ್ಧ. ಗುರು ಲಿಂಗ ಜಂಗಮ ಯಾರೇ ಆಗಲಿ ಕಾಯಕವನ್ನು ಮಾಡಲೇಬೇಕು. ಯಾರು ಯಾವ ಕಾಯಕವನ್ನು ಬೇಕಾದರೂ ಮಾಡಬಹುದು.

3. ಸನ್ಯಾಸಿಗೂ ಮತ್ತು ಜಂಗಮನಿಗೂ ವ್ಯತ್ಯಾಸವಿರುವುದು ಜವಾಬ್ದಾರಿ ಹೊರುವುದರಲ್ಲಿ. ಸನ್ಯಾಸಿ ಬಿಡುಗಡೆಗೊಂಡವ; ಸಂಸಾರ ಬಂಧನದಿಂದ ಮಾತ್ರವಲ್ಲ ಜವಾಬ್ದಾರಿಯಿಂದ ಸಹ. ಜಂಗಮನು ವೈಯಕ್ತಿಕ ಸಂಸಾರದಿಂದ ಬಿಡುಗಡೆಗೊಂಡಿದ್ದರೂ ಸಮಾಜದ ಹಿತದೃಷ್ಟಿಯಿಂದ ಹೆಚ್ಚು ಭಾರ ಹೊತ್ತವ.

ಕರ್ಮಯೋಗದಲ್ಲಿ ನಿಷ್ಕಾಮ ಕರ್ಮ ಶ್ರೇಷ್ಠವೆಂದು ಒತ್ತಿ ಒತ್ತಿ ಹೇಳಲಾಗುತ್ತದೆ. ಗೃಹಸ್ಥನು ನಿಷ್ಕಾಮ ಕರ್ಮ ಮಾಡಲು ಹೇಗೆ ಸಾಧ್ಯ? ವಚನ ಶಾಸ್ತ್ರ ಸಂವಿಧಾನ ಪ್ರಕಾರ ಕರ್ಮಕ್ಕೆ ತಕ್ಕ ಪ್ರತಿಫಲ ಬೇಕೇ ಬೇಕು. ಜಾಸ್ತಿಯೂ ಬೇಡ, ಕಡಿಮೆಯೂ ಬೇಡ ದುಡಿಮೆಗೆ ತಕ್ಕ ಪ್ರತಿಫಲ ಬರಲೇಬೇಕು. ಕಾಯಕದಲ್ಲಿ ನಿಷ್ಕಾಮ ಕರ್ಮವಿಲ್ಲ, ದುರಾಶೆಯೂ ಇಲ್ಲ. ಎಲ್ಲೆಡೆಯಲ್ಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇತ್ಯಾದಿ ವರ್ಗೀಕರಣ ಇದ್ದೇ ಇದೆ ಎಂದಿದ್ದಾರೆ ಯಲ್ಲಪ್ಪ. ವೃತ್ತಿಗಳ ವಿಭಜನೆ (Division of Labour) ಮಾನವ ಸಮಾಜದಲ್ಲಿದೆ. ಉದಾಃ ಬೌದ್ಧಿಕ ಕಾಯಕ ಮಾಡುವವರು, ದೈಹಿಕ ಕಾಯಕ ಮಾಡುವವರು ಎಂದು. ಭಾರತ ದೇಶದಲ್ಲಿ ವೈದಿಕ ಹಿಂದು ಧರ್ಮದಿಂದ ಆದ ಅಪರಾಧವೆಂದರೆ ವೃತ್ತಿಪರರ ವಿಭಜನೆ (Division of Labourers). 1. ಹುಟ್ಟಿನಿಂದಲೇ ಉದ್ಯೋಗದ ನಂಟು. 2. ಆ ಉದ್ಯೋಗಿಗಳಲ್ಲಿ ಮೇಲು ಕೀಳೆಂಬ ವರ್ಗೀಕರಣ. ಇನ್ನೂ ಮುಂದುವರಿದು 3. ಉದ್ಯೋಗಗಳಲ್ಲಿ ಸಹ ಮೇಲು ಕೀಳೆಂಬ ವಿಭಜನೆ. ಈ ಸಾಮಾಜಿಕ ವ್ಯವಸ್ಥೆ ನಮ್ಮ ದೇಶದ ಪ್ರಗತಿಗೆ ಅಡ್ಡಿಯಾಯಿತಲ್ಲದೆ ವಿದೇಶಿ ಧರ್ಮಗಳು ಬಂದು, ನೆಲೆಯೂರಿ ಮತಾಂತರಿಸಿ ಬೆಳೆಯಲು ಅವಕಾಶ ನೀಡಿತು. ಈ ಕಟು ಸತ್ಯವನ್ನು ಅರಿತುಕೊಂಡು ಇಂದು ಸುಧಾರಿತವಾದ ರೀತಿಯಲ್ಲಿ ಚಿಂತನೆ ಮಾಡಬೇಕೇ ಹೊರತು ಯಲ್ಲಪ್ಪನವರಂಥವರು ಬರೀ ತಿಪ್ಪೇಸಾರಿಸುವ ಮಾತನ್ನಾಡಬಾರದು.

ಈ ಕಾರಣಕ್ಕಾಗಿಯೇ ಬಸವಣ್ಣನವರು ವರ್ಣಾಶ್ರಮ ಧರ್ಮವನ್ನು ವಿರೋಧಿಸಿ ವೈದಿಕ ಹಿಂದು ಕಕ್ಷೆಯಿಂದ ಹೊರಬಂದುದು ಮತ್ತು ಹೀಗೆ ಹೇಳಿದುದು :

ದೇವ ಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಲಿಂಗದೇವಾ
ಭಕ್ತರಲ್ಲಿ ಕುಲವನರಸಿದರೆ ನನ್ನ ರಾಣಿವಾಸದಾಣೆ !

ಯ : ಅತ್ಯಂತ ಪರಮ ಪವಿತ್ರವಾದ ಗೋವಿನಿಂದ ಮಾನವನಿಗೆ ನೂರಾರು ಉಪಯೋಗಗಳಿರುವದರಿಂದ ಗೋವನ್ನು, ಗೋಮಾತೆಯೆಂದು ಪೂಜಿಸುತ್ತಾರೆ. ಪೂಜ್ಯ ಭಾವನೆಯಿದ್ದರೆ, ನಾವು ಯಾವ ವಸ್ತುಗಳನ್ನು ಸಹ ನಾಶಪಡಿಸುವುದಿಲ್ಲ. ಗೋಹತ್ಯೆ ನಿರಂತರವಾಗಿ ನಡೆಯುತ್ತಿದ್ದು ಒಂದು ಕಾಲಕ್ಕೆ ಅಮೃತ ಪ್ರಧಾನವಾದ ಹಾಲೇ ದೊರಕದೆ ಹೋಗಬಹುದು. ಗಿಡ ಮರಗಳಲ್ಲಿ ಅನೇಕ ಸಸ್ಯಗಳಲ್ಲಿ ರೋಗ ನಿವಾರಕ ಔಷಧಿಗಳಿವೆ ಹಾಗೂ ಪ್ರಕೃತಿಯಲ್ಲಿ ವಾಯು ಮಂಡಲದಲ್ಲಿ ಸಮತೋಲನವನ್ನು ಕಾಪಾಡುವ ಗುಣಗಳಿವೆ. ಉದಾ: ತುಳಸಿ, ಅರಳಿ, ಬಿಲ್ವ, ಎಕ್ಕೆ, ಬೇವು, ಬನ್ನಿಗಿಡ, ಇತ್ಯಾದಿ. ತುಳಸಿ ಗಿಡದಲ್ಲಿ ಅತ್ಯಧಿಕ ವಿದ್ಯುತ್ ಶಕ್ತಿ ಇದೆ ಎಂದು ಹಾಗೂ ಅನೇಕ ಗಿಡಮರಗಳಲ್ಲಿ ರೋಗನಿವಾರಕ ಔಷಧಿಗಳಿವೆ ಎಂದು ವೈಜ್ಞಾನಿಕವಾಗಿ ಸಾಬೀತಾಗಿದೆ. ಇಂತಹ ಹಾಗೂ ಅನೇಕ ಗಿಡಮರಗಳಲ್ಲಿ ಸತ್ವಗಳನ್ನು ಆಯುರ್ವೇದದ ಔಷಧಿಗಳಲ್ಲಿ ಉಪಯೋಗಿಸುತ್ತಿಲ್ಲವೇ? ಬೇವಿನ ಗಿಡದ ಎಲೆಗಳಲ್ಲಿ ವಾಯು ಮಂಡಲವನ್ನು ಶುದ್ಧಿಗೊಳಿಸುವ ಶಕ್ತಿ ಇದೆ. ಅದರ ಎಲೆಗಳ ಸೇವನೆಯಿಂದ ಅನೇಕ ರೋಗಗಳು ನಿವಾರಣೆಯಾಗುತ್ತವೆ ಎಂದು ವೈಜ್ಞಾನಿಕವಾಗಿ ಹೇಳಲಾಗಿದೆ. ಎಕ್ಕದ ಹಾಲು ಅನೇಕ ರೋಗಗಳ ನಿವಾರಣ ಶಕ್ತಿಯನ್ನು ಹೊಂದಿದೆ. ಆದ್ದರಿಂದ ಈ ಗಿಡಮರಗಳನ್ನು ಪೂಜ್ಯ ದೃಷ್ಟಿಯಿಂದ ನೋಡಿದರೆ ನಾವು ಅವನ್ನು ನಾಶ ಪಡಿಸುವುದಿಲ್ಲ. ಯಾವುದೇ ವ್ಯಕ್ತಿ, ವಸ್ತುಗಳಲ್ಲಿ ಪೂಜ್ಯ ಭಾವನೆಯಿಲ್ಲದಿದ್ದರೆ ಅವುಗಳ ಬಗ್ಗೆ ತಿರಸ್ಕಾರ ಭಾವನೆ ಇರುತ್ತದೆ. ಅವುಗಳನ್ನು ನಾಶಪಡಿಸಲು ಸಹ ಹಿಂಜರಿಯುವುದಿಲ್ಲ. ಇಂತಹ ಗಿಡಮರಗಳನ್ನು ಪೂಜಿಸಲೇಬೇಕು ಎಂದು ಧರ್ಮದ ಗ್ರಂಥಗಳಲ್ಲಿ ಹೇಳಿಲ್ಲ.

ಮಾ : ಗೋವು ಮಾತ್ರ ಏಕೆ ಅತ್ಯಂತ ಪರಮ ಪವಿತ್ರ ? ಎಲ್ಲ ಪ್ರಾಣಿಗಳಲ್ಲಿಯೂ ಜೀವಾತ್ಮವಿದೆ, ಅವುಗಳಿಗೆ ಸುಖ ದುಃಖವಿದೆ. ಬದುಕುವ ಹಕ್ಕಿದೆ. ಆದ್ದರಿಂದ ಯಾವ ಜೀವವನ್ನೂ ಹತ್ಯೆ ಮಾಡಬಾರದು. ಗೋವು ಬೌದ್ಧಿಕ ಸ್ತರದಲ್ಲಿ ಮನುಷ್ಯನಿಗಿಂತ ಕೆಳಗೆ ಅಂದಾಗ ಅದನ್ನು ಪೂಜಿಸುವುದಕ್ಕಿಂತ ಅದನ್ನು ಸರಿಯಾಗಿ ಪೋಷಿಸಬೇಕು. ಪೂಜಿಸಿ, ಹಾಲನ್ನು ಹಿಂಡಿಕೊಂಡು ಬೀದಿಯ ಕಸ ಮೇಯಲು ಬಿಡುವುದರಲ್ಲಿ ಅರ್ಥವಿದೆಯೆ? ಗೋವಿನ ಉತ್ಪನ್ನಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು, ಅದೇ ರೀತಿ

ತಳಿಗಳನ್ನು ಚೆನ್ನಾಗಿ ಪೋಷಿಸಬೇಕು. ಗೋವು ಮಾತ್ರವೇಕೆ ಎಮ್ಮೆ, ಕುದುರೆ ಮುಂತಾದ ಎಲ್ಲ ಪ್ರಾಣಿಗಳ ಬಗ್ಗೆಯೂ ದಯ ಇರಬೇಕು.

ಇನ್ನು ಗಿಡಮರಗಳು; ಅವನ್ನು ಪೂಜಿಸುವುದರಿಂದ ಪ್ರಯೋಜನವಿಲ್ಲ. ವಿದೇಶಗಳ ಜನ ಗಿಡಗಳನ್ನು ಪೂಜಿಸುವುದಿಲ್ಲ; ಗಿಡಗಳಿಗೆ ಮದುವೆ ಮಾಡಿಸುವುದಿಲ್ಲ. ಆದರೆ ವೃಕ್ಷ ಸಂಪತ್ತು ಬೆಳೆಸುವ ಪರಿಸರ ಪ್ರಜ್ಞೆ ಹೊಂದಿರುತ್ತಾರೆ. ಬಿಲ್ವ, ಬೇವು, ಅರಳಿ, ತುಳಸಿ ಎಲ್ಲವೂ ವೈಜ್ಞಾನಿಕವಾಗಿ ಉಪಯುಕ್ತ. ಔಷಧಿಯುಕ್ತ ಮೌಲ್ಯ ಇರುವ ವಸ್ತುಗಳನ್ನೇ ಸಾಂಪ್ರದಾಯಿಕವಾಗಿ ಪೂಜೆಗೆ ಬಳಸುವುದು. ವಸ್ತುವನ್ನು ಬಳಸುವುದರ ಹಿಂದಿನ ಅರ್ಥವನ್ನು ವೈಜ್ಞಾನಿಕವಾಗಿ ತಿಳಿಸುವ ಬದಲು ಯಾಂತ್ರಿಕವಾಗಿ ಪೂಜೆ ಮಾಡಲು ಹಚ್ಚಿದರೆ ಏನು ಪ್ರಯೋಜನ. ಉದಾ: ತುಳಸಿ. ತಲೆ ಬಾಗಿಲಿನ ಮುಂದೆ ಕಟ್ಟೆ ಕಟ್ಟಿ ತುಳಸಿಯನ್ನು ಬೆಳಸಿದರೆ ಅದರ ಮೇಲೆ ಹಾದುಬರುವ ಗಾಳಿಯು ಹವೆಯನ್ನು ಶುದ್ಧಗೊಳಿಸುವುದು ನಿಜ. ಇದರ ಪ್ರಜ್ಞೆ ಎಷ್ಟು ಜನಕ್ಕಿದೆ? ಕೆಮ್ಮು, ದಮ್ಮು, ಕಫ ನಿವಾರಣೆಗಾಗಿ ಪ್ರತಿ ಮನೆಯ ಬಳಿಯಲ್ಲಿ ತುಳಸಿ ಬೆಳೆಸಿದರೆ ಅದರ ಕಷಾಯವನ್ನು ಮಾಡಲು ಅನುಕೂಲ. ಆದರೆ, ತುಳಸಿಕಟ್ಟೆಗೆ ಒಂದು ಲೋಟ ನೀರು ಹಾಕಿ, ಕುಂಕುಮ ಹಚ್ಚಿದರೆ ಆಯಿತು, ಕರ್ತವ್ಯ ಮುಗಿಯಿತು ಎಂದುಕೊಳ್ಳುತ್ತಾರೆ. ಎರಡು ಕಡ್ಡಿ ಅದರಲ್ಲಿ ನಾಲ್ಕು ಎಲೆ ಇರುವಂತೆ ಅದು ಒಣಗಿ ಬರಲಾಗಿರುತ್ತದೆ. ಇನ್ನು ಈ ಗಿಡಗಳಿಗೆ ಪೂಜೆ, ಮದುವೆ, ಜೊತೆಗೆ ಕೊಳಕು ಕಥೆ ಬೇರೆ! ವಿಷ್ಣು ಮಾರುವೇಷದಿಂದ ವೃಂದಾಳ ಪತಿಯಂತೆ ಬಂದು ಆಕೆಯೊಡನೆ ಕ್ರೀಡಿಸಿ ಪಾತಿವ್ರತ್ಯಕ್ಕೆ ಚ್ಯುತಿ ತಂದು, ಆಕೆಯ ಗಂಡನನ್ನು ಯುದ್ಧದಲ್ಲಿ ಸೋಲಿಸಿದನಂತೆ. ಆಮೇಲೆ ಅವಳಿಗೆ ವರ ಕೊಟ್ಟನಂತೆ, ನಿನ್ನನ್ನು ಪೂಜಿಸಲಿ ಎಂದು. ಎಷ್ಟು ಅಸಹ್ಯವಾದ ಕಥೆ. ವಿಷ್ಣು ಮಾಡಿದುದು ಸರಿಯೆ? ಶೀಲಗೆಟ್ಟ ಹೆಣ್ಣು ಮಗಳು ತುಳಸಿ ಗಿಡವಾದಳಂತೆ; ಅವಳನ್ನು ಪೂಜಿಸಬೇಕೆ? ಬರೀ ಇಂಥಾ ಅಸಂಬದ್ಧ ವಿಚಾರಗಳ ಭಕ್ತಿ ವೈಚಾರಿಕ ಪ್ರಜ್ಞೆಗೆ ಸಮರ್ಥನೀಯವೆ? ಇದರ ಬದಲು ಗಿಡಮರಗಳ ಮಹತ್ವ ತಿಳಿಸಿ ಎಲ್ಲೆಡೆ ವನ ಸಂಪತ್ತನ್ನು ಬೆಳೆಸಬೇಕು ಎಂಬ ಪ್ರಜ್ಞೆ ಮೂಡಿಸುವುದು ಒಳಿತಲ್ಲವೆ?

ಅದೇ ರೀತಿ ಪಂಚಭೂತಗಳು ಸಹ. ಮಾನವನ ಜೀವಿತಕ್ಕಾಗಿ ಅವು ಉಪಯುಕ್ತವಾಗಿವೆ. ನೆಲ, ನೀರು, ಬೆಂಕಿ, ಗಾಳಿ, ಆಕಾಶ ಇವುಗಳನ್ನು ದೇವರು ಸೃಷ್ಟಿಸಿದ್ದಾನೆ. ಸೃಷ್ಟಿಯ ಮೂಲ ದ್ರವ್ಯಗಳವು. ಆದರೆ ಜಡವಸ್ತುಗಳು. ಮಾನವನು ಚೈತನ್ಯ ಸ್ವರೂಪನು; ಪಂಚಭೂತಗಳ ಸರಕ್ಕಿಂತ ಮೇಲಿನವನು. ಅಂದಾಗ ಚೈತನ್ಯ ಸ್ವರೂಪಿ ಮಾನವ ಜಡವಾದ ಪಂಚಭೂತಗಳನ್ನು ಪೂಜಿಸುವುದೆ? ಅವುಗಳನ್ನು ಪರಿಶುದ್ಧವಾಗಿ ಇಟ್ಟುಕೊಂಡು ತನ್ನ ಜೀವಿತಕ್ಕೆ ಬಳಸಬೇಕು. ಅವನ್ನು ಕೊಟ್ಟುದಕ್ಕಾಗಿ ದೇವರನ್ನು ಸ್ಮರಿಸಬೇಕು.

ಯ : ಗುರು ಪೂಜೆ, ದೇವತಾ ಪೂಜೆ, ಇವುಗಳನ್ನು ಮಾಡುವುದರಿಂದ ನಮಗೆ ಸೃಷ್ಟಿಕರ್ತನಾದ ಪರಮಾತ್ಮನನ್ನು ನಮ್ಮ ಅಜ್ಞಾನ ಅಂಧಕಾರವನ್ನು ನಿವಾರಣೆ ಮಾಡಿ, ಜ್ಞಾನ ಮಾರ್ಗವನ್ನು ಬೋಧಿಸಿದ ಗುರುಗಳನ್ನು ಪೂಜ್ಯ ಭಾವನೆಯಿಂದ ನೋಡುವುದರಿಂದ ನಾವುಗಳು ಅವರ ಋಣ ತೀರಿಸಿದಂತಾಗುವುದಿಲ್ಲವೇ? ಸಮಾಜದಲ್ಲಿ ಸಾಮರಸ್ಯ ಭಾವನೆಗಳು ಮೂಡಲು ಸಹಾಯಕ -ವಾಗುವುದಿಲ್ಲವೆ?

ಮಾ: ಗುರುಪೂಜೆ ಖಂಡಿತಾ ಮಾನ್ಯ. ಜ್ಞಾನ ನೀಡುವ ಗುರುವನ್ನು ಗೌರವಿಸಬೇಕು. ಗುರುಗಳಲ್ಲಿ 3 ಪ್ರಕಾರ ದೀಕ್ಷಾ ಗುರು, ಶಿಕ್ಷಾ (ಜ್ಞಾನ) ಗುರು, ಮೋಕ್ಷ ಗುರು. ಮಂತ್ರೋಪದೇಶ ಮಾಡಿದವನು ದೀಕ್ಷಾ ಗುರು. ಒಬ್ಬ ಗುರುವಿನಿಂದ ದೀಕ್ಷೆ ಪಡೆದರೂ ಇನ್ನಿತರರಿಂದ ಜ್ಞಾನ, ಮಾರ್ಗದರ್ಶನ ಪಡೆಯಬಹುದು. ಅವರು ಮುಮುಕ್ಷುವಿಗೆ ಜ್ಞಾನ ಗುರು ಎನ್ನಿಸಿಕೊಳ್ಳುವರು. ಮೋಕ್ಷ ಮಾರ್ಗದ ಸಾಧನೆಯಲ್ಲಿ ಮಾರ್ಗದರ್ಶನ ಮಾಡುವವರು ಮೋಕ್ಷ ಗುರು.

ದೇವತಾ ಪೂಜೆ ಮಾತ್ರ ಅರ್ಥರಹಿತ. ಹಿಂದುಗಳು ಪೂಜಿಸುವ ಆಕಾರವುಳ್ಳವರಲ್ಲಿ ಕೆಲವರು ಐತಿಹಾಸಿಕ ವ್ಯಕ್ತಿಗಳು; ಮತ್ತೆ ಕೆಲವು ಶುದ್ಧ ಕಾಲ್ಪನಿಕ. ಶಿವ - ಪಾರ್ವತಿ, ಶ್ರೀರಾಮ, ಶ್ರೀಕೃಷ್ಣ ಮುಂತಾದವರು ಐತಿಹಾಸಿಕ ವ್ಯಕ್ತಿಗಳು. ನವಗ್ರಹಗಳು, ನಿಸರ್ಗದ ಹಿಂದೆ ಕಲ್ಪಿಸಿಕೊಂಡ ವಾಯು, ಅಗ್ನಿ, ಗಂಗಾ, ಸರಸ್ವತಿ ಲಕ್ಷ್ಮಿ ಮುಂತಾದವು ದೇವತೆಗಳು. ಒಂದು ಕಾಲದಲ್ಲಿ ಬಾಳಿ ಬದುಕಿ ಸಂದೇಶ ಕೊಟ್ಟು ಹೋದವರು ಐತಿಹಾಸಿಕ ಮಹಾಪುರುಷರು. ದೇವತೆಗಳು ಪುರಾಣಕಾರರ ಲೇಖನಿಯಲ್ಲಿ ಹುಟ್ಟಿದ ಪಾತ್ರಗಳು. ಉದಾ: ಸೂರ್ಯ, ಸೂರ್ಯ ಒಂದು ಉರಿಯುವ ಗೋಲಾಕಾರದ ಬೆಂಕಿಯ ಚೆಂಡು. ಅದರಲ್ಲಿ ಯಾವ ದೇವತೆಯೂ ಇಲ್ಲ. ಅಂಥ ಸೂರ್ಯನನ್ನು ಆಕಾರಗೊಳಿಸಿ 7 ದಿನಗಳನ್ನು 7 ಕುದುರೆಗಳನ್ನಾಗಿ ಮಾಡಿ ಚಿತ್ರಿಸಲಾಗುವುದು. ಸೂರ್ಯ, ಚಂದ್ರ, ಶನಿ, ಮಂಗಳ ಎಷ್ಟು ದೂರದಲ್ಲಿರುವ ಗ್ರಹಗಳು. ಅವುಗಳನ್ನು ಮೂರ್ತೀಕರಿಸಿ ಪೂಜಿಸಲಾಗುತ್ತಿದೆ. ಇನ್ನು ಕೆಲ ದೇವತೆಗಳ ಚಾರಿತ್ರ್ಯವಂತೂ ಇನ್ನೂ ಅಸಂಬದ್ಧ. ಶನಿ ಬಹಳ ಕಾಟಕೊಡುವ ಗ್ರಹ ಅದಕ್ಕಾಗಿ ಭಯಭೀತರಾಗಿ ಶನಿಯನ್ನು ಪೂಜಿಸುವರು. ಈ ಚಿತ್ರೀಕರಣ ವಿಧಾನ ಎಷ್ಟು ಮುಂದುವರಿಯುವುದೆಂದರೆ ಮೈಲಿಕಲ್ಲು (ಕಿಲೋ ಮೀಟರ್ ಕಲ್ಲು) ದೇವತೆಯಾಗಿ

ಪರಿವರ್ತನೆಗೊಳ್ಳುವುದು) ಪ್ಲೇಗಮ್ಮ, ಕಾಲರಾದಮ್ಮ ಮುಂತಾಗಿ ಸರಪಳಿ ಬೆಳೆಯುತ್ತದೆ. ನಂತರ ಈ ದೇವತೆಗಳ ಬಗ್ಗೆ ಪುರಾಣಗಳು ರಚನೆಯಾಗುತ್ತವೆ. ಹೀಗೆ ಮೂಢ ನಂಬಿಕೆಗಳು ಹಿಂದಿಗಿಂತ ಈಗ ಜಾಸ್ತಿಯಾಗುತ್ತಲಿವೆ. ಇವುಗಳಲ್ಲಿ ಅರ್ಥವಿದೆಯೆ?

ಯ : ಪಿತೃಪೂಜೆಗಳನ್ನು ಮಾಡುವುದರಿಂದ ನಮಗೆ ಜನ್ಮಕೊಟ್ಟ ಮಾತಾಪಿತರುಗಳನ್ನು ಹಾಗೂ ಪೂರ್ವಜರನ್ನು ಸ್ಮರಿಸಿಕೊಳ್ಳುವ ಅವಕಾಶವುಂಟಾಗುವುದಲ್ಲವೆ? ಪಿತೃಪಕ್ಷವನ್ನು ಮಾಡುವುದರಿಂದ ಒಂದು ಕುಟುಂಬದ ರಕ್ತ ಸಂಬಂಧಿಗಳೆಲ್ಲರೂ ಒಂದು ಕಡೆ ಸೇರಿ ತಮ್ಮ ವಂಶದ ಪೂರ್ವ ಜನರನ್ನು ಸ್ಮರಿಸಿಕೊಳ್ಳಲು ಒಂದು ಅವಕಾಶವಲ್ಲವೇ? ಇದರ ನೆಪದಲ್ಲಾದರೂ ಕುಟುಂಬದ ರಕ್ತ ಸಂಬಂಧಿಗಳು ಒಂದು ಕಡೆ ಸೇರಲು ಹಾಗೂ ಆ ಕುಟುಂಬದಲ್ಲಿ ಸೌಹಾರ್ದಯುತವಾದ ವಾತಾವರಣ ಉಂಟಾಗಲು ಸಹಾಯಕವಾಗುತ್ತದೆಯಲ್ಲವೇ? ಭಾವನೆಗಳಿಲ್ಲದ ಕಾರಣ ಕುಟುಂಬಗಳಲ್ಲಿ ಸಮಾಜದಲ್ಲಿ ಸೌಹಾರ್ದಯುತವಾದ ವಾತಾವರಣ ನಾಶವಾಗಿದೆ.

ಮಾ: ಮಾತಾಪಿತೃಗಳನ್ನು, ಹಿರಿಯರನ್ನು ಸ್ಮರಿಸಿಕೊಳ್ಳಬೇಕಾದುದು ಕರ್ತವ್ಯ. ಆದರೆ ಅದು ಅರ್ಥವಂತಿಕೆಯಿಂದ ಕೂಡಿರಬೇಕು. ಇರುವಾಗ ವೃದ್ಧ ತಾಯಿ ತಂದೆಯರನ್ನು ಅವರಿಗೆ ಮನ ನೋಯದಂತೆ, ಆತ್ಮಾಭಿಮಾನಕ್ಕೆ ಧಕ್ಕೆ ಬರದಂತೆ ಇರುವವರೆಗೆ ನೋಡಿಕೊಳ್ಳಬೇಕು, ಇರುವಾಗ ನಿರ್ಲಕ್ಷಿಸಿ, ತಿರಸ್ಕಾರದಿಂದ ಕಂಡು ನೋಯಿಸುತ್ತ ನಂತರ ಅದ್ದೂರಿಯಾಗಿ ಶ್ರಾದ್ಧ ಮಾಡುವ ಮಕ್ಕಳಾದರೆ ಏನೂ ಪ್ರಯೋಜನವಿಲ್ಲ. ಒಂದು ಲೋಕೋಕ್ತಿ ಇದೆ. ಬ್ರಾಹ್ಮಣ ದುಡ್ಡಿದ್ದು ಪಿಂಡಕ್ಕೆ, ಒಕ್ಕಲಿಗ ದುಡಿದದ್ದು ದಂಡಕ್ಕೆ, ಹೊಲೆಯ ದುಡಿದದ್ದು ಹೆಂಡಕ್ಕೆ ಅಂತ. ಶ್ರಾದ್ಧಾದಿ ಕರ್ಮಗಳನ್ನು ಮಾಡಲು ಜನರು ಸಾಲಸೂಲ ಮಾಡಿಕೊಂಡು ಕಷ್ಟಪಡುವರು. ಶ್ರಾದ್ಧದ ಊಟ ಇಂಥದೇ ಇರಬೇಕು ಎಂದು ಕೈಲಾಗದಿದ್ದರೂ ಮಾಡಿಸಲು ಹೋಗುವರು. ಶಕ್ತಿ ಇರುವವರು ಸಮಾವೇಶದ ತರಹ ಮಾಡಲಿ, ಎಲ್ಲರೂ ಕೂಡಿ ಹರ್ಷಿಸಲಿ. ಆದರೆ ಶಕ್ತಿಯಿಲ್ಲದವರು ಧಾರ್ಮಿಕ ನಿಯಮ ಎಂದೋ, ಜನಾಪವಾದಕ್ಕೆ ಹೆದರಿಯೋ ಒದ್ದಾಡಬೇಕಾಗಿಲ್ಲ. ಧರ್ಮಾಚರಣೆ ಸಹಜವೂ ಆಗಿರಬೇಕು, ಬದುಕಿಗೆ ಪೂರಕ -ವಾಗಿರಬೇಕೇ ವಿನಾ ಮಾರಕವಾಗಿಯಲ್ಲ.

ಪಿತೃಪಕ್ಷ ಆಚರಣೆ ಮತ್ತು ಗ್ರಾಮೀಣ ಭಾಷೆಯಲ್ಲಿ ಹಿರೇರ ಹಬ್ಬ (ಲಿಂಗಾಯತರು ಮಾಡಬಾರದು, ಅಜ್ಞಾನಿಗಳಾಗಿ ಕೆಲವರು ಮಾಡುತ್ತಾರೆ.) ಭಾರತೀಯ ಕರ್ಮ ಸಿದ್ಧಾಂತದ ಪ್ರಕಾರ ಅರ್ಥಹೀನ. ಸಾವಿನ ನಂತರ ಆತ್ಮಗಳು ತಮ್ಮ ಈಗಿನ ಜನ್ಮದ ಕರ್ಮಕ್ಕನುಸಾರವಾಗಿ ಇನ್ನೊಂದು ಜನ್ಮಕ್ಕೆ ಸಾಗುವವು. ಮುಕ್ತಾತ್ಮರಾದರೆ ದೇವರಲ್ಲಿ ಒಂದಾಗುವರು. ಎಂದೋ ಸತ್ತ ಪಿತೃಗಳನ್ನು ಒಟ್ಟಾರೆಯಾಗಿ ಹಿರೇರ ಹಬ್ಬದಲ್ಲಿ ಒಂದು ಕಲಶವಿಟ್ಟು ಅದಕ್ಕೆ ಸೀರೆ ಉಡಿಸಿ, ಪಂಚೆ ಹೊದಿಸಿ, ಪೂಜಿಸುವುದು ಎಷ್ಟು ಹಾಸ್ಯಾಸ್ಪದ! ಹಿರಿಯರನ್ನು ಸ್ಮರಿಸಿ ಅವರ ಸ್ಮರಣಾರ್ಥ ಏನಾದರೂ ಒಳ್ಳೆಯ ಕೆಲಸ ಮಾಡುವುದು ಅರ್ಥಪೂರ್ಣ.

ಶ್ರಾದ್ಧದಲ್ಲಿ ಮಾಡಿದ ಅಡಿಗೆಯನ್ನೆಲ್ಲ ಎಲೆಯಲ್ಲಿ ಜೋಡಿಸಿ, ಪಿತೃವಿನ ಪ್ರೇತಾತ್ಮವು ಕಾಗೆಯ ರೂಪದಲ್ಲಿ ಬಂದು ತಿನ್ನುತ್ತದೆ ಎಂದು ಕಾಗೆ ತಿನ್ನುವ ತನಕ ಕಾಯುವುದು ಎಷ್ಟು ಅರ್ಥಹೀನ! ಸತ್ತವರು ಬಳಸುತ್ತಿದ್ದ ಅವರಿಗೆ ಬಹು ಪ್ರಿಯವಾಗಿದ್ದ ವಸ್ತುಗಳನ್ನು ತಗ್ಗಿನಲ್ಲಿ ಹಾಕಿ ಮುಚ್ಚುವುದು ಎಷ್ಟು ಅಜ್ಞಾನಯುಕ್ತ! ದೊಡ್ಡ ಮನುಷ್ಯರು ಸತ್ತಾಗ ಅವರ ಕಳೆಬರ ಸುಟ್ಟು ಆದರ ಬೂದಿಯನ್ನು ದೇಶದ ನದಿಗಳಲ್ಲೆಲ್ಲ ಚೆಲ್ಲುವುದು ಅರ್ಥಹೀನ ಮತ್ತು ಹಣದ ಅಪವ್ಯಯ.

ಯಲ್ಲಪ್ಪನವರು ಪಿತೃ ಸ್ಮರಣೆಯಲ್ಲಿ ಎಲ್ಲರೂ ಒಟ್ಟಾಗಿ ಸೇರುವರಲ್ಲವೆ ಎಂದು ಮೂಢ ಶ್ರದ್ಧೆಯಲ್ಲೂ ಒಂದು ಉತ್ತಮ ಅಂಶವನ್ನು ಹುಡುಕುತ್ತಾರೆ. ನಾವೀಗ ಚರ್ಚಿಸುತ್ತಿರುವುದು ಸೈದ್ಧಾಂತಿಕ ಹಿನ್ನೆಲೆಯನ್ನು. ನಾವು ನಂಬುವ ಸಿದ್ಧಾಂತ (Metaphysics) ಮತ್ತು ತತ್ವಜ್ಞಾನ (philisophy)ಕ್ಕೆ ಅನುಗುಣವಾಗಿ ನಮ್ಮ ಆಚರಣೆ, ವಿಧಿ - ವಿಧಾನ ಇರಬೇಕು ಎನ್ನುವುದಾದರೆ ಕರ್ಮಸಿದ್ಧಾಂತದ ಪ್ರಕಾರ ಪಿತೃ ಪಕ್ಷ ಆಚರಣೆ ಅರ್ಥಹೀನ.

ಯ : ಭಗವಂತ ಸರ್ವವ್ಯಾಪಿ ಎಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಎಲ್ಲಾ ನೀರು ಸೇವಿಸಲು ಯೋಗ್ಯವಲ್ಲ. ಹಾಗೆಯೇ ಸರ್ವ ವ್ಯಾಪಿಯಾದ ಭಗವಂತ ಎಲ್ಲೆಲ್ಲೂ ಇದ್ದರೂ ತೀರ್ಥಕ್ಷೇತ್ರಗಳಲ್ಲಿ ಸಾಧು, ಸಂತರು, ಭಕ್ತರು ನಿರಂತರವಾಗಿ ಭಗವಂತನ ಸ್ಮರಣೆಯನ್ನೇ ಮಾಡುತ್ತಿದ್ದು ಆ ಕ್ಷೇತ್ರಗಳಲ್ಲಿ ಅಧ್ಯಾತ್ಮಿಕ ತರಂಗ ಹೆಚ್ಚಾಗಿರುತ್ತವೆ. ಆ ಕ್ಷೇತ್ರಗಳಿಗೆ ಭೇಟಿಯಿತ್ತಾಗ, ಮನುಷ್ಯ ಸಹಜವಾಗಿಯೇ, ಆತನೂ ಸಹ ಪರಮಭಕ್ತಿಯಿಂದ ಭಗವಂತನನ್ನು ಸ್ಮರಿಸುತ್ತಾನೆ ಹಾಗೂ ಮನಸ್ಸಿಗೆ ಶಾಂತಿ ಸಮಾಧಾನವನ್ನು ತಂದುಕೊಳ್ಳುತ್ತಾನೆ. ಇದರಿಂದ ಅವನಿಗೇ ಹೆಚ್ಚು ಪ್ರಯೋಜನ.

ಕೆಲವು ನದಿಗಳಲ್ಲಿ ಸ್ನಾನ ಮಾಡಿದರೆ ಪಾಪ ಕ್ಷಯವಾಗಿ ಪುಣ್ಯ ಪ್ರಾಪ್ತಿಯಾಗುವುದು ಎಂಬುದು

ಒಂದು ನಂಬಿಕೆ. ಹಿಂದೆ ಭಾರತದಲ್ಲಿ ಹರಿಯುವ ಗಂಗಾ, ಯಮುನ, ಕಾವೇರಿ, ತುಂಗಭದ್ರ ಇವುಗಳು ಪರಿಶುದ್ದವಾಗಿದ್ದವು. ಈ ನೀರನ್ನು ಸೇವಿಸುವುದರಿಂದ ನಮ್ಮ ಆರೋಗ್ಯ ಉತ್ತಮವಾಗುತ್ತಿತ್ತು. ಎಲ್ಲೆಲ್ಲೂ ನೀರಿದ್ದರೂ ಎಲ್ಲಾ ನೀರು ಕುಡಿಯಲು ಹಾಗೂ ಸ್ನಾನ ಮಾಡಲು ಯೋಗ್ಯವಲ್ಲ. ಪರಿಶುದ್ದವಾದ ಕಲ್ಮಷ ರಹಿತವಾದ ನೀರು ಸೇವನೆಗೆ, ಸ್ನಾನಕ್ಕೆ ಯೋಗ್ಯ ಅಲ್ಲವೆ? ನಮ್ಮ ಸಂಸ್ಕೃತಿಯಲ್ಲಿ ಗಂಗೆಯನ್ನು ನಿರ್ಮಲ ಮನಸ್ಸಿಗೆ, ವ್ಯಕ್ತಿಯ ಚಾರಿತ್ರ್ಯಕ್ಕೆ ಉದಾಹರಣೆಯಾಗಿ ಕೊಡುತ್ತೇವೆಯಲ್ಲವೆ? ಪರಿಶುದ್ಧ ಮನಸ್ಸುಳ್ಳ ವ್ಯಕ್ತಿ ಯಾವ ತೀರ್ಥಯಾತ್ರೆಯನ್ನು ಮಾಡಬೇಕಾಗಿರುವ ಆವಶ್ಯಕತೆ ಇರುವುದಿಲ್ಲ. ತೀರ್ಥಯಾತ್ರೆ ಮಾಡುವುದರಿಂದ ಆ ಕ್ಷೇತ್ರದ ಮಹತ್ವವನ್ನು ಅಲ್ಲಿನ ಪರಿಸರವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ಮಾ: ದೇವರು ಸರ್ವವ್ಯಾಪಿ ಅಂದ ಮೇಲೆ ಅವನನುಗ್ರಹ ಯಾವುದೇ ನದಿಗೆ, ತೀರ್ಥ ಕ್ಷೇತ್ರಕ್ಕೆ ಸೀಮಿತವಾಗಿ ಇರದು. ಆದ್ದರಿಂದಲೇ ಬಸವಾದಿ ಪ್ರಮಥರು ಪುಣ್ಯಪ್ರಾಪ್ತಿಗೆ ಯಾವುದೇ ತೀರ್ಥಕ್ಷೇತ್ರ ಯಾತ್ರೆ ಕೈಗೊಳ್ಳುವುದನ್ನು ಪ್ರೋತ್ಸಾಹಿಸುವುದಿಲ್ಲ. ಕೆಲವು ನದಿಗಳಲ್ಲಿ ಸ್ನಾನ ಮಾಡಿದರೆ ಪಾಪಕ್ಷಯವಾಗಿ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯೇ ಅಸಂಬದ್ಧ. ಹಿಂದು ಧರ್ಮ ಸ್ವಭಾವತಃ ಕೆಲವು (ಮೂಢ) ನಂಬಿಕೆ ಬೆಳೆಸುತ್ತದೆ. ಎಷ್ಟೇ ಉತ್ತಮ ನೀರಾಗಿರಲಿ ಅದರಲ್ಲಿ ಸ್ನಾನ ಮಾಡಿದಾಗ ದೇಹವು ಸ್ವಚ್ಛ -ವಾಗುವುದೇ ವಿನಾ ಪಾಪಕ್ಷಯವೂ ಆಗುವುದಿಲ್ಲ, ಪುಣ್ಯ ಪ್ರಾಪ್ತಿಯೂ ಆಗುವುದಿಲ್ಲ. ಈಗಿನ ಗಂಗಾ ನದಿಯಲ್ಲಿ ಮುಳುಗಿದಾಗ ದೇಹ ಸ್ವಚ್ಛವೂ ಆಗಲಿಕ್ಕಿಲ್ಲ. ಜಡವಾದ ಭೌತಿಕ ಕ್ಷೇತ್ರಕ್ಕೆ ಹೋದ ಮಾತ್ರಕ್ಕೆ, ಅಲ್ಲಿ ಹರಿವ ಅಥವಾ ಇರುವ ನದಿ, ಕುಂಡಗಳಲ್ಲಿ ಮುಳುಗಿ ಎದ್ದ ಮಾತ್ರಕ್ಕೆ ಪಾಪಕ್ಷಯವಾಗಿ ಪುಣ್ಯಪ್ರಾಪ್ತಿಯಾಗುವುದು ಎಂಬ ನಂಬಿಕೆಯು ನಿಜಕ್ಕೂ ಅಪಾಯಕಾರಿ ! ಪಾಪ -ಪುಣ್ಯಗಳು ನೈತಿಕ ವಿಷಯಗಳು. ಪರೋಪಕಾರದಿಂದ ಪುಣ್ಯ; ಪರಪೀಡನೆಯಿಂದ ಪಾಪ! ಶ್ರೀಮಂತರಿಗೆ ಅಂಥ ತೀರ್ಥಕ್ಷೇತ್ರ ದರ್ಶನ, ಸ್ನಾನ ಸಾಧ್ಯ. ಆಗ ಅವನು ಪುಣ್ಯವಂತನೆಂದು ಬೀಗುತ್ತಾನೆ, ಕಾಯಕ ಜೀವಿಯಾದ ಬಡ ಭಕ್ತನು ತೀರ್ಥಕ್ಷೇತ್ರ ಯಾತ್ರೆ ಮಾಡಲಾರದೆ ಹತಾಶನಾಗಿ ತಾನು ಪಾಪಿ ಎಂದು ಕುಗ್ಗಿ ಹೋಗುತ್ತಾನೆ. ಪರಧನವನ್ನು ಅಕ್ರಮವಾಗಿ ಲಪಟಾಯಿಸುವ ವ್ಯಕ್ತಿ ಸುಲಭವಾಗಿ ಪುಣ್ಯವನ್ನು ಗಳಿಸುವವನಾದರೆ ಜನರು ಒಳ್ಳೆಯವರು, ನೀತಿವಂತರು, ಪ್ರಾಮಾಣಿಕರು ಆಗಿ ಏಕಿರಬೇಕು ?

ತೀರ್ಥಕ್ಷೇತ್ರಗಳಲ್ಲಿ ದರ್ಶನಕ್ಕೆ ಅಸಂಖ್ಯಾತ ಜನರು ಬರುವುದರಿಂದ ಸ್ನಾನಕ್ಕಾಗಿ ನದಿಗಳನ್ನು, ತೀರ್ಥಕುಂಡಗಳನ್ನು ಆಶ್ರಯಿಸುತ್ತಾರೆ. ಕೂಡಲ ಸಂಗಮದ ಶರಣ ಮೇಳಕ್ಕೆ ಬಂದವರು ಸಹ ನದಿಗೆ ಸ್ನಾನಕ್ಕೆ ಹೋಗಿ ಬರುತ್ತಾರೆ. ಆದರೆ ನಾವು ಆ ಸ್ನಾನದಿಂದ ಪುಣ್ಯಪ್ರಾಪ್ತಿ ಎಂಬ ನಂಬಿಕೆಯನ್ನು ಬೆಳೆಸುವುದಿಲ್ಲ. "ದೇಶವನ್ನು ತಿರುಗಿ ನೋಡು, ಕೋಶವನ್ನು ಓದಿ ನೋಡು" ಎಂಬ ಲೋಕೋಕ್ತಿಯಂತೆ ಈ ಎರಡು ಕ್ರಿಯೆಗಳಿಂದ ವ್ಯಕ್ತಿಯ ಜ್ಞಾನಾಭಿವೃದ್ಧಿಯಾಗುವುದು, ನಾಡಿನ ಸಂಸ್ಕೃತಿಯ ಪರಿಚಯವಾಗುವುದು. ಆದ್ದರಿಂದ ಕ್ಷೇತ್ರ ದರ್ಶನ ಪಾಪ -ಪುಣ್ಯಗಳಿಗೆ ಸಂಬಂಧಿಸಿದ ಕ್ರಿಯೆಯಲ್ಲ.

ಯಲ್ಲಪ್ಪನವರು ಹಿಂದು (ಸನಾತನ) ಧರ್ಮದ ಲೋಪದೋಷಗಳು ಏನೂ ಅವರಿಗೆ ತಿಳಿದಿಲ್ಲವೇನೋ ಎಂಬಂತೆ ಪ್ರಸ್ತುತ ಲೇಖನವನ್ನು ಬರೆದಿದ್ದಾರೆ. ಕ್ಷೇತ್ರಗಳನ್ನು ದರ್ಶನ ಮಾಡಲು ಮಾನವ ಜನಾಂಗದ ಎಲ್ಲಾ ಭಕ್ತಾದಿಗಳಿಗೂ ಅವಕಾಶ ಉಂಟು. ಎನ್ನುತ್ತಾರೆ. ಯಾರಿಗೆ ಎಲ್ಲಿಯವರೆಗೆ ಹೋಗಲು ಅವಕಾಶ ಉಂಟು ಎಂಬುದು ಇಲ್ಲಿ ಮುಖ್ಯ ಪ್ರಶ್ನೆ. ಭಕ್ತ ಕನಕದಾಸರು ಅಪ್ಪಟ ಕೃಷ್ಣ ಭಕ್ತರು. ಉಡುಪಿ ಕೃಷ್ಣನನ್ನು ದರ್ಶಿಸಬೇಕು ಎಂಬ ಹಂಬಲ ತುಂಬಿ ಪ್ರಯತ್ನಿಸಿದರು. ಕಡೆಗೂ ಗರ್ಭಗುಡಿಯೊಳಕ್ಕೆ ಇರಲಿ, ದರ್ಶಿಸಲು ಬಿಡಲಿಲ್ಲ. ಕಡೆಗೆ ಒಂದು ಕಿಂಡಿಯನ್ನು ಮಾಡಿ ತೋರಿಸಲಾಯಿತು. ಗುರುವಾಯೂರಪ್ಪನ್ ದೇವಾಲಯದೊಳಕ್ಕೆ ವಿದೇಶಿಯರಿಗೆ ಅವಕಾಶವಿಲ್ಲ. ಮಾತ್ರವಲ್ಲ ಸ್ವದೇಶಿಯರಾದ ಜೇಸುದಾಸರಂತಹವರು ಬಂದು ಹೋದರೆಂದು ದೇವಾಲಯವನ್ನು ಶುದ್ಧೀಕರಿಸಲಾಯಿತು. ಹಿಂದುಗಳಲ್ಲಿ ಶಾಸ್ತ್ರೀಯ ಪರಂಪರೆಯ ದೇವಾಲಯಗಳು ಮತ್ತು ಇತರ ಬಣಗಳ ದೇವಾಲಯಗಳುಂಟು. ಶಾಸ್ತ್ರೀಯ ಪಾರಂಪರಿಕ ದೇವಾಲಯಗಳಲ್ಲಿ ಅರ್ಚಕರು ಬ್ರಾಹ್ಮಣರೇ ಇರುತ್ತಾರೆ. ಇತರೆ ದೇವಾಲಯಗಳನ್ನು ಕಟ್ಟಿಕೊಂಡು ಅವರವರೇ ಪೂಜಿಸುತ್ತಾರೆ. ಅದೇ ಬೌದ್ಧ, ಜೈನ್, ಕ್ರೈಸ್ತ ಮುಸ್ಲಿಂ, ಲಿಂಗಾಯತ, ಸಿಖ್ ಧರ್ಮಗಳ ಮಂದಿರ, ಮಂಟಪ, ಗುರುದ್ವಾರ, ಚರ್ಚ್‌ಗಳಲ್ಲಿ ಯಾರು ಬೇಕಾದರೂ ಗುರು, ಜಂಗಮ, ಭಿಕ್ಕುಗಳಾಗಿ ಪೂಜಾದಿ ಕಾರ್ಯಗಳನ್ನು ನೆರವೇರಿಸುತ್ತಾರೆ.

"ಹಿಂದು ಧರ್ಮದಲ್ಲಿ ಮಾಂಸಾಹಾರ - ಸಸ್ಯಾಹಾರ ಎರಡೂ ಇವೆ. ಲಿಂಗಾಯತ ಧರ್ಮ ಶುದ್ಧ ಸಸ್ಯಾಹಾರಿ ಧರ್ಮ. ಆದ್ದರಿಂದ ಅದು "ಅಹಿಂದು" ಎಂಬ ಎರಡೂ ಧರ್ಮಗಳ ತೌಲನಿಕ ಅಧ್ಯಯನದ ಸನ್ನಿವೇಶದಲ್ಲಿ ನಾನು ಬರೆದುದಕ್ಕೆ ಪ್ರತಿಕ್ರಿಯೆಯಾಗಿ ಯಲ್ಲಪ್ಪನವರು ಈ ಆಹಾರ ಪದ್ಧತಿಯನ್ನು ಮನುಷ್ಯ ತನ್ನ ನಾಲಿಗೆಗೆ ಅನುಗುಣವಾಗಿ ಮಾಡಿಕೊಂಡಿರುವನೇ ಹೊರತು ಯಾವುದೇ ತತ್ವಗಳಲ್ಲಿಲ್ಲ. ಎಷ್ಟು ಜನ ಸಸ್ಯಾಹಾರಿಗಳು ಮಾಂಸಾಹಾರಿಗಳಾಗಿಲ್ಲ." ಎಂದು ಪ್ರಶ್ನಿಸುತ್ತಾರೆ.

ಜಗತ್ತಿನಲ್ಲಿ ಮಾನವನು ಸೃಷ್ಟಿಯಾದಾಗ ಅವನಿಗೆ ಸಸ್ಯ, ದವಸ ಧಾನ್ಯಗಳ ಉಪಯೋಗ

ಗೊತ್ತಿರಲಿಲ್ಲ. ಎಲ್ಲರೂ ಪ್ರಾಣಿಗಳನ್ನು ತಿಂದು ಬದುಕುತ್ತಿದ್ದರು. ನಂತರ ಕೃಷಿಯ ಆವಿಷ್ಕಾರವಾಯಿತು. ನಾಗರಿಕತೆ, ಸಂಸ್ಕೃತಿ ಬೆಳೆದವು. ಸಸ್ಯಾಹಾರಿ ಜೀವನವಿಧಾನ ರೂಪುಗೊಂಡಿತು. ಬುದ್ಧ, ಮಹಾವೀರ ನಂತರ ಬಸವಣ್ಣನವರು ಶುದ್ಧ ಸಸ್ಯಾಹಾರಿ, ಅಹಿಂಸಾ ಧರ್ಮವನ್ನು ಪ್ರತಿಪಾದಿಸಿದರು. ಹಿಂದು ಧರ್ಮದಲ್ಲಿ ಸಹ ಯೋಗಿಗಳು, ಋಷಿ ಮುನಿಗಳು ಅಹಿಂಸಾ ಧರ್ಮವನ್ನು ಅಳವಡಿಸಿಕೊಂಡರು. ಸಸ್ಯಾಹಾರಿ ಜೀವನ ಪದ್ಧತಿ ಹಿಂದು ಧರ್ಮದಲ್ಲಿ ಐಚ್ಛಿಕ, ಲಿಂಗಾಯತ ಧರ್ಮದಲ್ಲಿ ಕಡ್ಡಾಯ. ಯಾರೋ ಕೆಲವರು ತನ್ನ ಧರ್ಮಾಚರಣೆಗೆ ವಿರುದ್ಧವಾಗಿ ಮಾಂಸಾಹಾರಿಗಳಾದರೆ ಲಿಂಗಾಯತ ಧರ್ಮದ ಸಂವಿಧಾನ ಬದಲಾಗದಷ್ಟೆ.

ಯ: ಹಿಂದೂ ಧರ್ಮದ ಗ್ರಂಥಗಳಲ್ಲಿ ಪ್ರಾಣಿ ಬಲಿಯನ್ನು ಕೊಡಬೇಕು, ಮಾಂಸಾಹಾರಿಯಾಗ ಬೇಕು. ಇಂತಹವರೇ ನನ್ನನ್ನು ಪೂಜಿಸಬೇಕು, ಯಾಗ ಯಜ್ಞಗಳನ್ನು ಮಾಡಬೇಕು, ಮಂದಿರ, ಮಂಟಪಗಳಲ್ಲಿ ಮಾತ್ರ ಭಗವಂತನಿದ್ದಾನೆ. ಸ್ತ್ರೀಯರಿಗೆ ಪೂಜೆಯ ಹಕ್ಕಿಲ್ಲ, ಉದ್ಯೋಗಗಳಲ್ಲಿ ಮೇಲು, ಕೀಳೆಂಬ ಭಾವನೆಗಳನ್ನು, ವಿವಾಹಗಳನ್ನು ಪುರೋಹಿತ್ಯರ ನೇತೃತ್ವದಲ್ಲಿಯೇ ನಡೆಸಬೇಕು ಎಂಬಿತ್ಯಾದಿ ನಿಯಮಗಳನ್ನೇನಾದರೂ ರೂಪಿಸಲಾಗಿದೆಯೇ?

ಮಾ: ಯಲ್ಲಪ್ಪನವರು ಕೇಳಿದ ಪ್ರಶ್ನೆಗಳನ್ನು ನೋಡಿದರೆ ನಗು ಬರುತ್ತದೆ. ಹಿಂದು ಧರ್ಮ ಪರಸ್ಪರ ವೈರುದ್ಧ್ಯಗಳ ಆಗರ. ಪ್ರಾಣಿ ಬಲಿ ಕೊಡುವ ಶಾಕ್ತ ಸಂಪ್ರದಾಯವನ್ನೂ ಒಳಗೊಂಡಿದೆ. ಅಹಿಂಸೆ -ಸಸ್ಯಾಹಾರ ಹೇಳುವ ಯೋಗವನ್ನು ಒಳಗೊಂಡಿದೆ. ಯಜ್ಞ -ಯಾಗಗಳನ್ನು ಮಾಡಲು ಹೇಳುವುದೆ ಎಂದು ಕೇಳಿದ್ದಾರೆ. ವಿವಾಹವಿರಲಿ, ಗೃಹ ಪ್ರವೇಶವಿರಲಿ ಹೋಮವು ವೈದಿಕ ಹಿಂದೂ ಧರ್ಮದ ಪ್ರಕಾರ ಕಡ್ಡಾಯ. ಸ್ತ್ರೀಯರಿಗೆ ಉಪನಯನ ಸಂಸ್ಕಾರ, ಗಾಯತ್ರಿ ಮಂತ್ರೋಪದೇಶ, ಯಜ್ಞೋಪವೀತಧಾರಣೆ. ಇಲ್ಲ ಎಂಬುದು ಜಗಜ್ಜಾಹೀರಾದ ಸಂಗತಿ. ಇಂಥ ಸಾಮಾನ್ಯ ವಿಷಯವನ್ನು ತಿಳಿಯದಷ್ಟು ಅಜ್ಞರಾಗಿರುವ ಯಲ್ಲಪ್ಪನವರು ಹಿಂದು ಧರ್ಮದ ಅಧಿಕೃತ ವಕ್ತಾರರಂತೆ ಪ್ರಬಂಧ ಬರೆಯಲು ಯತ್ನಿಸಿರುವುದು ದಾರ್ಷ್ಟ್ಯವೇ ಸರಿ.

ಇವರ ಅಪ್ರಬುದ್ಧತೆಗೆ ಅತ್ಯಂತ ಸೂಕ್ತ ಉದಾಹರಣೆ ಮುಂದಿನ ಮಾತು, "ಸೃಷ್ಟಿಕರ್ತನಾದ ಭಗವಂತನು ಒಬ್ಬನೇ ಎಂಬ ಭಾವನೆ ನಮ್ಮ ಸನಾತನ ಸಂಸ್ಕೃತಿಯಲ್ಲಿ ಸ್ಪಷ್ಟವಾಗಿರುವಷ್ಟು ಅನ್ಯ ದೇಶಗಳಲಿಲ್ಲ. ಇತರ ಕಡೆ ಇರುವ ದೇವರ ಭಾವನೆ, ಅವನು ಯಾವುದೋ ಒಂದು ವರ್ಗಕ್ಕೆ, ದೇಶಕ್ಕೆ, ಮತಕ್ಕೆ ಸೇರಿದವನಾಗಿರುವನು.

ದೇವನು ಒಬ್ಬನೇ , ಏಕಂ ಸತ್ ವಿಪ್ರಾಃ ಬಹುಧಾ ವದಂತಿ ಎಂಬ ಮಾತು ಶಾಸ್ತ್ರದಲ್ಲಿ ಉಳಿದು ಚಿತ್ರ, ವಿಚಿತ್ರ ಆಕಾರಗಳನ್ನು ದೇವರು ಎಂದು ಪೂಜಿಸುವ ಮೌಢ್ಯ ಭಾರತದಲ್ಲಿ, ಹಿಂದು ಧರ್ಮ ಹಬ್ಬಿದಲ್ಲಿ ಮಾತ್ರವಿದೆಯೇ ವಿನಾ ಇತರ ದೇಶಗಳಲ್ಲಿಲ್ಲ. ಐರೋಪ್ಯ, ಅಮೇರಿಕಾ, ಅರೇಬಿಯಾ ಇತ್ಯಾದಿ ಎಲ್ಲೆಲ್ಲೂ ದೇವರಿಗೆ ಆಕಾರ ನೀಡಿಲ್ಲ. ಅರಬ್ಬೀ ಭಾಷೆಯಲ್ಲಿ ಅಲ್ಲಹ ಎಂದು, ಹಿಬ್ರೂ ಭಾಷೆಯಲ್ಲಿ ಯಹೋವ ಎಂದು, ಆಂಗ್ಲ ಭಾಷೆಯಲ್ಲಿ God ಎಂದು ಕರೆದು ದೇವರಿಗೆ ಯಾವ ಆಕಾರವನ್ನು ಕೊಡದೆ ಪ್ರಾರ್ಥಿಸುತ್ತಾರೆ. ಮೊಹಮ್ಮದರನ್ನಾಗಲಿ, ಏಸುವನ್ನಾಗಲಿ ಅವರು ಪ್ರವಾದಿಗಳು, ಧರ್ಮ ಸ್ಥಾಪಕರು ಎನ್ನುವರೇ ವಿನಾ ದೇವರು ಎನ್ನುವುದಿಲ್ಲ. ಹನುಮಂತನು ಒಬ್ಬ ಮಹಾಪುರುಷ ಎಂದು ಭಾವಿಸೋಣ; ಅವನಿಗೆ ಕೋತಿಯ ರೂಪವನ್ನೇಕೆ ಕೊಡಬೇಕು? ದಶಾವತಾರಗಳಂತೂ ಅಸಂಬದ್ಧ ಕಲ್ಪನೆ! ವರಾಹ, ಕೂರ್ಮ ಈ ರೂಪಗಳನ್ನೇಕೆ ದೇವರು ಎತ್ತಬೇಕು?

ಇದೊಂದು ಉಕ್ತಿಯನ್ನು ಕೆಲವರು ಸಮನ್ವಯದ ಸೂತ್ರವಾಗಿ ಹೇಳುವರು, ಯಾರು ಶೈವರ ಶಿವನೋ, ವೈಷ್ಣವರ ವಿಷ್ಣುವೋ, ಮೀಮಾಂಸಕರ ಕರ್ಮವೋ, ಬೌದ್ಧರ ಬುದ್ಧನೋ, ಜೈನರ ಜಿನನೋ ನೈಯಾಯಿಕರ ಕರ್ತನೋ ವೇದಾಂತಿಗಳ ಬ್ರಹ್ಮನೋ ಅವನು ಸರ್ವವ್ಯಾಪಿಯಾಗಿರುವನು.

ಬೌದ್ಧರ ಬುದ್ಧ, ಜೈನರ ಜಿನ ಇವರು ಪೂರ್ಣಗೊಂಡ ಮಾನವರೇ ವಿನಾ ಸೃಷ್ಟಿಕರ್ತ ದೇವರಲ್ಲ. ಅದೇ ರೀತಿ ಮೀಮಾಂಸಕರ ಕರ್ಮವನ್ನು ಕರ್ತನಿಗೆ ಹೋಲಿಸಲು ಬರುವುದಿಲ್ಲ. ಕಿವಿಗೆ ಇಂಪಾಗಿ ಕೇಳುವ ಕೆಲವು ಮಾತುಗಳು ತಾತ್ವಿಕ ಒರೆಗಲ್ಲಿಗೆ ನಿಲ್ಲುವುದಿಲ್ಲ ಎಂಬುದನ್ನು ಅರಿಯಬೇಕು.

ಸಮಾರೋಪ : ಹಿಂದು ಸಂತರಿಗೆ, ಸ್ವಾಮಿ ವಿವೇಕಾನಂದರಂತಹ ಪ್ರೌಢ ಮತಿಗಳಿಗೆ ಹಿಂದುದೊಳಗಣ ಆಂತರಿಕ ದೋಷ -ದೌರ್ಬಲ್ಯ ತಿಳಿಯದೆ ಇಲ್ಲ. ಅವನ್ನು ಹೊರ ತೋರಿಸದೆ ಕೇವಲ ಅಧ್ಯಾತ್ಮಿಕ ಸಂದೇಶಗಳನ್ನು ಪ್ರಚಾರ ಮಾಡುವುದು ಅವರಿಗೆ ಅನಿವಾರ್ಯವಾಗುತ್ತದೆ. ಕ್ರಾಂತಿಪುರುಷ ಬಸವಣ್ಣನವರು ಇದರಿಂದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಸಿಗದು ಎಂದು ವೈದಿಕ ಹಿಂದು ಕಕ್ಷೆಯಿಂದ ಹೊರಬಂದು ಹೊಸ ಧರ್ಮ -ಲಿಂಗಾಯತವನ್ನು ಧರ್ಮವಾಗಿ ಕೊಟ್ಟು ಸಮಾಜವನ್ನು ಸರ್ವಾಂಗೀಣವಾಗಿ ಮೇಲೆತ್ತುವ ಪ್ರಯತ್ನ ಮಾಡಿರುವುದು ಗಮನಾರ್ಹ. (ವಿಮರ್ಶೆ ಮುಗಿಯಿತು.)

ಅನುಭವ:

ಪರೋಪಕಾರವೇ ಪಾಪ ! ಪರಪೀಡನೆಯೇ ಪುಣ್ಯ !!

ಸಂಸ್ಕೃತದಲ್ಲಿ ಒಂದು ಪ್ರಸಿದ್ಧ ಉಕ್ತಿ ಇದೆ. ಪುಣ್ಯ -ಪಾಪಗಳೆಂಬವು ಹೇಗೆ ಉಂಟಾಗುತ್ತವೆ ಎಂಬ ಪ್ರಶ್ನೆಗೆ ಒಂದು ಸುಭಾಷಿತ ಹೇಳುತ್ತದೆ. ಪರೋಪಕಾರದಿಂದ ಪುಣ್ಯ, ಪರಪೀಡನೆಯಿಂದ ಪಾಪ. ಇದು ಆ ಕಾಲಕ್ಕೆ ಹೊಂದಿಕೆಯಾಗಿರಬಹುದು, ಈ ಕಾಲಕ್ಕೆ ಹೊಂದುವುದೆ? ಇಲ್ಲ ಎಂಬುದಕ್ಕೆ ನನ್ನೆರಡು ಅನುಭವಗಳು ಸಾಕ್ಷಿಯಾಗುತ್ತವೆ. ಪರೋಪಕಾರ ಮಾಡಿದಾಗ ಮಾಡಿಸಿಕೊಂಡವರು ಪುಣ್ಯವಂತರೇ ಸರಿ ಆದರೆ ಮಾಡಿದವರು ಮಾತ್ರ "ಪಾಪ" ಅನುಭವಿಸಬೇಕಾಗುವುದೇನೋ!

ಒಂದು ದಿನ ಓರ್ವ ಮಹಿಳೆ ಬಂದಳು. ಅತ್ತೂ ಕರೆದು ಗೋಳಾಡ ತೊಡಗಿದಳು. ಅವಳ ಗಂಡ ಕುಡುಕ, ಸ್ತ್ರೀಲೋಲುಪ. ಮೂರು ಮಕ್ಕಳ ಜನನಕ್ಕೆ ಕಾರಣ ಕರ್ತೃವಾಗಿ ಎಲ್ಲೋ ಹಾಳಾಗಿ ಹೋದ. ಪಾಪ, ಈಕೆ ಮನೆಮನೆ ತಿರುಗಿ ಕಸ ಮುಸುರೆ ತೊಳೆದು, ಬಟ್ಟೆ ಒಗೆದು ಹೇಗೋ ಮಕ್ಕಳನ್ನು ಬೆಳೆಸಿದಳು. ದೊಡ್ಡ ಮಗಳು ಸುಮಾರು 16 ವರ್ಷದವಳು. ಆಗ ಎಲ್ಲೋ ಹಾಳಾಗಿ ಹೋಗಿದ್ದ ಪತಿ ಮಹಾಶಯ ಹತ್ತಾರು ಕಾಯಿಲೆಗಳನ್ನು ಬಳುವಳಿಯಾಗಿ ಪಡೆದು ಮತ್ತೆ ಮನೆಗೆ ಬಂದ. ಈಕೆಗೆ ಪುರಾಣಗಳಲ್ಲಿ ಹೇಳಲ್ಪಟ್ಟ ಪತಿವ್ರತೆಯರ ಕಥೆಗಳೆಲ್ಲ ನೆನಪಿಗೆ ಬಂದವು. ರೋಗಿಷ್ಟ ಗಂಡನಿಗಾಗಿ ಖಾಸಗಿಯವರ ಹತ್ತಿರ ಎರಡು, ಮೂರು, ನಾಲ್ಕು, ರೂ ಬಡ್ಡಿ ಮೇಲೆ ಸಾಲ ಪಡೆದು ಉಪಚರಿಸಿದರು. ಅವನು ಹೆಂಡತಿ ಮಕ್ಕಳ ಮೇಲೆ ಸಾಲ ಹೊರಿಸಿ ಸತ್ತು ಹೋದ.

ತಾಯಿ ಮಗಳು ಇಬ್ಬರೂ ಬಟ್ಟೆ ಹೊಲಿಯಲು ಕಲಿತು ದುಡಿಯಲಾರಂಭಿಸಿದ್ದರು. ಬಡ್ಡಿ ಬಹಳ ಇರುವುದರಿಂದ ಹಣ ಕಟ್ಟಿ ಸಾಕಾಗಿದೆ. ಬರೀ ಬಡ್ಡಿಗೇ ಜಮಾ ಆಗುತ್ತದೆ. ಸಾಲ ಹಾಗೆಯೇ ಉಳಿಯುತ್ತದೆ. ಖಾಸಗಿ ಸಾಲಗಾರರು ಮನೆ ಬಾಗಿಲಿಗೆ ಬಂದು ನಿಲ್ಲುತ್ತಾರೆ. ಗಂಡನಿಲ್ಲದ ಸಣ್ಣ ವಯಸ್ಸಿನ ಮಹಿಳೆ, ಮನೆಯಲ್ಲಿ ಚೆಂದಾದ ಮಗಳು ಬೇರೆ. ಹೀಗಾಗಿ ಸದಾ ಭಯದಲ್ಲೇ ಇರುವಂತಾಗಿದೆ. ಶೀಲ ಸಂಪತ್ತನ್ನು ಕಾಯ್ದುಕೊಳ್ಳಬೇಕು ಎಂದರೆ ಇಷ್ಟೆಲ್ಲ ಸಮಸ್ಯೆ ಎಂದಳು. ಕಥೆ ಕೇಳಿ ಕರಳು ಕರಗಿತು. ಸರಿ, ನಾನು ಏನು ಮಾಡಬಹುದು? ಎಂದೆ. ಬೇರೆ ಎಲ್ಲಾದರೂ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡಿಸಿದರೆ ಹೆಚ್ಚಿನ ಬಡ್ಡಿಯ ಖಾಸಗಿ ಸಾಲ ತೀರಿಸುತ್ತೇನೆ. ನಾನು - ನನ್ನ ಮಗಳ ದುಡಿಮೆಯಲ್ಲಿ ಒಬ್ಬರ ಹಣ ನಿತ್ಯ ಬಾಳುವೆಗೆ, ಇನ್ನೊಬ್ಬರ ದುಡಿಮೆ ಸಾಲ ತೀರಿಸಲು ಆಗುತ್ತದೆ" ಎಂದಳು. ಹೆಣ್ಣು ಮಕ್ಕಳ ಸಮಸ್ಯೆ ಎಷ್ಟಿರುವವಲ್ಲ ಎನ್ನಿಸಿತು ನಮ್ಮ ಪರಿಚಯದ ಬ್ಯಾಂಕ್ ಮೇನೇಜರರನ್ನು ಸಂಪರ್ಕಿಸಿದೆವು. ಅವರು "ಹಾಗೆಲ್ಲ ಕೊಡಲು ಬರುವುದಿಲ್ಲ ಭದ್ರತೆಗೆ ಏನಿದೆ? ನೀವು ಜಾಮೀನಾದರೆ ಕೊಡುತ್ತೇವೆ." ಎಂದು ಆಕೆಗೆ ಹೇಳಿದರು. "ಅಮ್ಮಾ, ನೀವು ಜಾಮೀನಾದರೆ ಕೊಡುವರಂತೆ. ನಾವು ನಿಮಗೆ ಮೋಸ ಮಾಡಲ್ಲ ಸಾಲ ತೀರಿಸುತ್ತೇವೆ." ಎಂದಳು. ನಮಗೆ ಎಷ್ಟೋ ಅನುಭವ ಆಗಿವೆ. ಸಾಮಾನ್ಯವಾಗಿ ಸಾಲ ಕೊಟ್ಟ ಹಣ ವಾಪಸ್ಸು ಬರದು, ಸಾಲ ತಗೊಂಡವರೂ ವಾಪಸ್ಸು ಬರರು. ಏಕೆಂದರೆ ಕೊಟ್ಟವ ಕೋಡಂಗಿ ಇಸಕೊಂಡವ ಈರಭದ್ರ ಎನ್ನುತ್ತದೆ ಕನ್ನಡದ ಗಾದೆ. ಆಕೆಯ ಕಣ್ಣೀರು ನೋಡಲಾರದೆ ನಾನು ಜಾಮೀನು ನೀಡಿ ನಲವತ್ತು ಸಾವಿರ ರೂ ಬ್ಯಾಂಕಿನಿಂದ ಕೊಡಿಸಿದೆ. ಹಣ ಸಿಕ್ಕ ದಿನ ಬಂದು ಧನ್ಯವಾದ ಹೇಳಿ ಹೋದವಳು ಮತ್ತೆ ಕಾಣಿಸಿಕೊಳ್ಳಲೇ ಇಲ್ಲ. ಈಗ ಬ್ಯಾಂಕಿನವರು ಹೇಳಿ ಕಳಿಸುವುದರಿಂದ ಕಂತನ್ನು ನಾನೇ ಕಟ್ಟಬೇಕು. ಹಣ ತಗೊಂಡು ಜಂ ಅಂತ ಮಗಳ ಮದುವೆ ಮಾಡಿ, ತಾನು ವಾಸವಾಗಿದ್ದ ಮನೆ ಖಾಲಿ ಮಾಡಿ, ಕೆಲಸ ಮಾಡುತ್ತಿದ್ದ ಗಾರ್ಮೆಂಟ್ಸ್ ಬಿಟ್ಟು ಎಲ್ಲೋ ಹೋಗಿದ್ದಾಳೆ.

ಈ ಘಟನೆಯನ್ನು ಹೇಗೆ ಅರ್ಥೈಸಬೇಕು? ಹಿಂದಿನ ಜನ್ಮದಲ್ಲಿ ಸಾಲ ಪಡೆದಿದ್ದೇನೋ ಈಗ ಅದನ್ನು ತೀರಿಸುವಂತಾಗಿದೆ ಎಂದೆ? ಪರೋಪಕಾರ ಮಾಡುವುದು ಪಾಪದ ಕೆಲಸವೆ? ಜನರ (ಮೊಸಳೆ) ಕಣ್ಣೀರಿಗೆ ಮರುಗದಂತಹ ಕಲ್ಲು ಹೃದಯ ಹೊಂದಬೇಕೆ? ಒಂದು ವೇಳೆ ಏನಾದರೂ ಸಂಕಷ್ಟಕ್ಕೆ ಸಿಕ್ಕಿದ್ದರೆ ಬಂದು ಒಂದು ಮಾತು ಹೇಳಿ ಹೋಗಬಾರದೆ? ಹಣ ಸಿಗುವ ಮೊದಲು ದಿನಕ್ಕೆ ಎರಡು ಬಾರಿ ಫ್ಯಾಕ್ಟರಿಗೆ ಹೋಗುವ ಮೊದಲು ಅಲ್ಲಿಂದ ಬಂದಾದ ಮೇಲೆ ತಪ್ಪದೆ ಬರುತ್ತಿದ್ದಳು. ಹಣ್ಣ ಸಿಕ್ಕ ಮೇಲೆ ನಾಪತ್ತೆ. ಮನುಷ್ಯ ಎಷ್ಟು ಕೃತಘ್ನನಲ್ಲವೆ?

ತಮಗಾಗಿ ಹಣ ಉಂಟು, ಸಾಲ ತೀರಿಸಲು ಇಲ್ಲ

ಇಂಥದೇ ಮತ್ತೊಂದು ಪ್ರಸಂಗ. ಒಬ್ಬ ಹುಡುಗನಿಗೆ ಫ್ರಾನ್ಸ್‌ಗೆ ಹೋಗಲು ವೀಸಾ ಸಿಕ್ಕಿತ್ತು ಟೀಕೆಟ್ ಖರೀದಿಗೆ ಹಣ ಕಡಿಮೆ ಬಂದು ಸಾಲ ಕೊಡಿಸಿರಿ ಬಡ್ಡಿ ಎಷ್ಟಾದರೂ ಸರಿ ಎಂದು ಕಾಲು ಹಿಡಿದರು. 3 ರೂ ಬಡ್ಡಿ ಮೇಲೆ ಕೊಡುವಂಥವರಿಗೆ ನನ್ನ ಜವಾಬ್ದಾರಿ ಹೇಳಿ "ಒಳ್ಳೆಯ ಜನ, ನೀವು ಕೊಡಿರಿ. ಶಿಕ್ಷಣಕ್ಕಾಗಿ ಹೊರಟಿದ್ದಾನೆ." ಎಂದು ಕೊಡಿಸಿದೆ. ಮೊದಮೊದಲು ಬಡ್ಡಿ ಕಟ್ಟಿದರು. ನಂತರ ಬರುಬರುತ್ತಾ ಸಾಲವೂ ಇಲ್ಲ, ಬಡ್ಡಿಯೂ ಇಲ್ಲ. ವಿದ್ಯಾಭ್ಯಾಸವು ಆಯಿತು, ನೌಕರಿಯು ಆಯಿತು,

ಮದುವೆಯೂ ಆಯಿತು. ಮಜಾ ಮಾಡುವುದು ಆಯಿತು. ಎಂಥಾ ಜನರು ಇರುತ್ತಾರೆ? ಕಷ್ಟದಲ್ಲಿ ನೆರವಾದವರನ್ನು ಸುಖ ಬಂದ ತಕ್ಷಣ ಮರೆಯುತ್ತಾರೆ. ಒಂದು ಧರ್ಮ ಸಂಸ್ಥೆಯವರು ಮಧ್ಯೆ ನಿಂತಿದ್ದಾರೆ. ಸಾಲ ತೀರಿಸುವುದರ ಜೊತೆಗೆ ಕಾಣಿಕೆಯನ್ನು ಕೊಡಬೇಕು ಎಂಬ ಕೃತಜ್ಞತಾ ಭಾವವೂ ಇರುವುದಿಲ್ಲ. ಬೇರೆ ಲೇವಾದೇವಿಗಾರರಾದರೆ ಸುಮ್ಮನೆ ಬಿಡುವರೆ? ಮನೆ / ಅಂಗಡಿ ಬಾಗಿಲಲ್ಲಿ ನಿಲ್ಲುತ್ತಾರೆ. ಗುರುಗಳ ಋಣ ತಿನ್ನಬಾರದು ಎಂಬ ಪರಿಜ್ಞಾನವೂ ಅಂಥ ಕೆಲವರಿಗೆ ಇರುವುದಿಲ್ಲ. ಹೀಗಾಗಿ ಕೊಟ್ಟವರು ಕೋಡಂಗಿ ಎಂದುಕೊಂಡು ಸುಮ್ಮನಾಗಬೇಕು ಅಷ್ಟೆ!

ಈ ಎರಡೂ ಪ್ರಸಂಗಗಳಿಂದ ಮಾತಾಜಿ, ಮೃದು ಮನಸ್ಸಿನವರು. ಅತ್ತು ಕರೆದು ಗೋಳಾಡಿದರೆ ಸಾಲ ಪಡೆದುಕೊಳ್ಳಬಹುದು. ಎಂದು ಯಾರಿಗಾದರೂ ಪ್ರೇರಣೆ ಉಂಟಾಗಿದ್ದರೆ ಅದನ್ನು ಕೈಬಿಡಿ. ನನಗೆ ಗೊತ್ತು. ಅನುಭವ ಬಹಳ ತುಟ್ಟಿ (Costly) ಈ ಎರಡೂ ಪ್ರಸಂಗಗಳಿಂದ ಐವತ್ತು ಸಾವಿರ ರೂ ಕಳೆದುಕೊಂಡು ಪಾಠ ಕಲಿತಿರುವುದರಿಂದ ಈ ಮನಸ್ಸು ಕರಗಲು ಬಿಡುವುದಿಲ್ಲ. ಸಾಧ್ಯವಾದರೆ ಎಷ್ಟಾದರೂ ದಾನ ಕೊಟ್ಟು ಹೋಗಿ ಬನ್ನಿ ಎನ್ನುತ್ತೇವೆಯೇ ವಿನಾ ಸಾಲ ಕೊಟ್ಟು ಅಥವಾ ಕೊಡಿಸಿ ಸಾಲವನ್ನು, ಸಾಲ ಪಡೆದವರನ್ನು ಕಳೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. -ಮಾತಾಜಿ

ವಚನ ಕಿರಣ : - ಮಾತಾಜಿ

ಗುರು ಬಸವಣ್ಣನಿಗೆ ಶರಣು

ಬಯಲ ಮೂರ್ತಿಗೊಳಿಸಿದನೊಬ್ಬ ಶರಣ
ಆ ಮೂರ್ತಿಯಲ್ಲಿ ಭಕ್ತಿ ಸ್ವಾಯತವ ಮಾಡಿದನೊಬ್ಬ ಶರಣ
ಆ ಭಕ್ತಿಯನೆ ಸುಜ್ಞಾನಮುಖವ ಮಾಡಿದನೊಬ್ಬ ಶರಣ
ಆ ಸುಜ್ಞಾನವನು ಲಿಂಗಮುಖವಾಗಿ ಮಾಡಿದನೊಬ್ಬ ಶರಣ
ಆ ಲಿಂಗವನೆ ಸರ್ವಾಂಗದಲ್ಲಿ ವೇಧಿಸಿಕೊಂಡನೊಬ್ಬ ಶರಣ
ಆ ಸರ್ವಾಂಗವನೆ ನಿರ್ವಾಣ ಸಮಾಧಿಯಲ್ಲಿ ನಿಲಿಸಿದನೊಬ್ಬ ಶರಣ
ನಾನು ನಿರ್ವಾಣದಲ್ಲಿ ನಿಂದು ಅಗಮ್ಯನಾದೆನೆಂದರೆ
ಭಕ್ತಿಕಂಪಿತನೆನಿಸಿ ಎನ್ನ ತನ್ನಲ್ಲಿಗೆ ಬರಿಸಿಕೊಂಡನೊಬ್ಬ ಶರಣ.

ಲಿಂಗಾಯತ ಧರ್ಮದ ಜೀವಾಳವೇ ಇಷ್ಟಲಿಂಗ; ಇದು ಶ್ರೀಗುರು ಬಸವಣ್ಣನವರಿಗೂ ಪೂರ್ವದಲ್ಲಿ ಸಾಕಾರಗೊಂಡುದಲ್ಲ. ಈ ಇಷ್ಟಲಿಂಗದ ಧಾರಣೆಯಿಂದ ಲಿಂಗಾಯತತ್ವ ಬರುವುದು. ಇಂಥ ಇಷ್ಟಲಿಂಗದ ಬಗ್ಗೆ ಮಹಾಮಹಿಮರಾದ ಅಲ್ಲಮಪ್ರಭುದೇವರು ಹೇಳುವ ಮಾತುಗಳನ್ನು ನೋಡಿರಿ.

1.ಬಯಲ ಮೂರ್ತಿಗೊಳಿಸಿದನೊಬ್ಬ ಶರಣ

ಧರ್ಮಪಿತ ಬಸವಣ್ಣನವರಿಗೂ ಪೂರ್ವದಲ್ಲಿ ಇದ್ದುದು ಸ್ಥಾವರಲಿಂಗೋಪಾಸನೆ. ಅದು ಗಿರಿಜಾ ವಲ್ಲಭ, ಕೈಲಾಸ ಪತಿಯ ಕುರುಹು. ಹೀಗಾಗಿಯೇ ಶಿವದೇವಾಲಯಗಳಲ್ಲಿ ಪಾರ್ವತಿ ಪತಿ ಶಿವನ ವರ್ಣನೆ -ಸ್ತೋತ್ರವನ್ನು ಮಾಡಲಾಗುವುದು. ಆದರೆ, ನಿರಾಕಾರನಾದ ಸೃಷ್ಟಿಕರ್ತನಾದ ಲಿಂಗದೇವನನ್ನು ಅರ್ಥಾತ್ ಬಯಲ ಸ್ವರೂಪಿ ದೇವನನ್ನು ಗೋಳಾಕಾರದ ಇಷ್ಟಲಿಂಗವಾಗಿ ರೂಪುಗೊಳಿಸಿದವರು ಗುರು ಬಸವಣ್ಣನವರು.

2. ಆ ಮೂರ್ತಿಯಲ್ಲಿ ಭಕ್ತಿ ಸ್ವಾಯತವ ಮಾಡಿದನೊಬ್ಬ ಶರಣ

ಬಯಲ ಸ್ವರೂಪಿ ಪರಮಾತ್ಮನನ್ನು ಗೋಳಾಕಾರದ ಇಷ್ಟಲಿಂಗವನ್ನಾಗಿ ಮಾಡಿದ ನಂತರ ಅದರಲ್ಲಿ ಶ್ರದ್ಧೆ -ಭಕ್ತಿಗಳು ನೆಲೆಗೊಳ್ಳುವಂತೆ ತತ್ವಜ್ಞಾನ ಮತ್ತು ಅನುಭಾವವನ್ನು ತುಂಬಿದರು. ಇಷ್ಟಲಿಂಗವು ಕೇವಲ ಧಾರ್ಮಿಕ ಕುರುಹೊಂದೇ ಅಲ್ಲ, ಅದರಲ್ಲಿ ತ್ರಾಟಕ ಯೋಗಾಭ್ಯಾಸಕ್ಕೆ ಅವಕಾಶವಿದೆ.

3. ಆ ಭಕ್ತಿಯನೆ ಸುಜ್ಞಾನಮುಖವ ಮಾಡಿದನೊಬ್ಬ ಶರಣ

ಇಷ್ಟಲಿಂಗ ಕುರಿತಾದ ಭಕ್ತಿ ಕೇವಲ ಶ್ರದ್ಧೆಯಿಂದ ಕೂಡಿದ್ದಲ್ಲ. ಅದು ಜ್ಞಾನಾತ್ಮಕವಾದುದು. ಕೆಲವರು ದೇವರಲ್ಲಿ ಭಯಭಕ್ತಿ ಇರಬೇಕು ಎನ್ನುವರು. ಬಸವ ಧರ್ಮದಲ್ಲಿ ಭಕ್ತಿಯು ಭಯ ಮಿಶ್ರಿತವಾದುದಲ್ಲ ಪ್ರೀತಿಯಿಂದ ಕೂಡಿದುದು. ದೇವರು ಇಲ್ಲಿ ಭಯೋತ್ಪಾದಕನಲ್ಲ. ಒಡೆಯನಾಗಿ

ಸೇವಕನನ್ನು ಆದರಿಸುವಂತೆ, ತಂದೆಯಾಗಿ ಮಕ್ಕಳನ್ನು ಪ್ರೀತಿಸುವಂತೆ, ಪತಿಯಾಗಿ ಪತ್ನಿಯನ್ನು ಪ್ರೇಮಿಸುವಂತೆ ಲಿಂಗದೇವನು ಭಕ್ತನನ್ನು ಪ್ರೀತಿಸುವನು. ಭಕ್ತಿಯೂ ಮೂಢಭಕ್ತಿಯಾಗದೆ ಸುಜ್ಞಾನಯುಕ್ತವಾಗಿದ್ದಾಗ ಮಾತ್ರ ದೇವರ ಒಲುಮೆಯನ್ನು ಪಡೆದುಕೊಳ್ಳಲು ಸಾಧ್ಯ ಎಂಬುದಾಗಿ ಗುರು ಬಸವಣ್ಣನವರು ಪ್ರತಿಪಾದಿಸಿದರು.

4. ಆ ಸುಜ್ಞಾನವನು ಲಿಂಗಮುಖವಾಗಿ ಮಾಡಿದನೊಬ್ಬ ಶರಣ

ಲಿಂಗಧಾರಣೆ ಎಂದರೆ ಇಷ್ಟಲಿಂಗವನ್ನು ಧರಿಸುವ ಕ್ರಿಯೆ. ಇದನ್ನಷ್ಟೆ ಮಾಡಿದರೆ ಭಕ್ತಿಯು ಪರಿಪೂರ್ಣವಾಗದು. ಇಷ್ಟಲಿಂಗವೆಂಬ ಕುರುಹು ಹಿಡಿದು ಪರಮಾತ್ಮನೆಂಬ ಧ್ಯೇಯವನ್ನು ಅರಿಯಬೇಕು. ಸಾಕಾರವಾದ ಗಡಿಯಾರದ ಮೂಲಕ ನಿರಾಕಾರವಾದ ಸಮಯವನ್ನು ತಿಳಿಯುವಂತೆ, ಸಾಕಾರವಾದ ಇಷ್ಟಲಿಂಗದಿಂದ ನಿರಾಕಾರ ಸ್ವರೂಪನಾದ ಲಿಂಗದೇವನ ದಿವ್ಯಾನುಗ್ರಹ, ಜ್ಞಾನ ಮತ್ತು ಅನುಭಾವವನ್ನು ಪಡೆಯಬೇಕು.

5. ಆ ಲಿಂಗವನೆ ಸರ್ವಾಂಗದಲ್ಲಿ ವೇಧಿಸಿಕೊಂಡನೊಬ್ಬ ಶರಣ

ಲಿಂಗತತ್ವವನ್ನು ಅಂದರೆ ದಿವ್ಯತ್ವ (Divinity)ವನ್ನು ಸರ್ವಾಂಗದಲ್ಲಿಯೂ ಅಳವಡಿಸಿಕೊಂಡರು ಬಸವಣ್ಣನವರು. ವ್ಯಕ್ತಿಯ ಒಂದು ಅಂಗವು ದೈವೀಕರಣಗೊಂಡರೆ ಸಾಲದು ಎಲ್ಲ ಅಂಗಗಳೂ ದೈವೀಕರಣಗೊಳ್ಳಬೇಕು. ದೇಹವು ಸ್ನಾನದಿಂದ ಶುಚಿಯಾದರೆ ಕಾಯಕದಿಂದ ಶುದ್ಧವಾಗುವುದು, ಪೂಜಾದಿ ಆಚಾರ ಕ್ರಿಯೆಗಳಿಂದ ದಿವ್ಯವಾಗುವುದು. ಮನಸ್ಸು ಸಚ್ಚಿಂತನೆಯಿಂದ ಶುದ್ಧವಾದರೆ ದೇವಧ್ಯಾನದಿಂದ ದಿವ್ಯವಾಗುವುದು. ಬುದ್ಧಿಯು ಸುಜ್ಞಾನದಿಂದ ದೈವೀಕರಣಗೊಳ್ಳುವುದು. ಹೀಗೆ ಪಂಚ ಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯ್ರ, ಪಂಚ ಪ್ರಾಣಗಳು, ಅಂತಃಕರಣಗಳು ಎಲ್ಲವೂ ದೈವೀಕರಣಗೊಳ್ಳಬೇಕು. ಇದನ್ನು ಗುರು ಬಸವಣ್ಣನವರು ಸಾಧಿಸಿದರು.

6. ಆ ಸರ್ವಾಂಗವನೆ ನಿರ್ವಾಣ ಸಮಾಧಿಯಲ್ಲಿ ನಿಲಿಸಿದನೊಬ್ಬ ಶರಣ

ಸಮಾಧಿ ಸ್ಥಿತಿಯನ್ನು ಪಡೆಯಲು ವ್ಯಕ್ತಿಯು ಗುಡ್ಡ ಬೆಟ್ಟ ಕಾನನ ಗುಹೆಗಳನ್ನು ಹುಡುಕಬೇಕಾಗಿಲ್ಲ, ತಾನಿದ್ದಲ್ಲಿಯೇ ಅದನ್ನು ಸಾಧಿಸಬಹುದೆಂದು ಬಸವಣ್ಣನವರು ಜಗತ್ತಿಗೆ ತೋರುವಂತೆ, ಕಲಿಸುವಂತೆ ನಿರ್ವಾಣ ಸಮಾಧಿಯ ಸ್ಥಿತಿಯನ್ನು ಹೊಂದಿದ್ದಾರೆ. ಎಲ್ಲವನ್ನೂ ಬಿಡಿಸಿಕೊಂಡು ಏಕಾಂತವಾಸಿಯಾಗಿ ಮನಸ್ಸನ್ನು ಸಮಾಧಿ ಸ್ಥಿತಿಯಲ್ಲಿ ನಿಲ್ಲಿಸುವುದು ಜಡ ಸಮಾಧಿಯಾದರೆ; ಲೋಕದ ಕಾಯಕ -ಕರ್ತವ್ಯ ಮಾಡುತ್ತಲೇ ದಿವ್ಯಾನುಭೂತಿಯ ಸ್ಥಿತಿಯನ್ನು ಹೊಂದಿ ಭಕ್ತ ಸ್ಥಲದಿಂದ ಐಕ್ಯ ಸ್ಥಲದವರೆಗೆ ಸಾಗಿ ಪುನಃ ಲಿಂಗಸ್ಥಲದಲ್ಲಿ ನಿಂತು ಲೋಕೋದ್ಧಾರದ ಕಾಯಕದಲ್ಲಿ ನಿರತವಾಗುವುದು ಚೈತನ್ಯ ಸಮಾಧಿ. ಇದನ್ನು ಧರ್ಮಪಿತರು ಸಾಧಿಸಿದ್ದರು.

7.ನಾನು ನಿರ್ವಾಣದಲ್ಲಿ ನಿಂದು ಅಗಮ್ಯನಾದೆನೆಂದರೆ
ಭಕ್ತಿಕಂಪಿತನೆನಿಸಿ ಎನ್ನ ತನ್ನಲ್ಲಿಗೆ ಬರಿಸಿಕೊಂಡನೊಬ್ಬ ಶರಣ.

ನಾನು ಅತ್ಯಂತ ಹೆಚ್ಚಿನ ಸಮಾಧಿಯನ್ನು ತಲ್ಪಿ ಉಳಿದೆಲ್ಲರಿಗಿಂತ ಮೇಲಿನ ಸ್ಥಿತಿಯಲ್ಲಿದ್ದೆನೆಂಬ (ಅಹಂ) ಭಾವ ಹೊಂದಿರುವಾಗ ಬಸವಣ್ಣನವರ ಭಕ್ತಿಯ ಲೀಲಾವಿಲಾಸಕ್ಕೆ ಮನಸೋತು ಭಕ್ತಿ ಕಂಪಿತನಾಗಿ ಸೆಳೆಯಲ್ಪಟ್ಟು ತನ್ನ ಬಳಿಗೆ ಬರುವಂತೆ ಮಾಡಿಕೊಂಡರು ಬಸವಣ್ಣನವರು. ಅಧ್ಯಾತ್ಮಿಕವಾಗಿ ಉನ್ನತ ಹಂತವನ್ನು ತಲ್ಪಿದ್ದರೂ ಭಕ್ತಿ-ವಿನಯ ಮುಂತಾದ ಗುಣಗಳಿಂದ ನನ್ನಂತಹ ಬಿಗುವಿನ ವ್ಯಕ್ತಿಯನ್ನು ಸಹ ತಮ್ಮಲ್ಲಿಗೆ ಬರುವಂತೆ ಮಾಡಿಕೊಂಡ ಹೃದಯವಂತರು ಬಸವಣ್ಣನವರು.

ಇಂತಹ ಮಹಾಮಹಿಮ ಬಸವಣ್ಣನಿಗೆ ಶರಣೆಂದು ನಮಿಸಿ ನಾನು ಧನ್ಯನಾದೆ, ಪರಿಪೂರ್ಣನಾದೆ ಎಂದು ವಿರಕ್ತಮೂರ್ತಿ ಅಲ್ಲಮಪ್ರಭುದೇವರು ಕೊಂಡಾಡುತ್ತಾರೆ. ಈ ವಚನವು ಅನೇಕ ಮಹತ್ವಪೂರ್ಣ ಸಂಗತಿಗಳನ್ನು ಪ್ರತಿಪಾದಿಸುತ್ತದೆ.

1. ನಿರಾಕಾರನಾದ ಬಯಲ ಸ್ವರೂಪಿ ಪರಮಾತ್ಮನಿಗೆ ಸಾಕಾರ ರೂಪ ಕೊಟ್ಟವರು ಬಸವಣ್ಣನವರು.
2. ಗುರು ಬಸವಣ್ಣನವರು ನವ ಧರ್ಮ ದ್ರಷ್ಟಾರರು ಮಾತ್ರವಲ್ಲ ಅಸಾಮಾನ್ಯ ಸಿದ್ಧ ಪುರುಷರು, ಯೋಗಿಗಳು, ಅನುಭಾವಿಗಳು.
3. ಲೋಹ ಚುಂಬಕ ವ್ಯಕ್ತಿತ್ವ ಹೊಂದಿದ್ದ ಬಸವಣ್ಣನವರು ಎಂತಹ ಬಿಗುಮಾನದವರನ್ನೂ ಭಕ್ತಿ ಕಂಪಿತರನ್ನಾಗಿ ಮಾಡಿ ತಮ್ಮೆಡೆಗೆ ಸೆಳೆದುಕೊಳ್ಳುತ್ತಿದ್ದರು.
4. ಇಂತಹ ಮಹಾಗುರು ಬಸವಣ್ಣನವರಿಗೆ ಶರಣೆಂದು ನಾವು (ನೀವೆಲ್ಲ) ಉದ್ಧಾರವಾದೆವು.


॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಮೈಸೂರು ನಗರದಲ್ಲಿ

ವಿಶ್ವಗುರು ಬಸವಣ್ಣನವರ
813ನೆಯ ಲಿಂಗೈಕ್ಯ ದಿನಾಚರಣೆ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ



ಭಾನು (ದೇವ)ವಾರ ದಿ. 27-7-2008 ರಂದು
ಬೆಳಿಗ್ಗೆ 10-30

ಮೈಸೂರು ನಗರದ
ರಂಗಾಚಾರ್ಲು ಪುರಭವನದಲ್ಲಿ (ಟೌನ್ ಹಾಲ್)

ಸರ್ವರಿಗೂ ಆದರದ ಸುಸ್ವಾಗತ

ಪ್ರಾಯೋಜಕರು:
ರಾಷ್ಟ್ರೀಯ ಬಸವ ದಳ
ಮೈಸೂರು

ಸಂಪರ್ಕಿಸುವ ವಿಳಾಸ :
ರಾಷ್ಟ್ರೀಯ ಬಸವ ದಳ, ಬಸವ ಕೃಪಾ
ಮ.ಸಂ.948, 2ನೇ ಮುಖ್ಯರಸ್ತೆ 1ನೇ ಅಡ್ಡರಸ್ತೆ
ಲಕ್ಷ್ಮೀಪುರಂ, ಮೈಸೂರು -570004
ದೂರವಾಣಿ -9449887373

ವಿಶ್ವಗುರು ಬಸವಣ್ಣನವರ 813ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ:ರಂಗಾಚಾರ್ಲು ಪುರಭವನ, ಮೈಸೂರು,

ದಿ.27-7-2008, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 813ನೆಯ ಲಿಂಗೈಕ್ಯ ದಿನವು ಬುಧ (ಚನ್ನ) ವಾರ ದಿ.6-8-2008ರಂದು ಒದಗಿ ಬಂದಿದೆ.

ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ ಅವರು ದಿವ್ಯ ಸನ್ನಿಧಿ ವಹಿಸಲು ಸಮಯವನ್ನು ಕೊಟ್ಟಿರುವ ಕಾರಣ ಮೈಸೂರು ರಾಷ್ಟ್ರೀಯ ಬಸವ ದಳವು ದಿ.27-7-2008ರಂದೇ ಬಸವ ಲಿಂಗೈಕ್ಯ ಸಂಸ್ಮರಣೆ ಏರ್ಪಡಿಸಿದೆ.

ಅನೇಕ ಮಠಾಧೀಶರು, ಗಣ್ಯರು ಮತ್ತು ರಾಜಕೀಯ ಧುರೀಣರು ಅತಿಥಿಗಳಾಗಿ ಆಗಮಿಸುತ್ತಿರುವರು. ಎಲ್ಲ ಸಹೃದಯರು ಕುಟುಂಬ ಪರಿವಾರ ಸಹಿತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಕೋರುತ್ತೇವೆ. ಕಾರ್ಯಕ್ರಮದ ನಂತರ ಗಣ ಪ್ರಸಾದ (ಊಟ) ವನ್ನು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಸಹೃದಯರು ತನು -ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ವಿಶೇಷ ಮನವಿ : ಬಸವ ಕಲ್ಯಾಣದಲ್ಲಿ ವಿಶ್ವಗುರು ಬಸವಣ್ಣನವರ 108 ಅಡಿ ಪುತ್ಥಳಿಯ ನಿರ್ಮಾಣ ಕಾರ್ಯವನ್ನು ಪೂಜ್ಯ ಮಾತಾಜಿಯವರು ಕೈಗೆತ್ತಿ ಕೊಂಡಿದ್ದು, ಕೆಲಸವು ಭರದಿಂದ ಸಾಗಿದೆ. ಉದಾರವಾಗಿ ಪ್ರಸುತ್ತ ಕಾರ್ಯಕ್ಕೆ ದೇಣಿಗೆ ನೀಡಬೇಕೆಂದು ಸಹೃದಯರಲ್ಲಿ ಕೋರುತ್ತೇವೆ. ಪೂಜ್ಯರ ಕೈಯಲ್ಲಿ ಸಲ್ಲಿಸಿ ಆಶೀರ್ವಾದ ಪಡೆಯಬಹುದು. ನಮ್ಮ ಕೈಯಲ್ಲಿ ನೀಡಿ ರಸೀತಿಯನ್ನುಪಡೆಯಲೂ ಅವಕಾಶ ಉಂಟು.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಸಮಾಜ ಸೇವಾರತ್ನ ಶರಣ.ಕೆ.ಎಂ.ಶಿವಶಂಕರ್, ಗೌರವಾಧ್ಯಕ್ಷರು	ಶರಣ.ಡಾ॥ಎಸ್.ಗೋಪಾಲ್ ಅಧ್ಯಕ್ಷರು,	ಶರಣೆ. ಸರೋಜಮ್ಮ ನಾಗರಾಜು ಪ್ರಧಾನ ಕಾರ್ಯದರ್ಶಿ

ಶ್ರಾವಣ ಮಾಸದಲ್ಲಿ ಮನೆ ಮನೆಗೆ ಬಸವ ಜ್ಯೋತಿ

ಧರ್ಮದ ಕಡೆಗೆ ಜನ ಬರದಾಗ ಧರ್ಮವನ್ನೇ ಅವರ ಮನೆ -ಮನಗಳ ಬಳಿ ಒಯ್ಯಬೇಕು ಎಂಬ ಬಸವ ಧರ್ಮದ ಪೀಠದ ಸಂದೇಶದಂತೆ ರಾಷ್ಟ್ರೀಯ ಬಸವ ದಳಗಳವರು ಶ್ರಾವಣ ಮಾಸದಲ್ಲಿ ಬಸವ ಜ್ಯೋತಿ ಕಾಯಕ್ರಮವನ್ನು ಸಂಜೆಯ ವೇಳೆಯಲ್ಲಿ ಬೇರೆ ಬೇರೆಯವರ ಮನೆಗಳಲ್ಲಿ ನಡೆಸಬೇಕು. ದಿ.1-8-2008ರಂದು ಶ್ರಾವಣ ಅಮವಾಸ್ಯೆ. ದಿ. 2-8-2008ರಂದು ಶ್ರಾವಣ ಪ್ರತಿಪದೆ. ಅಂದು ಪ್ರಾರಂಭ ಮಾಡಿ ದಿ.3-9-2008 ಗಣೇಶ ಚೌತಿಯಂದು ಸಮಾರೋಪ ಮಾಡಬೇಕು. ಅಂದು ಲಿಂ॥ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಜಯಂತಿಯನ್ನು, ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಶ್ರಾವಣ ಮಾಸ-ಶರಣ ಮಾಸ

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಅಶುಭವಲ್ಲ ಶುಭವೂ ಅಲ್ಲ ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಶ್ರಾವಣ ಮಾಸವು ಶ್ರವಣ ಮಾಸವಾಗುವುದು ಮಾತ್ರವಲ್ಲ ಶರಣ ಮಾಸವೇ ಆಗುತ್ತದೆ.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು, ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಬಸವ ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಕಾಲ ಬಸವಣ್ಣನವರ ವಚನಗಳನ್ನು ಬೆಳಿಗ್ಗೆ 54 ಸಂಜೆ 54ರ ಂತೆ ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ಹೊಸೂರಿನಲ್ಲಿ ಪೂಜ್ಯ ಮಾತೆ ಗಂಗಾದೇವಿಯವರ ಪ್ರವಚನ ಮುಕ್ತಾಯ

ತಮಿಳು ನಾಡಿನ ಗಡಿ ಜಿಲ್ಲೆ ಕೃಷ್ಣಗಿರಿಯ ಪಟ್ಟಣ ಹೊಸುರು ಕನ್ನಡ -ತಮಿಳೂ ತೆಲಗು ಭಾಷೆಗಳ ತ್ರಿವೇಣಿ ಸಂಗಮ. ಈ ನಗರದ ಮಧ್ಯ ಭಾಗದಲ್ಲಿರುವ ಸುಜ್ಞಾನ ಪ್ರಭು ಮಠದ ಪ್ರಾರ್ಥನಾ ಮಂದಿರಲ್ಲಿ ದ್ವಿತೀಯ ಮಹಿಳಾ ಜಗದ್ಗುರು ಮಾತೆ ಗಂಗಾದೇವಿಯವರು 36 ದಿವಸಗಳ ಕಾಲ ವೀರವಿರಾಗಿಣಿ ಅಕ್ಕಮಹಾದೇವಿ ಕುರಿತು ವಿಶ್ವಧರ್ಮ ಪ್ರವಚನವನ್ನು ನಡೆಸಿಕೊಟ್ಟರು. ದಿ.28-5-2008ರಂದು ಆರಂಭವಾದ ಪ್ರವಚನವು ದಿ.2-7-2008ರಂದು ಮುಕ್ತಾಯಗೊಂಡಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮುಕ್ತಾಯ ಸಮಾರಂಭದ ದಿವ್ಯ ಸನ್ನಿಧಿಯನ್ನು ವಹಿಸಿದ್ದರು.

ವಚನ ದುಂದುಭಿ -16

- ಶರಣ ಸಚ್ಚಿದಾನಂದ ಚಟನಳ್ಳಿ

1. "ಮನಸ್ಸಂಚಲ" ಎಂದರೇನು?
2. "ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?" ಇದು ಯಾರ ವಚನದ ನುಡಿ?
3. "ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವ ಮಾಡಿ ಗಂಗೆಯೊಳು ಮುಳುಗಿದರೇನು?" ಇದು ಯಾರ ವಚನಗಳ ಸಾಲು?
4. ಮರದೊಳಗೆ ಉರಿಯದಂತಿರುವ ಮಂದಾಗ್ನಿಯನ್ನು ಶರಣರು ಯಾವುದಕ್ಕೆ ಹೋಲಿಸಿದ್ದಾರೆ?
5. "ಎನ್ನ ಕಂಗಳ ಮುಂದಣ ಕಾಮವ ಕಳೆದು ನಿಮ್ಮ ಮಂಗಳ ರೂಪವ ತೋರಿಸಯ್ಯಾ" ಅಕ್ಕನ ಈ ವಚನವನ್ನು ಪೂರ್ತಿಗೊಳಿಸಿ.
6. ಮಾರಾರಿ ಎಂದರೇನು? ಯಾರನ್ನು ಈ ಹೆಸರಿನಿಂದ ಕರೆಯುತ್ತಾರೆ?
7. ಪಂಚಗವ್ಯ ಎಂದರೇನು? ಪಂಚಗವ್ಯಗಳು ಯಾವುವು?
8. ಪಂಚ ಬ್ರಹ್ಮರು ಯಾರು ಯಾರು?
9. ಭಾವ ಸಮಾಧಿ ಎಂದರೇನು?
10. ಗುರು ಬಸವಣ್ಣನವರ ವಚನದಲ್ಲಿ ಬರುವ ಭಾವಕರು-ಈ ಶಬ್ದದ ಅರ್ಥವೇನು?
11. 'ಮಾರಂಕ' ಈ ಪದದ ಅರ್ಥವೇನು?
12. ಸುಯಿಧಾನ ಸುಗ್ರಂಥ ಮಾಲೆಯ ಪ್ರಥಮ ಪುಸ್ತಕ ಯಾವುದು? ಇದನ್ನು ಯಾರು ಬರೆದಿದ್ದಾರೆ?
13. ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು ಯಾವ ಊರಿನಲ್ಲಿ ಪ್ರವಚನ ಮಾಡುತ್ತಿರುವಾಗ ಲಿಂಗೈಕ್ಯರಾದರು?
14. "ಆನೆಯ ಜರಿದು ಕೋಣವನೇರಿದರೆ ಆರೇನು ಮಾಡುವರು.." ಇದು ಯಾರ ವಚನ?
15. ಐಘಟದೂರ ರಾಮೇಶ್ವರಲಿಂಗ ಇದು ಯಾರ ವಚನಾಂಕಿತ?

ವಚನ ದುಂದುಭಿ -15ರ ಸರಿ ಉತ್ತರಗಳು

1. ಅಕ್ಕ ಮಹಾದೇವಿ
2. ಶರಣರ ಮನ ನೋಯ ನುಡಿದೆನಾಗಿ ಹರಜನ್ಮವಳಿದು ನರಜನ್ಮಕ್ಕೆ ಬಂದೆನು. ಹರನಟ್ಟಿದ ಬೆಸನ ಶಿರದೊಳಗಾಂತೊಡೆ ಗಿರಿಗಳ ಭಾರವೆನಗಾದುದಯ್ಯ. ಚೆನ್ನಮಲ್ಲಿಕಾರ್ಜುನನ ಧರ್ಮದಿಂದ ಸಂಸಾರ ಕರ್ಮದ ಹೊರೆಯನಿಳುಹಿ ನಡುದೊರೆಯ ಹಾಯ್ದು ಹೋದೆನು.
3. ಗುಮ್ಮೇಶ್ವರ 4. ಕೂಡಲ ಸಂಗಮದೇವರಲ್ಲಿ ಬಸವಣ್ಣ
5. ಏನಿ ಬಂದಿರೆ ಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ? ಕುಳ್ಳಿರೆಂದರೆ ನೆಲ ಕುಳಿಹೋಹುದೆ? ಒಡನೆ ನುಡಿದರೆ ಶಿರ ಹೊಟ್ಟೆ ಒಡೆಯುವುದೆ? ಕೊಡಲಿಲ್ಲದಿರ್ದಡೊಂದು ಗುಣವಿಲ್ಲದಿರ್ದೊಡೆ ಕೆಡಹಿ ಮೂಗ ಕೊಯ್ವ ನಮ್ಮ ಲಿಂಗದೇವ
6. ಸರ್ವಜ್ಞ 7. ಅವರ ಸಹಪಾಠಿ ಚೆನಕನು ಕಾಲು ಜಾರಿ ಕೊಳದಲ್ಲಿ ಬಿದ್ದಾಗ ಈಜಿ ಅವನನ್ನು ಕಾಪಾಡಿರುವ ಘಟನೆ. 8. ಬೀದರ ಜಿಲ್ಲೆಯ ಬಸವ ಕಲ್ಯಾಣ 9. ಮಾಯಿದೇವಿ
10. ಸುಜ್ಞಾನಿದೇವ 11. ತಳವಾರ ಕಾಮಿದೇವಯ್ಯ 12. ಗುರು ಬಸವಣ್ಣನವರ ವಚನ
13. ಅಲ್ಲಮ ಪ್ರಭುದೇವರು ಗುರು ಬಸವಣ್ಣನವರಿಗೆ. 14. ಶರಣ ಪರಂಪರೆ
15. ಅಂಗದ ಮೇಲೆ ಲಿಂಗ ಧರಿಸಿದವರೆಲ್ಲರು ಸಮಾನರು ಎಂದು ತಿಳಿದು, ಜಾತಿ, ವರ್ಣ, ವರ್ಗ ಮತ್ತು ಲಿಂಗಭೇದ ಮಾಡದೆ ಇರುವುದೇ ಶಿವಾಚಾರ.

ವಚನ ದುಂದುಭಿ -14ರ ಸರಿ ಉತ್ತರ ಕೊಟ್ಟವರು

1. ಕವಿತಾ ಕಿರಣ ಭದ್ರಾವತಿ
2. ಹೆಚ್ ಚಂದ್ರಿಕಾ, ಭದ್ರಾವತಿ
3. ಹೆಚ್ ಶಾಂತಮ್ಮ, ಭದ್ರಾವತಿ.
4. ಸುಮ ರಾಜು, ಭದ್ರಾವತಿ
5. ಸರೋಜನಿ.ಎಸ್, ಕಣಬರ್ಗಿ
6. ನಿರ್ಮಲಾ, ಬೆಂಗಳೂರು



ಭದ್ರಾವತಿಯ ಶಾಸಕ ಶ್ರೀ.ಸಂಗಮೇಶರವರಿಗೆ ರಾ.ಬ.ದಳ ವತಿಯಿಂದ ನಡೆದ ಸತ್ಕಾರ ಸಮಾರಂಭ.








ತಮಿಳುನಾಡಿನ ಹೊಸೂರಿನಲ್ಲಿ ನಡೆದ ವಿಶ್ವ ಧರ್ಮ ಪ್ರವಚನ ಮುಕ್ತಾಯ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಶರಣ ಕೋಟೀಶ್ವರ್.



ನೋಡು ನೋಡು ಲಿಂಗವೆ ಎಂದು ಹಾಡುತ್ತಲೇ ಇಚ್ಛಾಮರಣಿಯಾಗಿ ಲಿಂಗೈಕ್ಯರಾದ ತಾಯಿ ನೀಲಾಂಬಿಕೆಯವರು. 813ನೆಯ ಲಿಂಗೈಕ್ಯ ಸಂಸ್ಮರಣೆ. ದಿ.7-8-2008 ರಂದು







ಶಿವಮೊಗ್ಗದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಇಂಧನ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು

G/KA-BGW-50/2006-2008 WPP(W)-1 No. 1998/70